بِسْمِ اللهِ الرَّحْمٰنِ الرَّحِيْمِ    نَحْمَدُهٗ وَنُصَلِّيْ عَلٰى رَسُوْلِهِ الْكَرِيْمِ    وَعَلٰى عَبْدِهِ الْمَسِيْحِ الْمَوْعُوْدِ

وَلَقَدْ نَصَرَكُمُ اللّٰهُ بِبَدْرٍ وَّاَنْتُمْ اَذِلَّةٌ

# ಕನ್ನಡ ಬದರ್ ವಾರ ಪತ್ರಿಕೆ

WEEKLY BADAR QADIAN KANNADA

ವರ್ಷ: 04

ಸಂಚಿಕೆ: 47

ವಾರ್ಷಿಕ ಶುಲ್ಕ ರೂ.600/-

ಸಂಪಾದಕರು: ತಾರಿಖ್ ಅಹ್ಮದ್ ಇದ್ರೀಸ್.

23 ನವೆಂಬರ್ 2023, 23 ನಬುವ್ವತ್ 1402 ಹಿಜರಿ ಶಮ್ಸಿ,
08 ಜಮಾದಿಉಲ್ ಅವ್ವಲ್ 1445 ಹಿಜರಿ ಖಮರಿ.


## ಅಹ್ಮದಿಯಾ ವಾರ್ತೆ

ಅಲ್‌ಹಮ್ದುಲಿಲ್ಲಾಹ್! ಹುಝೂರ್ ಅನ್ವರ್ ಅಯ್ಯದಹುಲ್ಲಾಹುತಆಲ ಬಿನಸ್ರಿಹಿಲ್ ಅಝೀಝ್‌ರವರು ಆರೋಗ್ಯವಾಗಿದ್ದಾರೆ. ಹುಝೂರ್ ರವರ ಯೋಗಕ್ಷೇಮಕ್ಕಾಗಿ, ಶುಭಕಾರ್ಯಗಳಲ್ಲಿ ಯಶಸ್ಸುಗಳಿಸಲಿಕ್ಕಾಗಿ ದುಆ ಮಾಡುತ್ತಾ ಇರಿ, ಅಲ್ಲಾಹನು ಹುಝೂರ್ ರವರನ್ನು ಪ್ರತಿಕ್ಷಣ ಸಂರಕ್ಷಿಸಲಿ– ಆಮೀನ್

اَللّٰهُمَّ اَيِّدْ اِمَامَنَا بِرُوْحِ الْقُدُسِ وَبَارِكْ لَنَا فِيْ عُمُرِهٖ وَاَمْرِهٖ

## ಅಲ್ಲಾಹನ ಉಪದೇಶ

وَلَقَدْ صَرَّفْنَا فِيْ هٰذَا الْقُرْاٰنِ لِلنَّاسِ مِنْ كُلِّ مَثَلٍ ؕ وَكَانَ الْاِنْسَانُ اَكْثَرَ شَيْءٍ جَدَلًا

(ಅಲ್ ಕಹಫ್: 55)

ಅಂದರೆ: ನಾವು ಈ ಖುರ್‌ಆನಿನಲ್ಲಿ ಮನುಷ್ಯರಿಗೋಸ್ಕರ ಎಲ್ಲ ಉದಾಹರಣೆಗಳನ್ನು ವಿವರಿಸಿದ್ದೇವೆ. ಮನುಷ್ಯನಾದರೋ ಹೆಚ್ಚು ಕಲಹಶೀಲನಾಗಿದ್ದಾನೆ.

## ಪ್ರವಾದಿ ಮುಹಮ್ಮದ್[ಸ] ರವರ ಉಪದೇಶ

### ಪವಿತ್ರ ಖುರ್‌ಆನ್ ಏಳು ವಿಧಗಳಲ್ಲಿ ಅವತೀರ್ಣಗೊಂಡಿದೆ ಅದರಿಂದ ಅನುಕೂಲವಾದುದನ್ನು ನೀವು ಪಠಿಸಿರಿ

**(2419)** ಹಝ್ರತ್ ಉಮರ್ ಬಿನ್ ಖತ್ತಾಬ್(ರ) ಅವರು ವರದಿ ಮಾಡುತ್ತಾರೆ ಅವರು ಹೇಳುತ್ತಾರೆ: ನಾನು ಹಝ್ರತ್ ಹಿಶಾಮ್ ಬಿನ್ ಹಕೀಮ್ ಬಿನ್ ಹಿಝಾಮ್(ರ) ಅವರಿಗೆ ನಾನು ಪಠಿಸುವ ವಿಧಾನಕ್ಕಿಂತ ವಿಭಿನ್ನ ರೀತಿಯಲ್ಲಿ ಸೂರಾ ಫುರ್ಖಾನ್ ಅನ್ನು ಪಠಿಸುವುದನ್ನು ಆಲಿಸಿದೆ. ಮತ್ತು ಅದನ್ನು (ಸೂರಾ) ಹಝ್ರತ್ ಪೈಗಂಬರ್(ಸ) ರವರು ನನಗೆ ಪಠಿಸಿದ್ದರು. ಮತ್ತು ನಾನು ಅವರ ಮೇಲೆ ದಾಳಿ ಮಾಡಬಹುದಿತ್ತು, ಆದರೆ ನಾನು ಅವರಿಗೆ ನಮಾಝನ್ನು ಸಂಪೂರ್ಣವಾಗಿ ನಿರ್ವಹಿಸುವ ತನಕ ಬಿಡುವು ನೀಡಿದೆ. ತದನಂತರ, ನಾನು ಅವರು ಧರಿಸಿದ್ದ ಮೇಲಂಗಿಯನ್ನು ಹಿಡಿದು ಎಳೆದು ಹಝ್ರತ್ ಪೈಗಂಬರ್(ಸ) ಅವರ ಕರೆತಂದು ಹೇಳಿದೆ: ನಾನು (ಸೂರತ್ ಅಲ್–ಫುರ್ಕಾನ್) ಅನ್ನು ನೀವು(ಸ) ನನಗೆ ಕಲಿಸಿದ ವಿಧಾನಕ್ಕೆ ವಿರುದ್ಧವಾಗಿ ಅದನ್ನು ಬೇರೆ ರೀತಿಯಲ್ಲಿ ಪಠಿಸುವುದನ್ನು ನಾನು ಕೇಳಿದ್ದೇನೆ. ಅದಕ್ಕೆ ಹಝ್ರತ್ ಪೈಗಂಬರ್(ಸ) ರವರು ನನಗೆ ಉದ್ದೇಶಿಸಿ ಹೇಳಿದರು: ಅವರನ್ನು ಬಿಟ್ಟುಬಿಡಿ. ನಂತರ ಅವರು(ಸ) ಅವರಿಗೆ ಹೇಳಿದರು: ಓದಿ. ಅದಕ್ಕೆ ಅವನು ಓದಿದನು. ಅವರು(ಸ) ಹೇಳಿದರು: ಅದೇ ರೀತಿ ಅವತೀರ್ಣಗೊಂಡಿದೆ. (ಆಗ ಅವರು ಹೇಳಿದರು:) ಪವಿತ್ರ ಖುರ್‌ಆನ್ ಏಳು ವಿಧಗಳಲ್ಲಿ ಅವತೀರ್ಣಗೊಂಡಿದೆ. ನಿಮಗೆ ಯಾವುದು ಸುಲಭವೋ ಹಾಗೆಯೇ ಪಠಿಸಿರಿ. **(ಸಹೀಹ್ ಬುಖಾರಿ, ಸಂಪುಟ–4, ಕಿತಾಬ್ ಅಲ್–ಖುಸುಮತ್, 2008 ಖಾದಿಯಾನ್ ಪ್ರಕಟಿತ)**


***ವಿಶೇಶ ಸೂಚನೆ*** "ಬದರ್" ವಾರಪತ್ರಿಕೆಯ ಚಂದಾದಾರರಲ್ಲಿ ತಮ್ಮ ಬಾಕಿ ಇರುವ ವಾರ್ಷಿಕ ಶುಲ್ಕವನ್ನು ಶೀಘ್ರವೇ ಪಾವತಿಸಲು ವಿನಂತಿ. ಮೊಬೈಲ್ ಸಂಖ್ಯೆ: 9866358609 (ವ್ಯವಸ್ಥಾಪಕರು)


ನಾನು ನಿಮಗೆ ಉಪದೇಶ ಮಾಡುತ್ತೇನೆ, ನೀವು ಅಬುಬಕರ್[ರ] ರೀತಿಯ ವಿಶ್ವಾಸ ಹೊಂದಿರಿ, ಅವರಲ್ಲಿ ಸದ್ಭಾವ ಮತ್ತು ಸಹನೆಯಿದೆ. ಅದು ಹಲವು ಕಾರುಣ್ಯಗಳಿಗೆ ಮತ್ತು ಫಲಗಳಿಗೆ ಕಾರಣವಾಗಿದೆ. ದುಷ್ಟಾಂತಗಳನ್ನು ನೋಡಿ ವಿಶ್ವಾಸ ತರುವುದು ವಿಶ್ವಾಸವನ್ನು ಷರತ್ತಿಗೆ ಒಳಪಡಿಸಿದಂತಾಗುತ್ತದೆ. ಇದು ದುರ್ಬಲ ವಿಶ್ವಾಸ ಎಂದಾಗುತ್ತದೆ ಮತ್ತು ಅದು ಸಾಮಾನ್ಯವಾಗಿ ಫಲಕಾರಿಯಾಗಿರುವುದಿಲ್ಲ.

## ಸಯ್ಯದುನಾ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಅಧ್ಯಾಪನೆಗಳು

### ಹಝ್ರತ್ ಅಬೂಬಕರ್ (ರ) ರವರ ವಿಶ್ವಾಸ

ಬರೆಯಲಾಗಿದೆ, ಅವರು ವ್ಯಾಪಾರದಿಂದ ಹಿಂದಿರುಗಿದಾಗ ಮತ್ತು ಇನ್ನು ಮಕ್ಕಾಗೆ ತಲುಪಿರಲಿಲ್ಲ, ಅವರಿಗೆ ದಾರಿಯಲ್ಲಿಯೇ ಒಬ್ಬ ವ್ಯಕ್ತಿಯನ್ನು ಭೇಟಿಯಾದರು. ಏನಾದರೂ ಹೊಸ ಸುದ್ದಿ ಹೇಳು ಎಂದು ಅವನೊಡನೆ ಕೇಳಿದರು. ಹೊಸ ಸುದ್ದಿ ಏನು ಇಲ್ಲ, ಆದರೆ ನಿಮ್ಮ ಸ್ನೇಹಿತ ಪ್ರವಾದಿತ್ವದ ವಾದವನ್ನು ಮಂಡಿಸಿರುವುದು ಖಚಿತವಾದ ವಿಷಯವಾಗಿದೆ ಎಂದು ಹೇಳಿದನು. ಅಬೂಬಕರ್(ರ) ಅಲ್ಲಿಯೇ ನಿಂತು ಹೇಳಿದರು ಅವರು ಇದನ್ನು ಹೇಳಿಕೊಂಡರೆ ಅದು ಸತ್ಯವಾಗಿದೆ. ಅವರು ಮಕ್ಕಾವನ್ನು ತಲುಪಿದಾಗ ಹಝ್ರತ್ ಪೈಗಂಬರ್(ಸ) ರವರಿಗೆ ಭೇಟಿಯಾದಾಗ ಕೇಳಿದರು. ನೀವು ನಿಜವಾಗಿಯೂ ಪ್ರವಾದಿತ್ವದ ದಾವೆಯನ್ನು ಸಾರಿರುವರೆ? ಅದಕ್ಕೆ ಅವರು(ಸ) ಹೇಳಿದರು. ಹೌದು ಅದೇ ಸಮಯಕ್ಕೆ ಅಬೂಬಕರ್(ರ) ಇಸ್ಲಾಂ ಧರ್ಮವನ್ನು ಸ್ವೀಕರಿಸಿದರು. ಹಝ್ರತ್ ಅಬೂಬಕರ್ ಸಿದ್ದೀಖ್ (ರ) ರವರಿಗೆ ಇಸ್ಲಾಂ ಧರ್ಮ ಸ್ವೀಕರಿಸಲು ಯಾವುದೇ ಪವಾಡದ ಅಗತ್ಯವಿರಲಿಲ್ಲ. ವೈಯಕ್ತಿಕ ಪರಿಚಯ ಹೊಂದಿದವರಿಗೆ ಪವಾಡಗಳ ಇಚ್ಛೆ ಇರುವುದಿಲ್ಲ. ಪರಿಚಯ ಇಲ್ಲದವರು ಪವಾಡಗಳನ್ನು ಇಚ್ಛಿಸುತ್ತಾರೆ. ಅದೇ ಕಾರಣದಿಂದ ಹಝ್ರತ್ ಅಬೂಬಕರ್ ಸಿದ್ದೀಖ್(ರ) ಪವಾಡವನ್ನು ಬೇಡಲಿಲ್ಲ, ಏಕೆಂದರೆ ಅವರು ಹಝ್ರತ್ ರಸೂಲುಲ್ಲಾಹ್(ಸ) ರವರ ಪರಿಸ್ಥಿತಿಯ ಬಗ್ಗೆ ಚೆನ್ನಾಗಿ ತಿಳಿದಿದ್ದರು. ಹಝ್ರತ್ ಪೈಗಂಬರ್(ಸ) ಅವರು ಪ್ರಾಮಾಣಿಕರು, ಸತ್ಯವಂತರು, ಸುಳ್ಳುಗಾರರಲ್ಲ ಎಂಬುದನ್ನು ಚೆನ್ನಾಗಿ ಬಲ್ಲವರಾಗಿದ್ದರು. ಹೀಗಿರುವಾಗ ಯಾರು ಯಾವ ಮನುಷ್ಯನೊಡನೆ ಸುಳ್ಳು ಹೇಳುವುದಿಲ್ಲವೋ ಆತನು ಅಲ್ಲಾಹನ ವಿಷಯದಲ್ಲಿ ಸುಳ್ಳು ಹೇಳುವ ಧೈರ್ಯ ಮಾಡಲು ಸಾಧ್ಯವಿಲ್ಲ.

ಹಾಗಾಗಿ ಅವನು ಸುಳ್ಳು ಹೇಳಿರುವ ಸಾಧ್ಯತೆಯ ಭಯದಿಂದ ಮಾತ್ರ ದೃಷ್ಟಾಂತಗಳನ್ನು ಕೇಳಲಾಗುತ್ತದೆ ಎಂದು ನೆನಪಿನಲ್ಲಿಡಬೇಕು, ಆದರೆ ದಾವೆ ಮಾಡುವವನು ಪ್ರಾಮಾಣಿಕ ಮತ್ತು ವಿಶ್ವಾಸಾರ್ಹ ಎಂದು ತಿಳಿದಾಗ, ನಂತರ ದೃಷ್ಟಾಂತದ ಅಗತ್ಯವಿಲ್ಲ. ಅದೇ ರೀತಿಯಲ್ಲಿ ಯಾರು ಒತ್ತಾಯಪೂರಕವಾಗಿ ದೃಷ್ಟಾಂತಗಳನ್ನು ನೋಡಲು ಉತ್ಸುಕರಾಗಿರುವವರು ದೃಢವಾದ ನಂಬಿಕೆಯುಳ್ಳವರಾಗಲು ಸಾಧ್ಯವಿಲ್ಲ ಬದಲಿಗೆ ಅವರಿಗೆ ಯಾವಾಗಲೂ ಅಪಾಯ ಕಾದಿರುತ್ತದೆ. ಎಂಬುದನ್ನು ಸಹ ನೆನಪಿನಲ್ಲಿಡಬೇಕು. ಅದೃಶ್ಯಗಳ ಮೇಲೆ ನಂಬಿಕೆಯ ಫಲಗಳಿಂದ ವಂಚಿತನಾಗಿರುತ್ತಾನೆ. ಯಾರು ದೃಷ್ಟಾಂತಗಳಿಗಾಗಿ ಆತುರಪಡುತ್ತಾರೆ ಮತ್ತು ಒತ್ತಾಯ ಮಾಡುತ್ತಾರೆ ಅವರು ನಂಬಿಕೆಯ ಫಲಗಳಿಂದ ವಂಚಿತರಾಗುತ್ತಾರೆ. ಈಸಾ ಮಸೀಹ್ (ಅ) ರ ಶಿಷ್ಯಂದಿರು ಪವಿತ್ರ ಆಹಾರಕ್ಕಾಗಿ ಒತ್ತಾಯಪಡಿಸಿದ ಕಾರಣ ಅವರಿಗೆ ಎಚ್ಚರಿಸಿದನು ಮತ್ತು ಹೇಳಿದನು. ನಾವು ಪವಿತ್ರ ಆಹಾರ ಅವತರಿಸುವೆವು ಆದರೆ ಅವತರಿಸಿದ ನಂತರ ಅದನ್ನು ನಿರಾಕರಿಸಿದರೆ ಘೋರ ಶಿಕ್ಷೆ ಅನುಭವಿಸುವಿರಿ. ಪವಿತ್ರ ಖುರ್‌ಆನ್‌ನಲ್ಲಿ ಇದರ ವಿವರ ನೀಡಿದ ಪ್ರಯೋಜನವೇನೆಂದರೆ, ಉತ್ತಮ ನಂಬಿಕೆಯ ಲಕ್ಷಣಗಳೇನು ಎಂದು ತಿಳಿಸುವುದಾಗಿದೆ. ವಾಸ್ತವದಲ್ಲಿ ಅಲ್ಲಾಹನ ದೃಷ್ಟಾಂತಗಳು ಸ್ಪಷ್ಟವಾಗುತ್ತವೆ. ಆದರೆ ಅದರ ಉದ್ದೇಶ ವಿಷಯ ಬದ್ಧತೆಯನ್ನು ಸಾರುವುದಾಗಿರುತ್ತದೆ ಮತ್ತು ಇನ್ನೊಂದೆಡೆ ಸಮುದಾಯದ ಪರೀಕ್ಷೆಯಾಗಿರುತ್ತದೆ. ಆದ್ದರಿಂದ ಕೆಲವು ದೃಷ್ಟಾಂತ ಬಯಸುವವರು ಆತುರಪಡುವವರಾದರೆ ಸದ್ಭಾವನೆ ಹೊಂದಿಲ್ಲ ಎಂದಾದರೆ ಅವರಲ್ಲಿ ಸಂಶಯ ಪ್ರವೃತ್ತಿ ಉಂಟಾಗುತ್ತದೆ ಮತ್ತು ಅನರ್ಥ ಅನಾವಶ್ಯಕ ವಿವರಗಳನ್ನು ನೀಡತೊಡಗುತ್ತಾರೆ, ಅದನ್ನು ಮಂತ್ರ ವೇದ ಎನ್ನುತ್ತಾರೆ. ಅಥವಾ ಏನೇನೆಲ್ಲ ಹೆಸರು ಕೊಡುತ್ತಾರೆ. ಅಂತೂ ಸಂಶಯ ಪ್ರವೃತ್ತಿ ಅವರಿಗೆ ಸತ್ಯದಿಂದ ದೂರ ಮಾಡುತ್ತದೆ. ಆದುದರಿಂದ ನಾನು ನಿಮಗೆ ಉಪದೇಶ ಮಾಡುತ್ತೇವೆ. ನೀವು ಅಬೂಬಕರ್‌ರಂತಹ ಹಾಗೂ ಸಹಾಬರಂತಹ ನಂಬಿಕೆಯನ್ನು ಹೊಂದಿರಿ. ಏಕೆಂದರೆ ಅವರಲ್ಲಿ ಸದ್ಭಾವನೆ ಮತ್ತು ಸಹನೆಯಿತ್ತು. ಆದ್ದರಿಂದ ಅವರು ಉತ್ತಮ ಫಲಗಳನ್ನು ಪಡೆದರು. ದೃಷ್ಟಾಂತಗಳನ್ನು ನೋಡಿ ವಿಶ್ವಾಸ ತರುವುದು ವಿಶ್ವಾಸಕ್ಕೆ ಷರತ್ತು ಒಡ್ಡಿದಂತಾಗುತ್ತದೆ. ಇದು ದುರ್ಬಲ ವಿಶ್ವಾಸವಾಗಿರುತ್ತದೆ. ಅದು ಪರಿಣಾಮಕಾರಿಯಾಗಿರುವುದಿಲ್ಲ. ಹೌದು ಮನುಷ್ಯನು ನಿಷ್ಠೆಯನ್ನು ಹೊಂದಿ ನಂಬಿಕೆ ಇಟ್ಟರೆ ಅಲ್ಲಾಹನು ಇಂತಹ ಸತ್ಯವಿಶ್ವಾಸಿಗನಿಗೆ, ಅವನ ನಂಬಿಕೆ ದೃಢವಾಗುವಂತಹ ದೃಷ್ಟಾಂತಗಳನ್ನು ತೋರಿಸುತ್ತಾನೆ. ಅದು ಅವರ ಮನಸ್ಸಿಗೆ ತೃಪ್ತಿಯನ್ನು ನೀಡುತ್ತದೆ. ಸ್ವಯಂ ಅವರು ಅಲ್ಲಾಹನ ದೃಷ್ಟಾಂತವಾಗಿರುತ್ತಾರೆ. ಅದೇ ಕಾರಣದಿಂದ ಇಂತಹ ದೃಷ್ಟಾಂತ ಯಾವ ಪ್ರವಾದಿಯು ತೋರಿಸಲಿಲ್ಲ. ಸತ್ಯವಿಶ್ವಾಸಿಯೂ ದೃಷ್ಟಾಂತದ ಮೇಲೆ ತನ್ನ ನಂಬಿಕೆ ಆಧಾರ ಇಡುವುದಿಲ್ಲ.

**(ಮಲ್ಫೂಝಾತ್, ಸಂಪುಟ–1, ಪುಟ–496 ಮುದ್ರಣ 2018 ಖಾದಿಯಾನ್)**

# ಖುತ್‌ಬ ಜುಮುಅ

ನಮ್ಮ ಬಳಿ ಇರುವುದು ಪ್ರಾರ್ಥನೆಯ ಆಯುಧವಾಗಿದೆ. ಆದ್ದರಿಂದ ಈ ಸಂಬಂಧವಾಗಿ ಪ್ರತಿಯೊಬ್ಬ ಅಹ್ಮದಿಯು ಹಿಂದೆಂದಿಗಿಂತಲೂ ಹೆಚ್ಚು ದುಆ ಮಾಡಬೇಕು.

ಹಝ್ರತ್ ಆಯಿಷಾ(ರ) ಹೇಳಿದರು: ವಿವಾಹದ ನಂತರ ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿವ ಸಲ್ಲಮ್ ಅವರು ಹೇಳಿದರು, ನಾನು ನಿಮ್ಮನ್ನು ಮದುವೆಯಾಗುವ ಮೊದಲು ನನಗೆ ಕನಸಿನಲ್ಲಿ ಎರಡು ಬಾರಿ ತೋರಿಸಲಾಗಿದೆ. ದೇವದೂತರು ನಿಮ್ಮನ್ನು ರೇಷ್ಮೆಯ ಒಂದು ತುಂಡಿನಲ್ಲಿ ಒಯ್ಯುತ್ತಿರುವುದನ್ನು ನಾನು ನೋಡಿದೆನು.

ಸ್ಪಷ್ಟವಾದ ವಿಷಯವೇನೆಂದರೆ ಆಯಿಷಾ(ರ) ಅವರನ್ನು ವಿವಾಹವಾದಾಗ ವಯಸ್ಸಿನ ಕುರಿತು ಅಲ್ಲಿಯ ಜನರಲ್ಲಿ ಯಾವುದೇ ವಿಚಿತ್ರವಾದ ವಿಷಯ, ಪ್ರಶ್ನೆ ಅಥವಾ ಆಕ್ಷೇಪಣೆ ಏನೂ ಉದ್ಭವಿಸಲಿಲ್ಲ.

**ಹಝ್ರ‌ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: (ವಿವಾಹ ಸಮಯದಲ್ಲಿ) ಹಝ್ರ‌ರತ್ ಆಯಿಶ(ರ)ರಿಗೆ ಒಂಬತ್ತು ವರ್ಷ ಪ್ರಾಯವಾಗಿತ್ತು ಎಂದು ಹೇಳುವುದು ಆಧಾರರಹಿತ ಮಾತಾಗಿದೆ.**

ಯುದ್ಧದ ಸಮಯದಲ್ಲಿಯೂ ಮಹಿಳೆಯರು, ಮಕ್ಕಳು ಅಥವಾ ಯಾವುದೇ ರೀತಿಯಲ್ಲಿ ಯುದ್ಧದಲ್ಲಿ ಭಾಗವಹಿಸದ ಯಾರನ್ನೂ ಕೊಲ್ಲಲು ಇಸ್ಲಾಂ ಅನುಮತಿಸುವುದಿಲ್ಲ. ಈ ಸಂಗತಿಯನ್ನು ಹಝ್ರ‌ರತ್ ಪೈಗಂಬರ್(ಸ) ಬಹಳ ಒತ್ತುನೀಡಿ ನಿರ್ದೇಶಿಸಿದ್ದಾರೆ.

ಇಂತಹ ಪರಿಸ್ಥಿತಿಗಳಲ್ಲಿ, ಮುಸ್ಲಿಂ ರಾಷ್ಟ್ರಗಳು ಕನಿಷ್ಠ ಪಕ್ಷ ಎಚ್ಚರಗೊಳ್ಳಬೇಕು. ತಮ್ಮಲ್ಲಿರುವ ಭಿನ್ನಾಭಿಪ್ರಾಯಗಳನ್ನು ತೊಲಗಿಸಿ ಏಕತೆಯನ್ನು ಸ್ಥಾಪಿಸಬೇಕು. ಇದೇ ಲೋಕದಿಂದ ಅಶಾಂತಿಯನ್ನು ದೂರ ಮಾಡುವ ಮಾರ್ಗವಾಗಬಹುದು. ನ್ಯಾಯದ ಅವಶ್ಯಕತೆಗಳನ್ನು ಪೂರೈಸಲು ಮತ್ತು ಪೀಡಿತರ ಹಕ್ಕುಗಳನ್ನು ಪೂರೈಸಲು ಅವರು ಒಗ್ಗೂಡಬೇಕು ಮತ್ತು ಶಕ್ತವಾದ ಧ್ವನಿಯನ್ನು ಎತ್ತಬೇಕು. ಒಂದಾದರೆ ಮತ್ತು ಒಗ್ಗಟ್ಟಾಗಿ ಇರುವುದಾದರೆ ಅವರ ಧ್ವನಿಯ ಹಿಂದೆ ಶಕ್ತಿಯೂ ಇರುತ್ತದೆ. ಇಲ್ಲದಿದ್ದರೆ ಅಮಾಯಕ ಮುಸಲ್ಮಾನರ ಜೀವಹಾನಿಗೆ ಈ ಮುಸ್ಲಿಂ ಸರಕಾರಗಳೇ ಹೊಣೆಯಾಗಬೇಕಾಗುವುದು.

**ಹಝ್ರತ್ ಆಯೊಷಾ(ರ) ಅವರೊಂದಿಗೆ ಹಝ್ರತ್ ಪೈಗಂಬರ್(ಸ) ಅವರ ವಿವಾಹ ಹಾಗೂ ಹಝ್ರತ್ ಆಯಿಷಾ(ರ)ರವರ ವಯಸ್ಸಿನ ಬಗ್ಗೆ ಎತ್ತುವ ಆಕ್ಷೇಪಗಳಿಗೆ ಉತ್ತರ ಮತ್ತು ಹಝ್ರತ್ ಝೈನಬ್(ರ) ಅವರ ಮದೀನಾ ಹಿಜ್ರತ್ತಿನ ಬಗ್ಗೆ ವಿವರಾತ್ಮಕ ಪ್ರಸ್ತಾವನೆ**

ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಇಸ್ಲಾಮಾಬಾದ್ (ಯು.ಕೆ) ಯ **'ಮಸ್ಜಿದ್ ಮುಬಾರಕ್'** ನಿಂದ **13–10–2023** ರಂದು ನೀಡಿದ **ಖುತ್‌ಬ ಜುಮುಅ**

أَشْهَدُ أَنْ لَّا إِلٰهَ إِلَّا اللّٰهُ وَحْدَهٗ لَا شَرِيْكَ لَهٗ وَأَشْهَدُ أَنَّ مُحَمَّدًا عَبْدُهٗ وَرَسُوْلُهٗ

أَمَّا بَعْدُ فَأَعُوْذُ بِاللّٰهِ مِنَ الشَّيْطٰنِ الرَّجِيْمِ - بِسْمِ اللّٰهِ الرَّحْمٰنِ الرَّحِيْمِ

اَلْحَمْدُ لِلّٰهِ رَبِّ الْعَالَمِيْنَ۔ اَلرَّحْمٰنِ الرَّحِيْمِ۔ مٰلِكِ يَوْمِ الدِّيْنِ۔

إِيَّاكَ نَعْبُدُ وَإِيَّاكَ نَسْتَعِيْنُ۔ اِهْدِنَا الصِّرَاطَ الْمُسْتَقِيْمَ۔

صِرَاطَ الَّذِيْنَ أَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّآلِّيْنَ۔

ಹಝ್ರ‌ರತ್ ಪೈಗಂಬರ್(ಸ)ರ ಜೀವಿತ ಕಾಲದಲ್ಲಿ ಬದ್ರ್ ಯುದ್ಧಕ್ಕೆ ಸಂಬಂಧಪಟ್ಟ ಅಥವಾ ಬದ್ರ್ ಮೈದಾನದಿಂದ ಮರಳಿ ಬರುವಾಗ ನಡೆದ ಕೆಲವು ಘಟನೆಗಳಿಗೆ ಸಂಬಂಧಪಟ್ಟ ಪ್ರಸ್ತಾಪ ನಡೆಯುತ್ತಿತ್ತು. ಈ ಘಟನೆಗಳಲ್ಲಿ ಹಝ್ರ‌ರತ್ ಆಯಿಶ(ರ)ರೊಂದಿಗೆ ಹಝ್ರ‌ರತ್ ಪೈಗಂಬರ್(ಸ)ರ ವಿವಾಹದ ಪ್ರಸ್ತಾಪ ಸಹ ಇದೆ. ಆದ್ದರಿಂದ ಇಲ್ಲಿ ಅದರ ಪ್ರಸ್ತಾಪ ಕೂಡ ಮಾಡುತ್ತೇನೆ. ಉಮ್ಮುಲ್ ಮೂಅ್‌ಮಿನೀನ್ ಹಝ್ರ‌ರತ್ ಖದೀಜ(ರ)ರ ನಿಧನದ ನಂತರ ಒಂದು ದಿನ ಹಝ್ರ‌ರತ್ ಪೈಗಂಬರ್(ಸ)ರ ಸನ್ನಿಧಿಯಲ್ಲಿ ಹಝ್ರ‌ರತ್ ಉಸ್ಮಾನ್ ಬಿನ್ ಮಝ್‌ಊನ್(ರ)ರ ಪತ್ನಿಯಾದ ಹಝ್ರ‌ರತ್ ಖೌಲ ಬಿನ್ತ್ ಹಕೀಂ(ರ) ಹಾಜರಾಗಿಕೊಂಡು ಹೇಳಿದರು: ಯಾ ರಸೂಲ್ಲಾಹ್! ನೀವು ವಿವಾಹ ಮಾಡುವುದಿಲ್ಲವೇ? ಯಾರೊಂದಿಗೆ ಎಂದು ಹಝ್ರ‌ರತ್ ಪೈಗಂಬರ್(ಸ) ಕೇಳಿದರು. ಹಝ್ರ‌ರತ್ ಖೌಲ(ರ) ಹೇಳಿದರು: ನೀವು ಬಯಸುವುದಾದರೆ, ಕನ್ಯೆಯರೂ ಇರುವರು ವಿಧವೆಗಳೂ ಇರುವರು. ಇದರ ಕುರಿತು ಹಝ್ರ‌ರತ್ ಪೈಗಂಬರ್(ಸ) ಹೆಚ್ಚಿನ ವಿವರಣೆ ಕೇಳಿದಾಗ ಕನ್ಯೆಯರಲ್ಲಿ ಹಝ್ರ‌ರತ್ ಆಯಿಶ ಬಿನ್ತ್ ಅಬೂಬಕರ್(ರ)ರ ಹೆಸರನ್ನು ಮತ್ತು ವಿಧವೆಯರಲ್ಲಿ ಸೌದ ಬಿನ್ತ್ ಝುಮ್‌ಅ(ರ)ರ ಹೆಸರನ್ನು ಹಝ್ರ‌ರತ್ ಖೌಲ(ರ) ಹೇಳಿದರು. ಹಝ್ರ‌ರತ್ ಪೈಗಂಬರ್(ಸ) ಹೇಳಿದರು: ಹೋಗು, ಈ ಇಬ್ಬರ ಮನೆಯವರೊಡನೆ ನನ್ನ ಕುರಿತು ಮಾತನಾಡು. ಹಝ್ರತ್ ಪೈಗಂಬರ್(ಸ) ಅವರ ಅನುಮತಿ ಪಡೆದ ನಂತರ ಹಝ್ರತ್ ಖೌಲಾ(ರ) ಅಲ್ಲಿಂದ ಹೊರಟು ಹಝ್ರತ್ ಅಬೂಬಕರ್ ಸಿದ್ದೀಕ್(ರ) ಅವರ ಮನೆಗೆ ಮೊದಲು ಹಝ್ರತ್ ಆಯಿಷಾ(ರ) ಅವರ ಸಂಬಂಧದ ಬಗ್ಗೆ ಮಾತನಾಡಲು ಹೋದರು. ಹಝ್ರತ್ ಅಬುಬಕರ್(ರ) ಮನೆಯಲ್ಲಿ ಇರಲಿಲ್ಲ, ಆದರೆ ಅವರ ಪತ್ನಿ ಹಝ್ರತ್ ಉಮ್ ರುಮಾನ್(ರ) ಉಪಸ್ಥಿತರಿದ್ದರು. ಹಝ್ರತ್ ಖೌಲಾ(ರ) ಅವರೊಂದಿಗೆ ಮಾತನಾಡಿದರು ಮತ್ತು ಅವರನ್ನು ಅಭಿನಂದಿಸುತ್ತಾ, ಉಮ್ಮ್ ರುಮಾನ್! ಸರ್ವಶಕ್ತನಾದ ಅಲ್ಲಾಹನು ನಿಮ್ಮನ್ನು ತುಂಬಾ ಅನುಗ್ರಹಿಸಿದ್ದಾನೆ. ಅದಕ್ಕೆ ಅವರು ಕೇಳಿದರು ಆ ಉತ್ತಮ ಅನುಗ್ರಹ ಯಾವುದು? ಅದಕ್ಕೆ ಹಝ್ರತ್ ಖೌಲಾ(ರ) ಹೇಳಿದರು ನನಗೆ ಹಝ್ರತ್ ಪೈಗಂಬರ್(ಸ) ಅವರು ಹಝ್ರತ್ ಆಯಿಷಾ(ರ)ರೊಂದಿಗೆ ವಿವಾಹದ ಸಂಬಂಧದ ಸಂದೇಶವನ್ನು ಕಳುಹಿಸಿರುವರು. ಅದಕ್ಕೆ ಉಮ್ ರುಮಾನ್(ರ) ಹೇಳಿದರು ಅಬುಬಕರ್(ರ) ಬರುವವರೆಗೆ ಕಾಯಿರಿ. ಸ್ವಲ್ಪ ಸಮಯ ಕಾಯುವ ನಂತರ ಹಝ್ರತ್ ಅಬೂಬಕರ್ ಸಿದ್ದೀಕ್(ರ) ಮನೆಗೆ ಬಂದರು, ಹಝ್ರತ್ ಖೌಲಾ(ರ) ಅವರು ಉಮ್ ರುಮಾನ್ ಅವರಿಗೆ ಹೇಳಿದಂತೆಯೇ ಹೇಳಿದರು. ಹಝ್ರತ್ ಅಬೂಬಕರ್ ಸಿದ್ದಿಕ್(ರ) ಕೇಳಿದರು, ಖೌಲಾ, ಆ ಅನುಗ್ರಹದಾಯಕ ಸುದ್ದಿ ಯಾವುದು? ನನಗೆ ತಿಳಿಸಿ. ಅದಕ್ಕೆ ಖೌಲಾ(ರ) ಹೇಳಿದರು ನನಗೆ ಹಝ್ರತ್ ಪೈಗಂಬರ್(ಸ) ಆಯಿಷಾ(ರ)ರೊಂದಿಗೆ ವಿವಾಹ ಸಂದೇಶದೊಂದಿಗೆ ಕಳುಹಿಸಿದ್ದಾರೆ. ಇದನ್ನು ಕೇಳಿದ ಹಝ್ರತ್ ಅಬೂಬಕರ್ ಸಿದ್ದೀಕ್(ರ), "ಆಯಿಷಾಳೊಂದಿಗೆ ನಿಮ್ಮ ಮದುವೆ ಸರಿಯೇ? ಅವಳು ನಿಮ್ಮ ಸಹೋದರನ ಮಗಳಾಗಿದ್ದಾಳೆ" ಎಂದು ಹೇಳಿದರು. ಅವರು ಹೀಗೆ ಆಲೋಚಿಸಿದಾಗ ಹಝ್ರತ್ ಖೌಲಾ(ರ) ಹಝ್ರತ್ ಪೈಗಂಬರ್(ಸ) ಅವರ ಬಳಿಗೆ ಹಿಂದಿರುಗಿ ಹಝ್ರತ್ ಅಬೂಬಕರ್ ಸಿದ್ದೀಕ್(ರ) ಅವರು ಹೇಳಿದ್ದನ್ನು ಅವರಿಗೆ ಹೇಳಿದರು, ಅದಕ್ಕೆ ಹಝ್ರತ್ ಪೈಗಂಬರ್(ಸ) ಅವರು ಅವರ ಬಳಿ ಹಿಂದಿರುಗಿ ಹೇಳಿ: ನಾನು ಇಸ್ಲಾಂನಲ್ಲಿ ನಿಮ್ಮ ಸಹೋದರ. ಮತ್ತು ನೀವು ನನ್ನ ಸಹೋದರ. ಷರಿಯ್ಯತ್ತಿನ ಪ್ರಕಾರ ನಾನು ನಿಮ್ಮ ಮಗಳನ್ನು ಮದುವೆಯಾಗಬಹುದು. ಇದರಲ್ಲಿ ಯಾವುದೇ ತಡೆ ಇಲ್ಲ. ಹೀಗೆ ಹಝ್ರತ್ ಖೌಲಾ(ರ) ಹಿಂತಿರುಗಿ ಹಝ್ರತ್ ಅಬೂಬಕ್ಕರ್ ಸಿದ್ದೀಕ್(ರ) ಹೀಗೆ ಹೇಳಿದಾಗಿ ಅವರು ಹೇಳಿದರು, ನಿರೀಕ್ಷಿಸಿ.

ಅವರು ಹೊರಗೆ ಹೋದರು. ಹಝ್ರತ್ ಉಮ್ಮು ರುಮಾನ್(ರ) ಅವರು ಮುತ್‌ಅಮ್ ಬಿನ್ ಆದಿ ತಮ್ಮ ಪುತ್ರನನ್ನು ಆಯಿಷಾಗೆ ಉಲ್ಲೇಖಿಸಿದ್ದಾರೆ ಎಂದು ಹೇಳಿದರು. ಅಲ್ಲಾಹನ ಆಣೆ! ಅಬೂಬಕರ್ ಅವರು ಎಂದಿಗೂ ಯಾವ ವಾಗ್ದಾನವನ್ನು ಉಲ್ಲಂಘಿಸಲಿಲ್ಲ. ಆದ್ದರಿಂದ ಹಝ್ರತ್ ಅಬೂಬಕರ್ ಮುತ್‌ಆಮ್ ಬಿನ್ ಆದಿಯ ಬಳಿಗೆ ಹೋದರು ಮತ್ತು ಅವರ ಪತ್ನಿ ಉಮ್ಮುಲ್–ಫಾತಿ ಕೂಡ ಅವರೊಂದಿಗೆ ಇದ್ದರು. ಈ ಮಹಿಳೆ ಹೇಳಿದರು, ಓ ಇಬ್ನ್ ಕಹಾಫಾ! ನಮ್ಮ ಮಗನನ್ನು ನಾವು ನಿಮ್ಮ ಮಗಳಿಗೆ ವಿವಾಹ ಮಾಡಿಕೊಟ್ಟರೆ ಬಹುಶಃ ನೀನು ಅವನನ್ನು ನೀನು ಸೇರಿದ ಧರ್ಮಕ್ಕೆ ಪರಿವರ್ತಿಸುವೆ. ಅದಕ್ಕೆ ಹಝ್ರತ್ ಅಬೂಬಕರ್(ರ) ಅವರು ಮುತ್‌ಅಮ್ ಬಿನ್ ಅದಿಯವರಿಗೆ, ನೀನೂ ಸಹ ಇದನ್ನೇ ಹೇಳುತ್ತೀಯಾ? ಇಬ್ಬರು ಪತಿ ಪತ್ನಿಯನ್ನು ಕೇಳಿದರು. ಹೌದು ನಾನು ಅವಳು ಹೇಳಿದಂತೆಯೇ ನಾನು ಕೂಡ ಹೇಳುತ್ತೇನೆ

ಎಂದು ಹೇಳಿದರು. ಹಝ್ರತ್ ಅಬೂಬಕರ್(ರ) ಮುತ್‌ಅವ್ ಬಳಿಯಿಂದ ಹಿಂದಿರುಗಿದರು ಮತ್ತು ಅಲ್ಲಾಹನು ಈ ವಾಗ್ದಾನದ ಬಗ್ಗೆ ಅವರ ಹೃದಯದಿಂದ ಎಲ್ಲಾ ಹಿಂಜರಿಕೆಗಳನ್ನು ತೆಗೆದುಹಾಕಿದನು. ಇನ್ನು ನಮ್ಮ ಮಗ ಮುಸಲ್ಮಾನನಾಗಲು ಸಾಧ್ಯವೇ ಇಲ್ಲ ಎಂದು ಹೇಳಿದಾಗ ಸಂಬಂಧ ಮುಗಿಸಿಬಿಟ್ಟರು. ನಂತರ ಅವರು ಹಝ್ರತ್ ಖೌಲಾ(ರ) ಅವರಿಗೆ ಹೇಳಿದರು: ಹಝ್ರತ್ ಪಯಗಂಬರ್(ಸ) ನನ್ನ ಪರವಾಗಿ ಸಂದೇಶವನ್ನು ರವಾನಿಸಿ. ಹೀಗೆ, ಹಝ್ರತ್ ಖೌಲಾ(ರ) ಹಝ್ರತ್ ಪೈಗಂಬರ್(ಸ) ಅವರಿಗೆ ಸಂದೇಶವನ್ನು ತಿಳಿಸಿದರು ಮತ್ತು ಅವರು(ಸ) ಹಝ್ರತ್ ಆಯಿಷಾ(ರ) ಅವರನ್ನು ವಿವಾಹವಾದರು. ಈ ಘಟನೆಯನ್ನು ಮುಸ್‌ನದ್ ಅಹ್ಮದ್ ಬಿನ್ ಹಂಬಲ್‌ನಲ್ಲಿ ಉಲ್ಲೇಖಿಸಲಾಗಿದೆ.
(ಮುಸ್ನದ್ ಅಹ್ಮದ್ ಬಿನ್ ಹಂಬಲ್, ಸಂಪುಟ-8, ಪುಟ 409-410, ಹದೀಸ್-26288, ಆಲಂ ಅಲ್-ಕಿತಾಬ್ ಬೈರುತ್ 1998) (ದಾಏರಾ ಮಾರಿಫ್ ಸೀರತ್ ಮುಹಮ್ಮದ್ ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿ ವ ಸಲ್ಲಂ, ಸಂಪುಟ-5, ಪುಟ-442-443)

ಹಝ್ರತ್ ಆಯಿಷಾ(ರ) ಹೇಳಿದರು: ವಿವಾಹದ ನಂತರ ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿವ ಸಲ್ಲಮ್ ಅವರು ಹೇಳಿದರು, ನಾನು ನಿಮ್ಮನ್ನು ಮದುವೆಯಾಗುವ ಮೊದಲು ನನಗೆ ಕನಸಿನಲ್ಲಿ ಎರಡು ಬಾರಿ ತೋರಿಸಲಾಗಿದೆ. ದೇವದೂತರು ನಿಮ್ಮನ್ನು ರೇಷ್ಮೆಯ ಒಂದು ತುಂಡಿನಲ್ಲಿ ಒಯ್ಯುತ್ತಿರುವುದನ್ನು ನಾನು ನೋಡಿದೆನು.

ಮತ್ತೊಂದು ವರದಿಯಲ್ಲಿ, ಇವರು ಹಝ್ರತ್ ಪೈಗಂಬರ್(ಸ) ಅವರ ಧರ್ಮಪತ್ನಿಯಾಗಿದ್ದಾರೆ ಎಂದು ಹೇಳಿದರು. ಅದಕ್ಕೆ ನಾನು ಬಟ್ಟೆ ಸರಿಸಲು ಹೇಳಿದೆ. ಅವರು ಬಟ್ಟೆಯನ್ನು ಸರಿಸಿದಾಗ ಅದು ನೀನಾಗಿರುವುದಾಗಿ ನೋಡಿದೆನು. ಅದಕ್ಕೆ ಇದು ಅಲ್ಲಾಹನಿಂದ ಗತಿಸಿದ್ದರೆ ಅದನ್ನು ಅಲ್ಲಾಹನು ಸ್ವತಃ ಈಡೇರಿಸುತ್ತಾನೆ ಎಂದು ಯೋಚಿಸಿದೆ. ನಂತರ ನೀನು ರೇಷ್ಮೆಯ ತುಂಡಿನಲ್ಲಿ ನಿನ್ನನ್ನು ಹೊತ್ತಿಕೊಂಡಿರುವಂತೆ ದರ್ಶನದಲ್ಲಿ ನನಗೆ ಕಾಣಿಸಿಕೊಂಡೆ. ಅದಕ್ಕೆ ನಾನು ಬಟ್ಟೆಯನ್ನು ಸರಿಸಿ ಎಂದಾಗ ಅವನು ಬಟ್ಟೆಯನ್ನು ಸರಿಸಿದನು. ಆಗ ಅದರಲ್ಲಿ ನಾನು ನಿಮ್ಮನ್ನು ಕಂಡುಕೊಂಡೆ. ಆಗ ನಾನು ಇದು ಅಲ್ಲಾಹನ ಕಡೆಯಿಂದ ಆಗಿದ್ದರೆ ಖಂಡಿತವಾಗಿಯೂ ಅಲ್ಲಾಹನು ಇದನ್ನು ಈಡೇರಿಸುತ್ತಾನೆ ಎಂದು ಯೋಚಿಸಿದೆ. ಈ ವರದಿಯನ್ನು ಹಝ್ರತ್ ಆಯಿಷಾ(ರ)ರ ಬಗ್ಗೆ ಬುಖಾರಿಯಲ್ಲಿ ದಾಖಲಿಸಲಾಗಿದೆ. (ಸಹೀಹ್ ಅಲ್-ಬುಖಾರಿ, ಕಿತಾಬುತ್ತಾಬೀರ್, ಹದೀಸ್ 7011)

ಸಹಾಬರವರು ಜೀವನಚರಿತ್ರೆಯ ಕುರಿತು ಅಲ್-ಇಸ್ತಿಯಾಬ್ ಎಂಬ ಪುಸ್ತಕದಲ್ಲಿ ಹಝ್ರತ್ ಆಯಿಷಾ(ರ) ಅವರ ವರದಿ ಹೀಗಿದೆ: ಒಮ್ಮೆ ಹಝ್ರತ್ ಅಬೂಬಕರ್(ರ) ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿವ ಸಲ್ಲಮ್ ಅವರಿಗೆ ಹೇಳಿದರು. ಯಾ ರಸೂಲಲ್ಲಾಹ್(ಸ)! ನೀವು ನಿಮ್ಮ ಪತ್ನಿಯ ರುಖ್ಸತಿ (ಮದುಮಗಳವಿದಾಯ) ಏಕೆ ಮಾಡಿಕೊಳ್ಳುತ್ತಿಲ್ಲ? ಆಯೇಷಾರೊಂದಿಗಿನ ವಿವಾಹ ಸಂಬಂಧ ರಚಿಸಲಾಗಿತ್ತು ಆದರೆ ರುಖ್ಸತಿ ಆಗಿರಲಿಲ್ಲ. ಹಝ್ರತ್ ಅಬೂಬಕರ್(ರ) ಸ್ವತಃ ಹೇಳುತ್ತಾರೆ ರುಖ್ಸತಿ ಏಕೆ ಮಾಡಿಕೊಳ್ಳುತ್ತಿಲ್ಲ? ಎಂದು ಅದಕ್ಕೆ ಹಝ್ರತ್ ಪೈಗಂಬರ್(ಸ) ಅವರು ಹೇಳಿದರು ಮಹರ್ (ವಧುದಕ್ಷಣೆ)ಯ ಕಾರಣದಿಂದ. ಹಝ್ರತ್ ಅಬೂಬಕರ್(ರ) ಅವರು ನಿಮಗೆ(ಸ) ಹನ್ನೆರಡೂವರೆ ಔನ್ಸ್ ನೀಡಿರು. ಒಂದು ಔನ್ಸ್ ನಲವತ್ತು ದಿರ್ಹಮ್‌ಗಳಿಗೆ ಸಮ, ಮತ್ತು ಹಝ್ರತ್ ಪೈಗಂಬರ್(ಸ) ಅವರು ಈ ಮೊತ್ತವನ್ನು, ಅಂದರೆ ಮಹರ್ ಅನ್ನು ನಮಗೆ ಕಳುಹಿಸಿದರು. (ಅಸ್ಸೀರತುಲ್ ಹಲಬೀಯ, ಸಂಪುಟ-2, ಪುಟ-167, ದಾರುಲ್ ಕುತುಬ್ ಇಲ್‌ಮಿಯ ಬೈರೂತ್)

ವಿವಾಹದ ಸಮಯದಲ್ಲಿ ಹಝ್ರತ್ ಆಯಿಷಾ(ರ) ಅವರ ವಯಸ್ಸಿನ ಬಗ್ಗೆ, ಇತಿಹಾಸಕಾರರು, ಜೀವನಚರಿತ್ರೆಕಾರರು ಮತ್ತು ನಂತರದ ವರದಿಗಾರರ ಹೇಳಿಕೆಗಳಿಂದ ಭಿನ್ನಾಭಿಪ್ರಾಯಗಳ ಉದ್ಭಿಸಿವೆ ಮತ್ತು ಇದರಿಂದಾಗಿ ಇತರರು ಪ್ರಮುಖ ಆಕ್ಷೇಪಣೆಗಳನ್ನು ಎತ್ತುತ್ತಲೇ ಇದ್ದಾರೆ, ಇಲ್ಲದಿದ್ದರೆ ಸ್ಪಷ್ಟವಾದ ವಿಷಯವೇನೆಂದರೆ ಆಯಿಷಾ(ರ) ಅವರನ್ನು ವಿವಾಹವಾದಾಗ ವಯಸ್ಸಿನ ಕುರಿತು ಅಲ್ಲಿಯ ಜನರಲ್ಲಿ ಯಾವುದೇ ವಿಚಿತ್ರವಾದ ವಿಷಯ, ಪ್ರಶ್ನೆ ಅಥವಾ ಆಕ್ಷೇಪಣೆ ಏನೂ ಉದ್ಭವಿಸಲಿಲ್ಲ.

ವಿಸ್ಮಯಕಾರಿಯಾಗಿ ಅಸಾಮಾನ್ಯ ಏನಾದರೂ ಇದ್ದರೆ, ಕಪಟವಿಶ್ವಾಸಿಗಳು ಅಥವಾ ವಿರೋಧಿಗಳು ಆಕ್ಷೇಪಣೆಗಳನ್ನು ಎತ್ತುತ್ತಿದ್ದರು, ಆದರೆ ಯಾವುದೇ ಪುಸ್ತಕದಲ್ಲಿ ಅಂತಹ ಆಕ್ಷೇಪಣೆಯನ್ನು ಉಲ್ಲೇಖಿಸಲಾಗಿಲ್ಲ. ಹಝ್ರತ್ ಆಯಿಷಾ ಅವರ ವಯಸ್ಸನ್ನು ಅಸಾಮಾನ್ಯವಾಗಿ ಚಿಕ್ಕದಾಗಿ ವಿವರಿಸಿರುವ ಪುಸ್ತಕಗಳಲ್ಲಿ, ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರು ಅಸಂಬದ್ಧ ಹೇಳಿಕೆಗಳು ಎಂದು ಘೋಷಿಸಿದ್ದಾರೆ. ಮತ್ತು ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: (ವಿವಾಹ ಸಮಯದಲ್ಲಿ) ಹಝ್ರತ್ ಆಯಿಶ(ರ)ರಿಗೆ ಒಂಬತ್ತು ವರ್ಷ ಪ್ರಾಯವಾಗಿತ್ತು ಎಂದು ಹೇಳುವುದು ಆಧಾರರಹಿತ ಮಾತಾಗಿದೆ.
(ಆರ್ಯ ಧರ್ಮ್, ರೂಹಾಣಿ ಖಝಾಈನ್, ಸಂಪುಟ-10, ಪುಟ-64)

ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್(ರ) ಅವರು ಹಝ್ರತ್ ಆಯಿಷಾ(ರ) ಅವರ ರುಖ್ಸತಿಯ (ಮದುಮಗಳವಿದಾಯ) ವಿವರಗಳನ್ನು ವಿವರಿಸುತ್ತಾ ಬರೆದಿದ್ದಾರೆ "ಹಝ್ರತ್ ಖದೀಜಾ(ರ) ಅವರ ನಿಧನದ ನಂತರ, ಹಝ್ರತ್ ಪೈಗಂಬರ್(ಸ) ಆಯಿಷಾ ಸಿದ್ದಿಖಾ(ರ) ಅವರನ್ನು ವಿವಾಹವಾದರು. ಅದು ನಬವಿ ವರ್ಷದ ಹತ್ತನೇ ವರ್ಷ ಮತ್ತು ಶವ್ವಾಲ್ ತಿಂಗಳಾಗಿತ್ತು. ಮತ್ತು ಆ ಸಮಯದಲ್ಲಿ ಹಝ್ರತ್ ಆಯಿಷಾ(ರ) ಅವರ ವಯಸ್ಸು" ವಿವಾಹದ ಸಂದರ್ಭದಲ್ಲಿ "ಏಳು ವರ್ಷ ವಯಸ್ಸಾಗಿತ್ತು. ಆದರೆ ಅವರ ಬೆಳವಣಿಗೆಯು ಬಹಳ ಉತ್ತಮವಾಗಿತ್ತು ಅಸಮಾನ್ಯವಾಗಿತ್ತು ಆದ್ದರಿಂದ ಖೌಲಾ ಬಿನ್ತ್ ಹಕೀಮ್‌ರವರು ಅವರ ವಿವಾಹದ ಬಗ್ಗೆ ಯೋಚಿಸಿದರು, ಹಝ್ರತ್ ಪೈಗಂಬರ್(ಸ) ಅವರೊಂದಿಗೆ ವಿವಾಹ ಮಾಡಿಸಲು ಕಾರಣವಾದರು, ಆದರೆ ಅವರು ಇನ್ನೂ ವಯಸ್ಕನಾಗಿರಲಿಲ್ಲ, ಆದ್ದರಿಂದ ಹಾಗಾಗಿ ಆ ಸಮಯದಲ್ಲಿ ನಿಕಾಹ್ ನಡೆದಿತ್ತು ಆದರೆ ರುಖ್ಸತಿ (ಮದುಮಗಳವಿದಾಯ) ಆಗಿರಲಿಲ್ಲ. ಹೀಗೆ ಅವರು ತನ್ನ ಹೆತ್ತವರೊಂದಿಗೆ ವಾಸಿಸುತ್ತಿದ್ದರು, ಆದರೆ ಈಗ, ಹಿಜ್ರತ್ತಿನ ಎರಡನೇ ವರ್ಷದಲ್ಲಿ, ಅವರ ಮದುವೆಯಾಗಿ ಐದು ವರ್ಷಗಳು ಕಳೆದಾಗ ಮತ್ತು ಅವರ ವಯುಸ್ಸು ಹನ್ನೆರಡು ವರ್ಷ ಆಗಿತ್ತು, ಅವರು ವಯಸ್ಕರಾಗಿದ್ದರಿಂದ ಅವರು ತಂದೆ ಹಝ್ರತ್ ಅಬೂಬಕರ್(ರ) ಸ್ವತಃ ಹಝ್ರತ್ ಪೈಗಂಬರ್(ಸ) ಅವರ ಬಳಿ ಬಂದು ರುಖ್ಸತಿಯ ಬಗ್ಗೆ ಕೇಳಿಕೊಂಡರು, ಆದ್ದರಿಂದ ಹಝ್ರತ್ ಪೈಗಂಬರ್(ಸ)ರವರು ಮಹರ್ ಪಾತಿಯ ವ್ಯವಸ್ಥೆ ಮಾಡಿಕೊಂಡರು........... ಹೀಗೆ 2 ಹಿಜರಿ ಶವ್ವಾಲ್ ತಿಂಗಳಲ್ಲಿ ಹಝ್ರತ್ ಆಯಿಷಾ(ರ)ರವರು ತಮ್ಮ ಹೆತ್ತವರ ಮನೆಯಿಂದ ವಿದಾಯವಾಗಿ ಪ್ರವಾದಿ(ಸ) ಅವರ ಹರಮ್ ಅನ್ನು ಪ್ರವೇಶಿಸಿದರು.
(ಸೀರತ್ ಖಾತಮನ್ನಬೀಈನ್, ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್ ಎಂ.ಎ, ಪುಟ-423)

ಇದು ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್ ಅವರ ಸಂಶೋಧನೆಯಾಗಿದೆ, ಆದರೆ ಕೆಲವು ಇತಿಹಾಸಕಾರರ ಪ್ರಕಾರ, ವಯಸ್ಸು ಅದಕ್ಕಿಂತ ಹೆಚ್ಚಾಗಿತ್ತು ಎಂದಾಗಿದೆ. ಅವರ ಮದುವೆಯ ಸಮಯದಲ್ಲಿ, ಹಝ್ರತ್ ಆಯಿಷಾ(ರ) ಅವರ ತಾಯಿ ಮದೀನಾ ಹೊರವಲಯದಲ್ಲಿರುವ ಅಲ್-ಸುನ್ನಾಹ್ ಎಂಬ ಸ್ಥಳದಲ್ಲಿ ವಾಸಿಸುತ್ತಿದ್ದರು. ಆದ್ದರಿಂದ ಅನ್ಸಾರ್‌ಗಳ ಮಹಿಳೆಯರು ಅಲ್ಲಿ ಜಮಾಯಿಸಿದರು ಮತ್ತು ಹಝ್ರತ್ ಆಯಿಷಾ(ರ) ಅವರನ್ನು ವಿದಾಯಕ್ಕಾಗಿ ಅಲಂಕರಿಸಿದರು ಮತ್ತು ನಂತರ ಹಝ್ರತ್ ಪೈಗಂಬರ್(ಸ) ಸ್ವತಃ ಅಲ್ಲಿಗೆ ಭೇಟಿ ನೀಡಿದರು ಮತ್ತು ನಂತರ ಹಝ್ರತ್ ಆಯಿಷಾ(ರ) ತನ್ನ ಮನೆಯಿಂದ ಹೊರಟು ಪ್ರವಾದಿಯ ಹರಮ್ ಅನ್ನು ಪ್ರವೇಶಿಸಿದರು. (ಸೀರತ್ ಖಾತಮನ್ನಬೀಈನ್, ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್ ಎಂ.ಎ, ಪುಟ-429-430)

ಹಝ್ರತ್ ಆಯಿಶ(ರ)ರ ವೈಶಿಷ್ಟ್ಯಗಳ ಬಗ್ಗೆ ಪ್ರಸ್ತಾಪಿಸುತ್ತಾ ಹಝ್ರತ್ ಮಿರ್ಝಾ ಬಶೀರ್ ಅಹ್ಮದ್(ರ) ಹೇಳುತ್ತಾರೆ: ಕಿರಿವಯಸ್ಸಿನವರು ಆಗಿದ್ದರೂ ಕೂಡ ಹಝ್ರತ್ ಆಯಿಶ(ರ)ರ ನೆನಪಿನ ಶಕ್ತಿ ಮತ್ತು ಬುದ್ಧಿ ಅದ್ಭುತಕರವಾಗಿತ್ತು. ಹಝ್ರತ್ ಪೈಗಂಬರ್(ಸ)ರ ಶಿಕ್ಷಣ ಮತ್ತು ತರಬೇತಿಯಲ್ಲಿ ಅವರು ಅತ್ಯಂತ ವೇಗವಾಗಿ ಅಭಿವೃದ್ಧಿಗೊಂಡರು. ಸತ್ಯದಲ್ಲಿ ಈ ಚಿಕ್ಕ ಪ್ರಾಯದಲ್ಲಿ ಅವರನ್ನು ಹಝ್ರತ್ ಪೈಗಂಬರ್(ಸ) ಕೊಂಡುಹೋಗಿದ್ದು ಅವರ ತರಬೇತಿ ಮಾಡುವ ಮತ್ತು ಅವರಿಗೆ ಹಝ್ರತ್ ಪೈಗಂಬರ್(ಸ)ರ ಸಹವಾಸದಲ್ಲಿ ಆದಷ್ಟು ದೀರ್ಘಕಾಲ ಇರುವ ಸಂದರ್ಭ ಲಭಿಸುವಂತೆ ಮಾಡುವ ಹಾಗೂ ಒಬ್ಬ ಶರೀಅತೀ ನಬಿಯ ಪತ್ನಿಗೆ ಒಪ್ಪಿಸಲ್ಪಡುವ ಸೂಕ್ಷ್ಮ ಮತ್ತು ಮಹತ್ತಾದ ಕೆಲಸಗಳನ್ನು ನಿರ್ವಹಿಸಲು ಯೋಗ್ಯರಾಗುವಂತೆ ಮಾಡುವ ಉದ್ದೇಶದಿಂದ ಆಗಿತ್ತು. ಹೀಗೆ ಹಝ್ರತ್ ಆಯಿಶ(ರ) ಮುಸ್ಲಿಂ ಮಹಿಳೆಯರ ಶಿಕ್ಷಣ ಮತ್ತು ತರಬೇತಿಯ ಕೆಲಸವನ್ನು ಎಷ್ಟು ಉತ್ತಮವಾಗಿ ನಿರ್ವಹಿಸಿದರು ಎಂದರೆ ಅದರ ಉದಾಹರಣೆ ಜಗತ್ತಿನ ಚರಿತ್ರೆಯಲ್ಲಿ ಲಭಿಸುವುದಿಲ್ಲ. ಹಝ್ರತ್ ಪೈಗಂಬರ್(ಸ)ರ ಹದೀಸುಗಳ ಒಂದು ಬಹಳ ದೊಡ್ಡ ಮತ್ತು ಆವಶ್ಯಕವಾದ ಭಾಗ ಹಝ್ರತ್ ಆಯಿಶ(ರ)ರ ವರದಿಗಳನ್ನು ಒಳಗೊಂಡಿದೆ. ಹಝ್ರತ್ ಆಯಿಶ(ರ)ರಿಂದ ವರದಿಯಾದ ಹದೀಸುಗಳ ಸಂಖ್ಯೆ 2210ರ ತನಕ ತಲುಪುತ್ತದೆ. ಧಾರ್ಮಿಕ ಜ್ಞಾನದ ವಿಷಯದಲ್ಲಿ ಅವರ ಸ್ಥಿತಿ ಏನಾಗಿತ್ತು ಎಂದರೆ, ಶ್ರೇಷ್ಠ ಸಹಾಬಿಯರು ಕೂಡ ಈ ಸಂಬಂಧವಾಗಿ ಅವರನ್ನು ಭೇಟಿಯಾಗುತ್ತಿದ್ದರು. ಹಝ್ರತ್ ಪೈಗಂಬರ್(ಸ) ರ ನಂತರ ಸಹಾಬಿಗಳು ಯಾವುದೇ ಶೈಕ್ಷಣಿಕ ಸಮಸ್ಯೆಯನ್ನು

ಎದುರಿಸಿದರೆ ಅದನ್ನು ಹಝ್ರತ್ ಆಯಿಷಾ(ರ)ರವರು ಪರಿಹರಿಸಿದ್ದಾರೆ ಎಂದು ಹದೀಸ್‌ನಲ್ಲಿ ಉಲ್ಲೇಖಿಸಲಾಗಿದೆ. ಉರ್ವಾ ಬಿನ್ ಝುಬೈರ್ ಹೇಳುತ್ತಾರೆ: ಪವಿತ್ರ ಖುರ್‌ಆನ್‌ನ ಜ್ಞಾನ, ಆಸ್ತಿ ಹಂಚಿವ ಜ್ಞಾನ, ಹಲಾಲ್ ಮತ್ತು ಹರಾಮ್‌ನ ಜ್ಞಾನ, ನ್ಯಾಯಶಾಸ್ತ್ರದ ಜ್ಞಾನ, ಕಾವ್ಯದ ಜ್ಞಾನ, ವೈದ್ಯಕೀಯ ಜ್ಞಾನ, ಅರಬ್ ಹದೀಸ್ ಜ್ಞಾನದಲ್ಲಿ ಆಯಿಷಾ ಅವರಿಗಿಂತ ದೊಡ್ಡ ವಿದ್ವಾಂಸರನ್ನು ನಾನು ನೋಡಿಲ್ಲಿಲ್ಲ. ತಪಸ್ಸಿನಲ್ಲಿ ಮತ್ತು ತೃಪ್ತಿಯಲ್ಲಿದ್ದ ಅವರ ಸಮಯವೆಂದರೆ ಒಮ್ಮೆ ಎಲ್ಲಿಂದಲೋ ಒಂದು ಲಕ್ಷ ದಿರ್ಹಮ್‌ಗಳು ಅವರಿಗೆ ಲಭಿಸಿತು, ಆ ಸಂದರ್ಭದಲ್ಲಿ ಮನೆಯಲ್ಲಿ ಊಟಕ್ಕೂ ಏನೂ ಇರಲಿಲ್ಲ ಅಂತಹ ಸಂದರ್ಭದಲ್ಲೂ ಅವರು ಸಂಜೆಯ ಹಿತ್ತಿನ ಮೊದಲು ಎಲ್ಲಾ ದಿರ್ಹಮ್‌ಗಳು ದಾನವನ್ನಾಗಿ ನೀಡಿದರು. ಹಝ್ರತ್ ಪೈಗಂಬರ್(ಸ) ಕಾಲಾವಧಿಯಲ್ಲಿಯೇ ಇಂತಹ ಶ್ರೇಷ್ಠ ಗುಣಲಕ್ಷಣಗಳು ಕಾಣಿಸಿಕೊಂಡವು.... ಒಮ್ಮೆ ಹಝ್ರತ್ ಪೈಗಂಬರ್(ಸ) ಅವರು ಹೇಳಿದರು ಪುರುಷರಲ್ಲಿ ಅನೇಕ ಪುರುಷರು ಶ್ರೇಷ್ಠರಾಗಿದ್ದಾರೆ ಆದರೆ ಮಹಿಳೆಯರಲ್ಲಿ ಅತ್ಯುತ್ತಮ ಮಾದರಿಯಾಗಲು ಯೋಗ್ಯರಾಗಿದ್ದವರು ಬಹಳ ಕಡಿಮೆ. ಮಹಿಳೆಯರಲ್ಲಿ ಅತ್ಯುತ್ತಮ ಮಾದರಿಯಾಗಿ ಹಝ್ರತ್ ಪೈಗಂಬರ್(ಸ) ಫಿರ್‌ಔನಿನ ಪತ್ನಿಯಾದ ಆಸಿಯ ಮತ್ತು ಇಮ್ರಾನಿನ ಪುತ್ರಿಯಾದ ಮರ್‌ಯಮ್‌ರನ್ನು ಪ್ರಸ್ತಾಪಿಸಿದರು. ಅನಂತರ ಹಝ್ರತ್ ಪೈಗಂಬರ್(ಸ) ಹೇಳಿದರು: ಸರೀದ್ ಎಂಬ ಆಹಾರಕ್ಕೆ ಅರೇಬಿಯದ ಇತರ ಆಹಾರ ಪದಾರ್ಥಗಳ ಮೇಲೆ ಶ್ರೇಷ್ಠತೆ ಇರುವಂತೆ ಆಯಿಶ(ರ)ರಿಗೆ ಇತರ ಸ್ತ್ರೀಯರ ಮೇಲೆ ಶ್ರೇಷ್ಠತೆಯಿದೆ. ಒಮ್ಮೆ, ಇತರ ಕೆಲವು ಪರಿಶುದ್ಧ ಧರ್ಮಪತ್ನಿಯರು ಹಝ್ರತ್ ಪೈಗಂಬರ್(ಸ) ಅವರಿಗೆ ಕೌಟುಂಬಿಕ ವಿಷಯದಲ್ಲಿ ಹಝ್ರತ್ ಆಯಿಷಾ(ರ) ಅವರ ಬಗ್ಗೆ ದೂರು ನೀಡಿದರು, ಆದರೆ ಹಝ್ರತ್ ಪೈಗಂಬರ್(ಸ) ಮೌನವಾಗಿದ್ದರು, ಆದರೆ ಆ ವಿಷಯವನ್ನು ಒತ್ತಾಯದಿಂದ ಹೇಳಿದಾಗ ಹಝ್ರತ್ ಪೈಗಂಬರ್(ಸ) ಅವರು ಹೇಳಿದರು ನಾನು ಏನು ಮಾಡಬೇಕು? ನಿಮ್ಮ ಈ ದೂರುಗಳು? ನನಗೆ ತಿಳೀದಿರುವ ವಿಷಯವೆಂದರೆ; ನನ್ನ ದೇವರ ವಹಿ (ದೇವವಾಣಿ) ಯಾವುದೇ ಪತ್ನಿಯ ಗಾದಿಯಲ್ಲಿ ನನಗೆ ಬಹಿರಂಗಗೊಂಡಿಲ್ಲ ಆದರೆ ಅದು ಯಾವಾಗಲೂ ಆಯಿಷಾ(ರ) ಅವರ ಗಾದಿಯಲ್ಲಿ ಪ್ರಕಟವಾಗುತ್ತದೆ. ಅಲ್ಲಾಹ್ ಅಲ್ಲಾಹ್! ಈ ಲಕ್ಷಣವನ್ನು ಪಡೆದ ಹೆಂಡತಿ ಎಷ್ಟು ಪವಿತ್ರಳಾಗಿದ್ದಳು ಮತ್ತು ಪವಿತ್ರತೆ ಮತ್ತು ಪರಿಶುದ್ಧತೆಯಲ್ಲದೆ ಪ್ರೀತಿಯ ಮಾನದಂಡವಿಲ್ಲದ ಪತಿ ಎಷ್ಟು ಪವಿತ್ರವಾಗಿದ್ದಳು !! ... ಕೊನೆಯ ದಿನಗಳಲ್ಲಿ ಹಝ್ರತ್ ಸೌದಾಹ್ ಬಿಂತ್ ಜಮಾಹ್ (ರ.ಅ) ಅವರು ಹಜ್‌ರತ್ ಆಯಿಷಾ (ರ.ಅ) ಅವರಿಗೆ ಸರದಿಯನ್ನು ನೀಡಿದರು ಹೀಗಾಗಿ ಹಝ್ರತ್ ಆಯಿಷಾ (ರ.ಅ) ಅವರ ಸಹವಾಸವನ್ನು ಆನಂದಿಸಲು ಎರಡು ಅವಕಾಶಗಳನ್ನು ಹೊಂದಿದ್ದರು ಎಂದು ಹದೀಸ್‌ಗಳಲ್ಲಿ ಉಲ್ಲೇಖಿಸಲಾಗಿದೆ. ಹಝ್ರತ್ ಪೈಗಂಬರ್(ಸ) ಹಝ್ರತ್ ಆಯಿಷಾ(ರ) ಅವರ ಶಿಕ್ಷಣ ಮತ್ತು ತರಬೇತಿಯ ಬಗ್ಗೆ ವಿಶೇಷವಾಗಿ ಕಾಳಜಿ ವಹಿಸಿದ್ದರು ಮತ್ತು ಆಕೆಯ ವಯಸ್ಸು ಮತ್ತು ಸಂದರ್ಭಗಳಿಂದಾಗಿ ಆಕೆಗೆ ವಿಶೇಷ ಗಮನವನ್ನು ನೀಡುವ ಸಾಮರ್ಥ್ಯ ಹೊಂದಿದ್ದರು. ಆದರೆ ಅದರ ನಂತರವೂ, ಅವರು ಹಝ್ರತ್ ಸೌದಾ(ರ) ಅವರಿಗೆ ನಿಯಮಿತವಾಗಿ ಭೇಟಿ ನೀಡುತ್ತಿದ್ದರು ಮತ್ತು ಇತರ ಪತ್ನಿಯರಂತೆ ಅವರ ಸೌಕರ್ಯವನ್ನು ನೋಡಿಕೊಳ್ಳುತ್ತಿದ್ದರು.

ಹಝ್ರತ್ ಆಯಿಷಾ(ರ) ಅವರ ಅಕ್ಷರಸ್ಥತೆಯ ಬಗ್ಗೆ ಭಿನ್ನಾಭಿಪ್ರಾಯವಿದೆ. ಆದರೆ ಬುಖಾರಿಯ ಒಂದು ವರದಿಯಿಂದ ಅವರ ಬಳಿ ಪವಿತ್ರ ಖುರ್‌ಆನ್‌ನ ಒಂದು ಬರೆದಿರುವ ಪ್ರತಿ ಅವರ ಬಳಿ ಇತ್ತು ಎಂಬ ವರದಿ ಇದೆ. ಇದರಿಂದ ಅವರು ಕೆಲವು ಆಯತ್‌ಗಳನ್ನು ಸ್ವತಃ ಇರಾಕಿ ಮುಸಲ್ಮಾನನಿಗೆ ಬರೆಸಿದ್ದರು. ಇದರಿಂದ ಅವರು ಕನಿಷ್ಠ ಅಕ್ಷರಸ್ಥರಾಗಿದ್ದರು ಮತ್ತು ಬಹುಶಃ ಅವರ ರುಖ್ಸತಾನದ ನಂತರ ಬರೆಯಲು ಕಲಿತರು ಎಂದು ಸಾಬೀತುಪಡಿಸುತ್ತದೆ, ಆದರೆ ಕೆಲವು ಇತಿಹಾಸಕಾರರು ಸೂಚಿಸಿದಂತೆ. ಹೌದು, ಅವರು ಬಹುಶಃ ಬರೆಯಲು ತಿಳಿದಿರಲಿಲ್ಲ. ಹಝ್ರತ್ ಆಯಿಶ(ರ) ಹಝ್ರತ್ ಪೈಗಂಬರ್(ಸ)ರ ನಿಧನದ ನಂತರ ಸುಮಾರು 48 ವರ್ಷಗಳ ಕಾಲ ಜೀವಂತವಾಗಿದ್ದರು. ಹಿಜರೀ 58, ರಮಝಾನ್ ತಿಂಗಳಲ್ಲಿ ನಿಧನರಾದರು. ಮರಣ ಸಮಯದಲ್ಲಿ ಅವರಿಗೆ 68 ವರ್ಷ ಪ್ರಾಯವಿತ್ತು. (ಸೀರತ್ ಖಾತಮುನ್ನಬೀಈನ್(ಸ), ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಃಇಬ್ ಎಂ.ಎ, ಪುಟ–430–432)

ನಂತರ ಬದ್ರ್ ಕದನದ ನಂತರ ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿವ ಸಲ್ಲಮ್ ಅವರ ಜೀವನದಲ್ಲಿ ಸಂಭವಿಸಿದ ಘಟನೆಯೆಂದರೆ ಮಕ್ಕದಲ್ಲಿದ್ದ ಅವರ ಪುತ್ರಿ ಹಝ್ರತ್ ಝೈನಬ್(ರ) ಅವರದ್ದಾಗಿದೆ, ಬದ್ರಿನ ಕೈದಿಗಳಲ್ಲಿ ಹಝ್ರತ್ ಪೈಗಂಬರ್(ಸ)ರ ಮಗಳಾದ ಹಝ್ರತ್ ಝೈನಬ್(ರ)ರ ಪತಿಯಾದ ಅಬುಲ್‌ಆಸ್ ಬಿನ್ ರಬೀಅ್ ಕೂಡ ಇದ್ದರು. ಅವರನ್ನು ಸ್ವತಂತ್ರಗೊಳಿಸಲು ಮಕ್ಕದಿಂದ ಹಝ್ರತ್ ಝೈನಬ್(ರ) ತನ್ನ ಹಾರವನ್ನು ಕಳುಹಿಸಿದರು. ಅದನ್ನು ಅವರ ವಿವಾಹದ ವೇಳೆ ಅವರ ತಾಯಿಯಾದ ಹಝ್ರತ್ ಖದೀಜ(ರ) ಅವರಿಗೆ ಕೊಟ್ಟಿದ್ದರು.

ಹಝ್ರತ್ ಪೈಗಂಬರ್(ಸ) ಆ ಹಾರವನ್ನು ನೋಡಿದಾಗ ಬಹಳಷ್ಟು ಭಾವುಕರಾದರು ಮತ್ತು ಸಹಾಬಿಯರೊಡನೆ ಹೇಳಿದರು: ನೀವು ಸರಿಯೆಂದು ಭಾವಿಸುವುದಾದರೆ, ಝೈನಬ್‌ರ ಕೈದಿಯನ್ನು ಬಿಡುಗಡೆಗೊಳಿಸಿರಿ ಮತ್ತು ಈ ಹಾರವನ್ನು ಮರಳಿಸಿರಿ. 'ಖಂಡಿತವಾಗಿಯೂ ಯಾ ರಸೂಲಲ್ಲಾಹ್' ಎಂದು ಸಹಾಬಿಯರು ಹೇಳಿದರು. ಮಕ್ಕಕ್ಕೆ ಹೋದ ಕೂಡಲೇ ತನ್ನ ಪತ್ನಿಯಾದ ಝೈನಬ್‌ರಿಗೆ ಮದೀನಕ್ಕೆ ಬರಲು ಅನುಮತಿ ಕೊಡಬೇಕು ಎಂಬ ನಿಬಂಧನೆಯೊಂದಿಗೆ ಅಬುಲ್ ಆಸ್‌ರನ್ನು ಹಝ್ರತ್ ಪೈಗಂಬರ್(ಸ) ಬಿಡುಗಡೆಗೊಳಿಸಿದ್ದರು. (ಅಸ್ಸೀರತುಲ್ ಹಲಬೀಯ, ಸಂಪುಟ–2, ಪುಟ–264–265, ದರುಲ್ ಕುತುಬ್ ಇಲ್‌ಮಿಯ ಬೂರೂತ್ 2002)

ಇಬ್ನ್ ಇಸ್‌ಹಾಕ್ ಪ್ರಕಾರ, ಅಬುಲ್–ಆಸ್ ಅವರು ಬಿಡುಗಡೆಯಾದ ನಂತರ ಮಕ್ಕಾವನ್ನು ತಲುಪಿದಾಗ, ಹಝ್ರತ್ ಪೈಗಂಬರ್(ಸ) ರವರು ಝೈದ್ ಬಿನ್ ಹಾರಿಸ್ ಮತ್ತು ಓರ್ವ ಅನ್ಸಾರಿಯನ್ನು **ಬತ್ನೆ ಯಾಜಜ್**ನಲ್ಲಿ ಉಳಿಯಲು ಕಳುಹಿಸಿದರು. (ಬತ್ನ್–ಇ–ಯಾಜ್‌ಜ್ ಮಕ್ಕಾದಿಂದ ಎಂಟು ಮೈಲಿ ದೂರದಲ್ಲಿರುವ ಸ್ಥಳ) ಝೈನಬ್ ನಿಮ್ಮಂದ ಹಾದುಹೋಗುವವರೆಗೆ, ನಂತರ ಅವರೊಂದಿಗೆ ಇರಿ ಮತ್ತು ಅವರನ್ನು ನನ್ನ ಬಳಿಗೆ ಕರೆತನ್ನಿ. ಆದ್ದರಿಂದ ಅವರು ತಕ್ಷಣವೇ ಹೊರಟುಹೋದರು. ಬದ್ರ್ ಕದನದ ಸುಮಾರು ಒಂದು ತಿಂಗಳ ನಂತರ ಈ ಘಟನೆ ನಡೆದಿದೆ.

ಮಕ್ಕಾವನ್ನು ತಲುಪಿದ ನಂತರ, ಅಬುಲ್–ಆಸ್ ಹಝ್ರತ್ ಝೈನಬ್(ರ) ಅವರನ್ನು ಹಝ್ರತ್ ಪೈಗಂಬರ್(ಸ) ಅವರ ಬಳಿಗೆ ಹೋಗಲು ಅನುಮತಿಸಿದರು, ಆದ್ದರಿಂದ ಅವರು ಬುತ್ತಿಯನ್ನು ಸಿದ್ಧಪಡಿಸಲು ಪ್ರಾರಂಭಿಸಿದರು. ಹಝ್ರತ್ ಝೈನಬ್(ರ) ಹೇಳುವಂತೆ ನಾನು ಪ್ರವಾಸದ ತಯಾರಿಯಲ್ಲಿ ನಿರತನಾಗಿದ್ದಾಗ ಹಿಂದ್ ಬಿಂತ್ ಉತ್ಬಾ ನನಗೆ ಹೇಳಿದಳು, ಓ ಮುಹಮ್ಮದ್(ಸ) ಅವರ ಪುತ್ರಿ!! ನೀವು ನಿಮ್ಮ ತಂದೆಯ ಬಳಿಗೆ ಹೋಗಬೇಕೆಂದು ನನಗೆ ತಿಳಿದುಬಂದಿದೆ, ಅದಕ್ಕೆ ನಾನು ಅವಳನ್ನು ನೆಪವನ್ನು ಹೇಳುತ್ತಾ ಕಡೆಗಣಿಸಿದೆ. ಇದನ್ನು ಕೇಳಿ ಅವಳು, ಓ ಮಗಳೇ! ಇಂತಹ ನಿಲುವು ಹೊಂದಬೇಡಿ. ನಿಮ್ಮ ಪ್ರಯಾಣದಲ್ಲಿ ನಿಮಗೆ ಉಪಯುಕ್ತವಾದ ಸರಕುಗಳ ಅಗತ್ಯವಿದ್ದಲ್ಲಿ ಅಥವಾ ನಿಮ್ಮ ತಂದೆಯನ್ನು ತಲುಪಬಹುದಾದ ಸಂಪತ್ತಿನ ಅಗತ್ಯವಿದ್ದಲ್ಲಿ, ನಿಮಗೆ ಬೇಕಾದ ಎಲ್ಲಾ ಸರಕುಗಳು ನನ್ನ ಬಳಿ ಇವೆ, ನನ್ನಿಂದ ಕುಗ್ಗಬೇಡಿ. ಮಹಿಳೆಯರ ಹೃದಯದಲ್ಲಿ ಪುರುಷರಂತೆ ದುಃಖವಿರುವುದಿಲ್ಲ. ಹಝ್ರತ್ ಝೈನಬ್(ರ) ಅವರು ಇದನ್ನು ಪ್ರಾಮಾಣಿಕವಾಗಿ ಹೇಳಿದ್ದಾಳೆ ಎಂದು ನಾನು ಭಾವಿಸುತ್ತೇನೆ, ಆದರೆ ನಾನು ಅವಳ ಈ ವರ್ತನೆಯಿಂದ ಭಯಭೀತಳಾಗಿದ್ದರಿಂದ ನಾನು ಆಕೆಗೆ ನೆಪ ಹೇಳಿ ಕಡೆಗಣಿಸಿದೆ. ಇಬ್ನ್ ಇಸ್‌ಹಾಕ್ ಹೇಳಿದರು: ಹಝ್ರತ್ ಝೈನಬ್(ರ) ಪ್ರಯಾಣಕ್ಕೆ ಸಿದ್ಧರಾದರು ಮತ್ತು ಅವರು ತಮ್ಮ ಪ್ರಯಾಣದ ತಯಾರಿಯನ್ನು ಮುಗಿಸಿದಾಗ, ಅಬುಲ್ ಆಸ್ ಅವರ ಸಹೋದರ ಕಿನಾನಾ ಬಿನ್ ರಬಿ' ಅವರಿಗೆ ಸವಾರಿ ನೀಡಿದರು. ಅವರು(ರ) ಸವಾರಿ ಹತ್ತಿದರು ಮತ್ತು ಕಿನಾನಾ ಅವರ ಬಿಲ್ಲು ಮತ್ತು ಬತ್ತಳಿಕೆಯನ್ನು ತೆಗೆದುಕೊಂಡು ಹಝ್ರತ್ ಜೈನಬ್(ರ) ಅವರ ಪಲ್ಲಕ್ಕಿನಲ್ಲಿದ್ದಾಗ ಹಗಲು ಬೆಳಕಿನಲ್ಲಿ ಅವರೊಂದಿಗೆ ನಡೆದರು. ಈ ವಿಷಯ ಖುರೈಷಿಗಳಲ್ಲಿ ಚರ್ಚೆಯ ವಿಷಯವಾದಾಗ, ಅವರು ಅವರನ್ನು ಹುಡುಕಲು ಹೋದರು ಮತ್ತು ಅವರು ನಡೆಯುತ್ತಿದ್ದಾಗ ಅವರನ್ನು ಧೀ–ತುವಾವಿನಲ್ಲಿ ಅವರನ್ನು ಪಡೆದರು. ಧೀ–ತುವಾವು ಮಕ್ಕಾದಲ್ಲಿನ ಪ್ರಸಿದ್ಧ ಕಣಿವೆಯಾಗಿದೆ ಮತ್ತು ಇದು ಮಸ್ಜಿದ್ ಅಲ್–ಹರಾಮ್‌ನಿಂದ ಅರ್ಧ ಮೈಲಿ ದೂರದಲ್ಲಿದೆ. ಆದಾಗ್ಯೂ, ಮೊದಲನೆಯದಾಗಿ, ಹಬ್ಬಾರ್ ಬಿನ್ ಅಸ್ವದ್ ಫಿಹ್ರಿ ಅವರ ಕಡೆಗೆ ಬಂದನು ಮತ್ತು ಅವನು ತನ್ನ ಈಟಿಯಿಂದ ಸವಾರನನ್ನು ಹೆದರಿಸಿದರು ಮತ್ತು ಗರ್ಭಿಣಿಯಾಗಿದ್ದ ಹಝ್ರತ್ ಝೈನಬ್ ಗರ್ಭಪಾತವನ್ನು ಕಳೆದುಕೊಂಡರು, ಮತ್ತು ಆಕೆಯ ಮಾವ ಬಾಣವನ್ನು ತೆಗೆದುಕೊಂಡು ಕುಳಿತು ಹೀಗೆ ಘೋಷಿಸಿದರು. ಯಾರು ನನ್ನ ಹತ್ತಿರ ಬರುತ್ತಾರೊ ಅವರು ಈ ಬಾಣಗಲಿಗೆ ಗುರಿಯಾಗುತ್ತಾನೆ. ಒಂದು ವರದಿಯ ಪ್ರಕಾರ: ಹಬ್ಬಾರ್ ಸವಾರಿಯನ್ನು ತನ್ನ ಈಟಿಯಿಂದ ಚುಚ್ಚಿದಾಗ ಅದರಿಂದಾಗಿ ಹಝ್ರತ್ ಝೈನಬ್(ರ) ಗರ್ಭಿಣಿಯಾಗಿದ್ದಾಗ ಕಲ್ಲಿನ ಮೇಲೆ ಬಿದ್ದಳು. ಈ ರೀತಿಯಾಗಿ, ಅವರ ಭ್ರೂಣವು ಗರ್ಭಪಾತವಾಯಿತು. ಆದಾಗ್ಯೂ, ಈ ಘಟನೆಗಳನ್ನು ನೋಡಿದ ನಂತರ, ಜನರು ಅವರಿಂದ ಹಿಂತಿರುಗಿದರು. ಆಗ ಅಬು ಸುಫ್ಯಾನ್ ಮತ್ತು ಖುರೈಷಿಗಳ ನಾಯಕರು ಬಂದು ಅವನ ಬಳಿಗೆ, ಓ ಯುವಕನೇ! ನಾವು ನಿಮ್ಮೊಂದಿಗೆ

ಮಾತನಾಡುವವರೆಗೂ ಕದಲಬೇಡಿ. ಆದ್ದರಿಂದ ಅವನು ಬಿಲ್ಲುಗಾರಿಕೆಯನ್ನು ನಿಲ್ಲಿಸಿದನು ಮತ್ತು ಅಬು ಸುಫ್ಯಾನ್ ಹೇಳಿದನು: ನೀನು ಸರಿ ಮಾಡಲಿಲ್ಲ. ನಮ್ಮ ಆತ್ಮಗಳ ದುಃಸ್ಥಿತಿ ಮತ್ತು ಮುಹಮ್ಮದ್ (ಸ) ಅವರ ಸಾಧನೆಗಳು ನಿನಗೆ ತಿಳಿದಿದ್ದರೂ ನೀನು ಬಹಿರಂಗವಾಗಿ ಮಹಿಳೆಯನ್ನು ತೆಗೆದುಕೊಂಡುಹೋಗುತ್ತಿದ್ದೀಯ. ಮುಹಮ್ಮದ್ (ಸ) ಅವರ ಪುತ್ರಿಯನ್ನು ಬಹಿರಂಗವಾಗಿ ಕರೆದುಕೊಂಡು ಹೋದರೆ ಜನರು ಇದು ನಮ್ಮ ಅವಮಾನಕ್ಕೆ ಕಾರಣ ಮತ್ತು ನಮ್ಮ ದೌರ್ಬಲ್ಯ ಮತ್ತು ಅಸಾಮರ್ಥ್ಯಕ್ಕೆ ಕಾರಣ ಎಂದು ಅರ್ಥಮಾಡಿಕೊಳ್ಳುತ್ತಾರೆ. ಅವನು ಹೇಳಿದನು, "ನನ್ನ ಜೀವನದ ಆಣೆ!! ನಾವು ಅವರನ್ನು ತಡೆಯುವ ಅಗತ್ಯವಿಲ್ಲ ಮತ್ತು ಅವರ ವಿರುದ್ಧ ಯಾವುದೇ ಉತ್ಸಾಹ ಮತ್ತು ಭಾವೋದ್ರೇಕವಿಲ್ಲ, ಆದರೆ ಉತ್ತಮವಾದ ಪ್ರಕರಣವೆಂದರೆ ನೀವು ಅವರನ್ನು ಹಿಂತಿರುಗಿಸುತ್ತೀರಿ. ಪರಿಸ್ಥಿತಿಯು ಉತ್ತಮ ಮತ್ತು ಶಾಂತವಾದಾಗ ಮತ್ತು ನಾವು ಅವರನ್ನು ಮರಳಿ ಪಡೆದಿದ್ದೇವೆ ಎಂದು ಜನರು ಅರ್ಥಮಾಡಿಕೊಂಡಾಗ, ಅವರನ್ನು ರಹಸ್ಯವಾಗಿ ಅವರ ತಂದೆಯ ಬಳಿಗೆ ಕರೆದೊಯ್ಯಿರಿ. ನಂತರ ಕಿನಾನಾ ಈ ಯೋಜನೆಯನ್ನು ಅನುಸರಿಸಿದರು. ಇಬ್ನ್ ಇಸ್‌ಹಾಕ್ ಪ್ರಕಾರ, ಹಝ್ರತ್ ಝೈನಬ್(ರ) ಎರಡು ಅಥವಾ ನಾಲ್ಕು ದಿನಗಳ ಕಾಲ ಮಕ್ಕಾದಲ್ಲಿ ತಂಗಿದ್ದರು, ವದಂತಿಗಳು ಕೊನೆಗೊಳ್ಳುವವರೆಗೆ, ಅವರು ಹಝ್ರತ್ ಝೈನಬ್ ಅವರನ್ನು ರಾತ್ರಿ ಹಝ್ರತ್ ಝೈದ್(ರ) ಮತ್ತು ಅವರ ಸಹಚರರಿಗೆ ರಹಸ್ಯವಾಗಿ ಹಸ್ತಾಂತರಿಸಿದರು. ಅವರು ರಾತ್ರಿಯ ಕತ್ತಲೆಯಲ್ಲಿ ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿವ ಸಲ್ಲಮ್ ಅವರ ಬಳಿಗೆ ಹಝ್ರತ್ ಝೈನಬ್(ರ) ಅವರನ್ನು ಕರೆತಂದರು.

ಇಮಾಮ್ ಬೈಹಕಿ ಅವರು ಹಝ್ರತ್ ಝೈನಬ್(ರ) ಅವರು ಮಕ್ಕಾದಿಂದ ಹಝ್ರತ್ ಆಯಿಷಾ(ರ) ಅವರು ಆಗಮಿಸಿದ ಘಟನೆಯನ್ನು ವಿವರಿಸಿದರು ಮತ್ತು ಹಝ್ರತ್ ಪೈಗಂಬರ್(ಸ) ಅವರು ತಮ್ಮ ಉಂಗುರವನ್ನು ಹಝ್ರತ್ ಝೈದ್ ಬಿನ್ ಹಾರಿಸಾ(ರ) ಅವರಿಗೆ ನೀಡಿದರು ಮತ್ತು ಝೈನಬ್ ಅವರನ್ನು ತಮ್ಮೊಂದಿಗೆ ಕರೆತರಲು ಮಕ್ಕಾಗೆ ಕಳುಹಿಸಿದರು ಎಂದು ಹೇಳಿದರು. ಆದ್ದರಿಂದ, ಅವರು ತಮ್ಮ ಚಾಣುಕ್ಷತೆ ಮತ್ತು ಬುದ್ಧಿವಂತಿಕೆಯಿಂದ ಈ ಉಂಗುರವನ್ನು ಕುರುಬನಿಗೆ ನೀಡಿದರು ಮತ್ತು ಅವನು ಅದನ್ನು ಹಝ್ರತ್ ಝೈಬಗ್(ರ) ಅವರಿಗೆ ತಲುಪಿಸಿದರು. ಹಝ್ರತ್ ಝೈನಬ್(ರ) ಈ ಉಂಗುರವನ್ನು ನೋಡಿ ಅದನ್ನು ಗುರುತಿಸಿ, ಅವರು ಅವನನ್ನು ಕೇಳಿದರು: ಇದನ್ನು ನಿಮಗೆ ಯಾರು ಕೊಟ್ಟರು? ಮಕ್ಕಾದಿಂದ ಹೊರಗೆ ಒಬ್ಬ ವ್ಯಕ್ತಿ ಅದನ್ನು ನನಗೆ ಕೊಟ್ಟಿದ್ದಾನೆ ಎಂದು ಅವರು ಹೇಳಿದರು. ಆದ್ದರಿಂದ ಹಝ್ರತ್ ಝೈನಬ್(ರ) ರಾತ್ರಿ ಮಕ್ಕಾದಿಂದ ಹೊರಬಂದರು ಮತ್ತು ಅವರ ಹಿಂದೆ ಸವಾರಿ ಮಾಡಿದರು ಹೀಗೆ ಅವರು ಅವರನ್ನು ಮದೀನಾಗೆ ಕರೆತಂದರು.

ಹಝ್ರತ್ ಪೈಗಂಬರ್(ಸ) ಹೇಳುತ್ತಿದ್ದರು: ಝೈನಬ್ ನನ್ನ ಎಲ್ಲಾ ಹೆಣ್ಣುಮಕ್ಕಳಿಗಿಂತ ಉತ್ತಮಳಯ ಏಕೆಂದರೆ ಅವಳು ನನ್ನಿಂದ ಬಹಳ ಸಂಕಷ್ಟವನ್ನು ಅನುಭವಿಸಿದ್ದಾಳೆ. (ಅಸ್ಸೀರತುನ್ನಬವೀಯು (ಸ) ಲಿಇಬ್ನೆ ಕಸೀರ್, ಸಂಪುಟ-2, ಪುಟಗಳು 516 ರಿಂದ 518, ದಾರ್ ಅಲ್-ಮಾರಿಫಾ, ಬೈರುತ್ 1976) (ಅಸ್ಸೀರತುನ್ನಬವೀಯ ಲಿಇಬ್ನೆ ಹಿಶ್ಶಾಮ್, ಪುಟ-445, ಅಡಿಟಿಪ್ಪಣಿ, ದಾರುಲ್ ಕುತುಬ್ ಇಲ್‌ಮಿಯ ಬೈರೂತ್, 2001) (ಫರ್ಹಂಗ್ ಸೀರತ್, ಪುಟ-59, 180, ಝುವಾರ ಅಕಾಡಮಿ ಕರಾಚಿ)

ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್ ಅವರು ಈ ವಿವರವನ್ನು ಸೀರತ್ ಖಾತಮನ್ನಬೀಈನ್(ಸ)ನಲ್ಲಿ ಈ ಕೆಳಗಿನಂತೆ ಬರೆದಿದ್ದಾರೆ: "ಮಕ್ಕಕ್ಕೆ ಹೋದ ಕೂಡಲೇ ತನ್ನ ಪತ್ನಿಯಾದ ಝೈನಬ್‌ರಿಗೆ ಮದೀನಕ್ಕೆ ಬರಲು ಅನುಮತಿ ಕೊಡಬೇಕು ಎಂಬ ನಿಬಂಧನೆಯೊಂದಿಗೆ ಅಬುಲ್ ಆಸ್‌ರನ್ನು ಹಝ್ರತ್ ಪೈಗಂಬರ್(ಸ) ಬಿಡುಗಡೆಗೊಳಿಸಿದ್ದರು. ಮತ್ತು ಹೀಗೆ ನಂಬಿಕೆಯುಳ್ಳ ಆತ್ಮವನ್ನು ಅಪನಂಬಿಕೆಯಿಂದ ರಕ್ಷಿಸಲಾಯಿತು. ಸ್ವಲ್ಪ ಸಮಯದ ನಂತರ ಅಬುಲ್-ಆಸ್ ಕೂಡ ಮುಸಲ್ಮಾನನಾದನು ಮತ್ತು ಮದೀನಾಗೆ ವಲಸೆ ಹೋದರು ಮತ್ತು ಹೀಗೆ ಪತಿ ಮತ್ತು ಪತ್ನಿ ಮತ್ತೆ ಒಂದಾದರು. ಹಝ್ರತ್ ಝೈನಬ್(ರ) ಅವರ ವಲಸೆಯ ಬಗ್ಗೆ, ಅವರು ಮಕ್ಕಾದಿಂದ ಮದೀನಾಕ್ಕೆ ಬರಲು ಹೊರಟಾಗ, ಅವರಿಗೆ ಕೆಲವು ಖುರೈಷಿಗಳು ಬಲವಂತವಾಗಿ ಹಿಂದಕ್ಕೆ ತೆಗೆದುಕೊಳ್ಳಲು ಬಯಸಿದ್ದರು ಎಂಬ ವರದಿ ಇದೆ. ಅವರು ನಿರಾಕರಿಸಿದಾಗ, ಹಬ್ಬರ್ ಬಿನ್ ಅಸ್ವಾದ್ ಎಂಬ ನೀಚನು ಅವರ ಮೇಲೆ ಈಟಿಯಿಂದ ಅತ್ಯಂತ ಕ್ರೂರವಾಗಿ ದಾಳಿ ಮಾಡಿದನು, ಇದು ಭಯ ಮತ್ತು ಆಘಾತದಿಂದ ಗರ್ಭಪಾತಕ್ಕೆ ಕಾರಣವಾಯಿತು. ಅದಲ್ಲದೆ, ಈ ಸಂದರ್ಭದಲ್ಲಿ, ಅವರು ಎಂತಹ ಆಘಾತ ಪಡೆದರು ಎಂದರೆ ಅದರ ನಂತರ ಅವರ ಆರೋಗ್ಯವು ಸಂಪೂರ್ಣವಾಗಿ ಚೇತರಿಸಿಕೊಳ್ಳಲಿಲ್ಲ ಮತ್ತು ಅಂತಿಮವಾಗಿ ಅವರು ಅದೇ ದೌರ್ಬಲ್ಯದ ಸ್ಥಿತಿಯಲ್ಲಿ ಅಕಾಲಿಕ ಮರಣವನ್ನು ಪಡೆದರು. (ಸೀರತ್ ಖಾತಮನ್ನಬೀಈನ್(ಸ) ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್ ಎಂ.ಎ, ಪುಟ-368-369)

ಈಗ ನಾನು ಲೋಕದ ಇಂದಿನ ಪರಿಸ್ಥಿತಿಗಳಿಗೆ ಸಂಬಂಧಿಸಿದಂತೆ ದುಆಗಾಗಿ ಮನವಿ ಮಾಡಲು ಬಯಸುತ್ತೇನೆ. ಕಳೆದ ಕೆಲವು ದಿನಗಳಿಂದ, ಹಮಾಸ್ ಮತ್ತು ಇಸ್ರೇಲ್ ನಡುವಿನ ಯುದ್ಧವು ನಡೆಯುತ್ತಿದೆ, ಇದರಿಂದಾಗಿ ಮಹಿಳೆಯರು, ಮಕ್ಕಳು ಮತ್ತು ವೃದ್ಧರು ಸೇರಿದಂತೆ ಎರಡೂ ಕಡೆಯ ನಾಗರಿಕರು ಕೊಲ್ಲಲ್ಪಡುತ್ತಿದ್ದಾರೆ ಮತ್ತು ಕೊಲ್ಲಲ್ಪಟ್ಟಿದ್ದಾರೆ.

ಯುದ್ಧದ ಸಮಯದಲ್ಲಿಯೂ ಮಹಿಳೆಯರು, ಮಕ್ಕಳು ಅಥವಾ ಯಾವುದೇ ರೀತಿಯಲ್ಲಿ ಯುದ್ಧದಲ್ಲಿ ಭಾಗವಹಿಸದ ಯಾರನ್ನೂ ಕೊಲ್ಲಲು ಇಸ್ಲಾಂ ಅನುಮತಿಸುವುದಿಲ್ಲ. ಈ ಸಂಗತಿಯನ್ನು ಹಝ್ರತ್ ಪೈಗಂಬರ್(ಸ) ಬಹಳ ಒತ್ತುನೀಡಿ ನಿರ್ದೇಶಿಸಿದ್ದಾರೆ. (ಸುನನ್ ಅಬೀದಾವೂದ್, ಕಿತಾಬುಲ್ ಜಿಹಾದ್, ಹದೀಸ್-2614)

ಇಸ್ರೇಲಿ ಸೇನೆಯು ಎಷ್ಟೆಲ್ಲ ಮುಗ್ಧ ಪ್ಯಾಲೆಸ್ತೀನಿಯರನ್ನು ಕೊಂದಿದೆ ಎಂಬ ವಾಸ್ತವವನ್ನು ಲೆಕ್ಕಿಸದೇ ಈ ಯುದ್ಧವನ್ನು ಹಮಾಸ್ ಸಂಘ ಪ್ರಾರಂಭಿಸಿತು ಮತ್ತು ಇಸ್ರೇಲಿ ನಾಗರಿಕರನ್ನು ನಿರ್ದಾಕ್ಷಿಣ್ಯವಾಗಿ ಹಮಾಸ್ ಕೊಂದಿತು ಎಂದು ಜಗತ್ತು ಹೇಳುತ್ತಿದೆ ಮತ್ತು ಕೆಲವು ಪುರಾವೆಗಳು ಅದನ್ನೇ ತಿಳಿಸುತ್ತಿದೆ. ಹೇಗಿದ್ದರೂ ಮುಸ್ಲಿಮರು ಯಾವಾಗಲೂ ಇಸ್ಲಾಮಿನ ಬೋಧನೆಗಳ ಪ್ರಕಾರ ಕಾರ್ಯನಿರ್ವಹಿಸಬೇಕು. ಇಸ್ರೇಲ್ ಸೈನ್ಯವು ಮಾಡಿದ್ದು ಅದರ ರೀತಿಯಾಗಿದೆ. ಇದಕ್ಕೆ ಪ್ರತಿಕ್ರಿಯೆ ನಡೆಸುವುದು ಬೇರೆ ರೀತಿಯಲ್ಲಿ ಆಗಬಹುದಾಗಿತ್ತು.

ಯುದ್ಧ ಮಾಡುವುದು ಸರಿಯೆಂದಾದರೆ, ಅದು ಸೈನ್ಯಗಳ ನಡುವೆ ಆಗಬಹುದು. ಮಹಿಳೆಯರು, ಮಕ್ಕಳು ಮತ್ತು ಮುಗ್ಧರೊಂದಿಗೆ ಅಲ್ಲ. ಈ ರೀತಿಯಾಗಿ, ಹಮಾಸ್ ಹಾಕಿದ ಹೆಜ್ಜೆ ತಪ್ಪಾಗಿತ್ತು. ಇದರಿಂದ ಹೆಚ್ಚು ನಷ್ಟ ಉಂಟಾಗಿದೆ. ಹಮಾಸಿನ ದಾಳಿಗೆ ಪ್ರತಿದಾಳಿ ಹಮಾಸಿನ ಮೇಲೆ ಮಾತ್ರವಾಗಿರಬೇಕಿತ್ತು. ಹಾಗಾಗಿದ್ದರೆ ಅದು ನಿಜವಾದ ಶೌರ್ಯ ಮತ್ತು ಪರಾಕ್ರಮ ಹಾಗೂ ಪ್ರತಿಕ್ರಿಯೆ ಆಗಿರುತ್ತಿತ್ತು. ಆದರೆ ಈಗ ಇಸ್ರೇಲ್ ಸರಕಾರ ಕೈಗೊಳ್ಳುತ್ತಿರುವ ಕ್ರಮಗಳು ಕೂಡ ತುಂಬಾ ಅಪಾಯಕಾರಿಯಾಗಿದೆ. ಈ ಪರಿಸ್ಥಿತಿಗೆ ಅಂತ್ಯವಿಲ್ಲ ಮತ್ತು ಇದು ನಿಲ್ಲದು ಎಂದು ತೋರುತ್ತಿದೆ. ಎಷ್ಟೆಲ್ಲ ಮುಗ್ಧ ಜನರು, ಮಹಿಳೆಯರು ಮತ್ತು ಮಕ್ಕಳು ಜೀವ ಕಳೆದುಕೊಳ್ಳುವರು ಎಂದು ಊಹಿಸಲು ಕೂಡ ಸಾಧ್ಯವಿಲ್ಲ. ಗಾಝಾವನ್ನು ಸಂಪೂರ್ಣವಾಗಿ ನಿರ್ಮೂಲನೆ ಮಾಡುವುದಾಗಿ ಇಸ್ರೇಲಿ ಸರ್ಕಾರವು ಹೇಳಿಕೊಂಡಿತ್ತು. ಅದಕ್ಕಾಗಿ ಅವರು ಅನೇಕ ಬಾಂಬ್ ದಾಳಿಗಳನ್ನು ನಡೆಸಿದರು ಮತ್ತು ನಗರವನ್ನು ಬೂದಿಯ ರಾಶಿಯನ್ನಾಗಿ ಮಾಡಿರುವರು. ಒಂದು ಮಿಲಿಯನ್‌ಗಿಂತಲೂ ಹೆಚ್ಚು ಜನರು ಗಾಝಾವನ್ನು ತೊರೆಯಬೇಕೆಂದು ಅವರು ಹೇಳಿರುವರು. ಅದೃಷ್ಟವಶಾತ್ ಯುಎನ್ ಸಂಸ್ಥೆ ಸ್ವಲ್ಪ ಮಟ್ಟಿಗೆ ಮತ್ತು ಬಹಳ ದುರ್ಬಲವಾದ ರೀತಿಯಲ್ಲಿಯಾದರೂ ಸರಿ ತನ್ನ ಧ್ವನಿಯನ್ನು ಎತ್ತಿದೆ. ಇದು ಮಾನವ ಹಕ್ಕುಗಳ ಉಲ್ಲಂಘನೆ ಎಂದೂ ಇದು ತಪ್ಪು ಎಂದೂ ಅದು ಹೇಳಿದೆ. ಆದರೆ ಈಗಲೂ ಶಕ್ತವಾದ ರೀತಿಯಲ್ಲಿ ಹೇಳುವ ಬದಲಿಗೆ ಕೇವಲ ವಿನಂತಿಯನ್ನು ಯುಎನ್ ಸಂಸ್ಥೆ ಮಾಡುತ್ತಿದೆ.

ಅದೇನೇ ಇರಲಿ, ಇದರಲ್ಲಿ ಯುದ್ಧದಲ್ಲಿ ಪಾಲ್ಗೊಳ್ಳದ ಅಮಾಯಕರ ತಪ್ಪೇನೂ ಇಲ್ಲ. ಇಸ್ರೇಲಿ ಮಹಿಳೆಯರು, ಮಕ್ಕಳು ಮತ್ತು ಸಾಮಾನ್ಯ ನಾಗರಿಕರನ್ನು ಮುಗ್ಧರು ಎಂದು ಜಗತ್ತು ಪರಿಗಣಿಸುವುದಾದರೆ ಪ್ಯಾಲೆಸ್ತೀನಿಯನ್ನರು ಕೂಡ ಅಷ್ಟೇ ಮುಗ್ಧರು. ಇಂತಹ ಹತ್ಯೆಗಳನ್ನು ಮಾಡಬಾರದು ಎಂದು ಆ ಗ್ರಂಥಾನುಸಾರಿಗಳ ಯಹೂದಿ - ಕ್ರೈಸ್ತರ ಅಧ್ಯಾಪನೆಯಲ್ಲೂ ಇದೆ. ಮುಸಲ್ಮಾನರದ್ದು ಮಾಡಿದ್ದು ತಪ್ಪು ಎಂದು ಆರೋಪಿಸುವುದಾದರೆ ಇಸ್ರೇಲ್ ಮಾಡಿದ್ದು ಸರಿಯೇ ಎಂದು ಅವರು ಸ್ವತಃ ನೋಡಬೇಕಾಗಿದೆ.

ಹೇಗಿದ್ದರೂ ನಾವು ಬಹಳಷ್ಟು ದುಆ ಮಾಡಬೇಕಾಗಿದೆ. ಪ್ಯಾಲೇಸ್ತೀನಿನ ರಾಯಭಾರಿ ಹೀಗೆ ಹೇಳಿದ್ದರು: ಹಮಾಸ್ ಉಗ್ರಗಾಮಿ ಗುಂಪಾಗಿದೆ, ಅದು ಸರ್ಕಾರವಲ್ಲ. ಅದೇ ಸಮಯದಲ್ಲಿ, ಅವರು ಒಂದು ಪ್ರಶ್ನೆಯನ್ನು ಕೂಡ ಎತ್ತಿದರು. ಅವರ ಆ ಮಾತು ಸರಿಯೂ ಆಗಿದೆ. ಅದೇನೆಂದರೆ, ನಿಜವಾದ ನ್ಯಾಯವನ್ನು ಸ್ಥಾಪಿಸಿದರೆ, ಅಂತಹ ಘಟನೆಗಳು ಸಂಭವಿಸುತ್ತಿರಲಿಲ್ಲ.

ಈ ಸಂಗತಿಗಳನ್ನೇ ನಾನು ಇಸ್ಲಾಮಿನ ಬೋಧನೆಗಳ ಬೆಳಕಿನಲ್ಲಿ ದೀರ್ಘ ಕಾಲದಿಂದ ಹೇಳುತ್ತಿದ್ದೇನೆ. ಸರಿ ಸರಿ ಎಂದು ಅವರು ನಮ್ಮ ಮುಂದೆ ಹೇಳುತ್ತಾರೆ. ಆದರೆ, ಅದಕ್ಕೆ ತಕ್ಕಂತೆ ವರ್ತಿಸಲು ಸಿದ್ಧರಲ್ಲ. ಈಗ, ಎಲ್ಲ ಪ್ರಮುಖ ಶಕ್ತಿಗಳು ಅಥವಾ ಪಾಶ್ಚಿಮಾತ್ಯ ಶಕ್ತಿಗಳು, ನ್ಯಾಯವನ್ನು ಬದಿಗಿಟ್ಟು ಪ್ಯಾಲೆಸ್ತೀನಿಯರ ಮೇಲೆ ಕ್ರೌರ್ಯವನ್ನು ಮಾಡಲು ಒಟ್ಟಾಗುತ್ತಿವೆ ಮತ್ತು ಎಲ್ಲ ಕಡೆಯಿಂದಲೂ ಸೈನ್ಯವನ್ನು ಕಳುಹಿಸುವ ಚರ್ಚೆ ನಡೆಯುತ್ತಿದೆ.

ದೌರ್ಜನ್ಯಕ್ಕೊಳಗಾದವರ ಚಿತ್ರಗಳನ್ನು ಪ್ರದರ್ಶಿಸಿ ಹೀಗೆಲ್ಲ ಅನ್ಯಾಯಗಳು ನಡೆಯುತ್ತಿವೆ ತೋರಿಸಲಾಗುತ್ತಿದೆ ಮತ್ತು ಮಾಧ್ಯಮಗಳಲ್ಲಿ ಸುಳ್ಳು ವರದಿಗಳು ಪ್ರಸಾರವಾಗುತ್ತಿವೆ......... ಯುದ್ಧವನ್ನು ಕೊನೆಗೊಳಿಸಲು ಪ್ರಯತ್ನಿಸುವುದಕ್ಕೆ ಬದಲಾಗಿ ಪ್ರಮುಖ ಶಕ್ತಿಗಳು ಯುದ್ಧದ ಕಿಡಿಯನ್ನು ಹೊತ್ತಿಸಲು ತಯಾರಾಗಿ ನಿಂತಿವೆ ಎಂದು ವಿಶ್ಲೇಷಣೆ ನಡೆಸಿದರೆ ತೋರುತ್ತಿದೆ. ಯುದ್ಧವನ್ನು ಕೊನೆಗೊಳಿಸಲು ಅವರು ಬಯಸುತ್ತಿಲ್ಲ.

ಮೊದಲನೆಯ ಮಹಾಯುದ್ಧದ ನಂತರ, ಪ್ರಮುಖ ಶಕ್ತಿಗಳು ಯುದ್ಧಗಳನ್ನು ಅಂತ್ಯಗೊಳಿಸಲು ಲೀಗ್ ಆಫ್ ನೇಷನ್ಸ್ ಸಂಘಟನೆಯನ್ನು ಸ್ಥಾಪಿಸಲಾಯಿತು. ಆದಾಗ್ಯೂ, ನ್ಯಾಯದ ಬೇಡಿಕೆಗಳನ್ನು ಈಡೇರಿಸದ ಕಾರಣದಿಂದ ಅದು ವಿಫಲಗೊಂಡಿತು ಮತ್ತು ಎರಡನೇ ಮಹಾಯುದ್ಧ ನಡೆಯಿತು. ಇದರಿಂದ 7 ಕೋಟಿಗೂ ಹೆಚ್ಚು ಜನರು ಅಸುನೀಗಿದರು ಎಂದು ಹೇಳಲಾಗುತ್ತದೆ. ಈಗ ವಿಶ್ವಸಂಸ್ಥೆಯ ವಿಷಯದಲ್ಲೂ ಅದೇ ಆಗುತ್ತಿದೆ ಮತ್ತು ಅದು ಕೂಡ ಹೀನಾಯವಾಗಿ ವಿಫಲಗೊಳ್ಳುತ್ತಿದೆ. ಜಗತ್ತಿನಲ್ಲಿ ನ್ಯಾಯವನ್ನು ಸ್ಥಾಪಿಸಲು, ದೌರ್ಜನ್ಯಕ್ಕೊಳಗಾದವರನ್ನು ಬೆಂಬಲಿಸಲು ಮತ್ತು ಯುದ್ಧಗಳನ್ನು ಕೊನೆಗೊಳಿಸಲು ಪ್ರಯತ್ನಿಸಲು ಇದನ್ನು ರಚಿಸಲಾಗಿತ್ತು. ಆದರೆ ಈ ಸಂಗತಿಗಳೊಂದಿಗೆ ಅದಕ್ಕೆ ದೂರದ ಸಂಬಂಧವೂ ಇಲ್ಲದಂತೆ ತೋರುತ್ತಿದೆ. ಪ್ರತಿಯೊಬ್ಬರೂ ತಮ್ಮ ಸ್ವಂತ ಹಿತಾಸಕ್ತಿಗಳ ಬಗ್ಗೆ ಗಮನಹರಿಸುತ್ತಿದ್ದಾರೆ. ಈ ಅನ್ಯಾಯಗಳಿಂದ ಉಂಟಾಗುವ ಯುದ್ಧದ ಹಾನಿಕಾರಕ ಪರಿಣಾಮಗಳನ್ನು ಜನಸಾಮಾನ್ಯರಿಗೆ ಅಂದಾಜು ಮಾಡಲು ಸಾಧ್ಯವಿಲ್ಲ.

ಇಂತಹ ಪರಿಸ್ಥಿತಿಗಳಲ್ಲಿ, ಮುಸ್ಲಿಂ ರಾಷ್ಟ್ರಗಳು ಕನಿಷ್ಠ ಪಕ್ಷ ಎಚ್ಚರಗೊಳ್ಳಬೇಕು. ತಮ್ಮಲ್ಲಿರುವ ಭಿನ್ನಾಭಿಪ್ರಾಯಗಳನ್ನು ತೊಲಗಿಸಿ ಏಕತೆಯನ್ನು ಸ್ಥಾಪಿಸಬೇಕು. ಇದೇ ಲೋಕದಿಂದ ಅಶಾಂತಿಯನ್ನು ದೂರ ಮಾಡುವ ಮಾರ್ಗವಾಗಬಹುದು. ನ್ಯಾಯದ ಅವಶ್ಯಕತೆಗಳನ್ನು ಪೂರೈಸಲು ಮತ್ತು ಪೀಡಿತರ ಹಕ್ಕುಗಳನ್ನು ಪೂರೈಸಲು ಅವರು ಒಗ್ಗೂಡಬೇಕು ಮತ್ತು ಶಕ್ತವಾದ ಧ್ವನಿಯನ್ನು ಎತ್ತಬೇಕು. ಒಂದಾದರೆ ಮತ್ತು ಒಗ್ಗಟ್ಟಾಗಿ ಇರುವುದಾದರೆ ಅವರ ಧ್ವನಿಯ ಹಿಂದೆ ಶಕ್ತಿಯೂ ಇರುತ್ತದೆ. ಇಲ್ಲದಿದ್ದರೆ ಅಮಾಯಕ ಮುಸಲ್ಮಾನರ ಜೀವಹಾನಿಗೆ ಈ ಮುಸ್ಲಿಂ ಸರಕಾರಗಳೇ ಹೊಣೆಯಾಗಬೇಕಾಗುವುದು.

....... ಅಲ್ಲಾಹನು ಮುಸ್ಲಿಂ ಸರ್ಕಾರಗಳಿಗೆ ಬುದ್ಧಿ ಮತ್ತು ತಿಳುವಳಿಕೆಯನ್ನು ನೀಡಲಿ. ಒಂದಾಗಿ ಮತ್ತು ನ್ಯಾಯವನ್ನು ಸ್ಥಾಪಿಸುವವರಾಗಲಿ. ಅಲ್ಲಾಹನು ಲೋಕದ ಪ್ರಬಲ ಶಕ್ತಿಗಳಿಗೆ ವಿವೇಕ ಮತ್ತು ತಿಳುವಳಿಕೆಯನ್ನು ದಯಪಾಲಿಸಲಿ. ಜಗತ್ತನ್ನು ವಿನಾಶದತ್ತ ಕೊಂಡೊಯ್ಯುವ ಬದಲು ಜಗತ್ತನ್ನು ವಿನಾಶದಿಂದ ರಕ್ಷಿಸಲು ಪ್ರಯತ್ನಿಸುವವರಾಗಲಿ. ವಿನಾಶ ಬಂದರೆ ಈ ಪ್ರಬಲ ರಾಷ್ಟ್ರಗಳು ಕೂಡ ಸುರಕ್ಷಿತವಾಗಿರದು ಎಂದು ಈ ಪ್ರಬಲ ರಾಷ್ಟ್ರಗಳು ಯಾವಾಗಲೂ ನೆನಪಿನಲ್ಲಿಟ್ಟುಕೊಳ್ಳಬೇಕು.

ಹೇಗಿದ್ದರೂ ನಮ್ಮ ಬಳಿ ಇರುವುದು ಪ್ರಾರ್ಥನೆಯ ಆಯುಧವಾಗಿದೆ. ಆದ್ದರಿಂದ ಈ ಸಂಬಂಧವಾಗಿ ಪ್ರತಿಯೊಬ್ಬ ಅಹ್ಮದಿಯ ಹಿಂದೆಂದಿಗಿಂತಲೂ ಹೆಚ್ಚು ದುಆ ಮಾಡಬೇಕು. ಗಾಜಾದಲ್ಲಿ ಕೆಲವು ಅಹ್ಮದಿ ಮನೆಗಳನ್ನು ಸುತ್ತುವರೆಯಲಾಗಿದೆ. ಸರ್ವಶಕ್ತನಾದ ಅಲ್ಲಾಹನು ಅವರನ್ನು ಕೂಡ ಸುರಕ್ಷಿತವಾಗಿರಿಸಲಿ. ಎಲ್ಲ ಮುಗ್ಧರು ಸುರಕ್ಷಿತವಾಗಿರಿಸಲಿ.

ಅಲ್ಲಾಹನು ಹಮಾಸಿಗೂ ತಿಳುವಳಿಕೆಯನ್ನು ನೀಡಲಿ, ತಮ್ಮ ಜನರ ಮೇಲೆಯೇ ದೌರ್ಜನ್ಯ ಉಂಟಾಗಲು ಅವರು ಕಾರಣಕರ್ತರಾಗದಿರಲಿ. ಯಾವುದೇ ಸಮುದಾಯದೊಂದಿಗೆ ಇರುವ ಶತ್ರುತ್ವ ನಮ್ಮನ್ನು ನ್ಯಾಯದಿಂದ ವರ್ತಿಸುವುದರಿಂದ ಹಿಂದೆ ಸರಿಯುವಂತೆ ಮಾಡಬಾರದು. ಇದೇ ಪವಿತ್ರ ಖುರ್‌ಆನಿನ ಆಜ್ಞೆಯಾಗಿದೆ.

ನ್ಯಾಯದ ಆವಶ್ಯಕತೆಗಳನ್ನು ಪೂರೈಸುತ್ತಾ ಶಾಂತಿಯನ್ನು ಸ್ಥಾಪಿಸಲು ಸರ್ವಶಕ್ತನಾದ ಅಲ್ಲಾಹನು ಪ್ರಮುಖ ರಾಷ್ಟ್ರಗಳಿಗೂ ಸೌಭಾಗ್ಯ ನೀಡಲಿ. ಲೋಕದಲ್ಲಿ ಶಾಂತಿ ಮತ್ತು ಸಮಾಧಾನ ಕಾಣುವಂತಾಗಲು ಅಲ್ಲಾಹನು ನಮಗೆ ಸೌಭಾಗ್ಯ ನೀಡಲಿ. (ಆಮೀನ್)

ನಮಾಝ್‌ನ ನಂತರ, ನಾನು ಎರಡು ಜನಾಝಗಳನ್ನು ಸಹ ನಿರ್ವಹಿಸುವೆನು. ಒಂದು ಜನಾಝ ಹಾಝಿರ್ ಇದೆ. ಮೊದಲನೇಯದು ಡಾ. ಬಶೀರ್ ಅಹ್ಮದ್ ಖಾನ್ ಅವರದ್ದಾಗಿದೆ. ಇಲ್ಲಿ ಯುಕೆಯಲ್ಲಿ, ಅವರು ಮಸ್ಜಿದ್ ಫಝ್ಲ್ ಬಡಾವಣೆಯಲ್ಲಿ ವಾಸವಾಗಿದ್ದರು. ಅವರು ತೊಂಬತ್ತೆರಡನೆಯ ವಯಸ್ಸಿನಲ್ಲಿ ಇತ್ತೀಚೆಗೆ ನಿಧನರಾದರು. **ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್** ಅವರು ಹಝ್‌ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಸಹಾಬಿ ಹಝ್‌ರತ್ ಮೀರ್ ಅಹ್ಮದ್ ಸಾಹಿಬ್ ಅವರ ಮೊಮ್ಮಗ, ಮತ್ತು ಖಾಜಿ ಮುಹಮ್ಮದ್ ಯೂಸುಫ್ ಸಾಹಿಬ್ ಅವರ ಅಳಿಯ ಆಗಿದ್ದರು. ಮತ್ತು ಪೇಶಾವರದ ಮುಹಮ್ಮದ್ ಖವಾಸ್ ಖಾನ್ ಸಾಹಿಬ್ ಅವರ ಪುತ್ರ ಆಗಿದ್ದರು. ದಿವಂಗತರು ನಿಯಮಿತವಾಗಿ ನಮಾಝ್ ನಿರ್ವಹಿಸುವವರು ಉಪವಾಸ ಅನುಷ್ಠಿಸುವವರಾಗಿದ್ದರು, ಖಿಲಾಫತ್‌ನೊಂದಿಗೆ ಆಳವಾಗಿ ಸಂಬಂಧ ಹೊಂದಿದ್ದರು, ಬಡಪ್ರೇಮಿಯಾಗಿದ್ದರು, ಪ್ರಾಮಾಣಿಕ ವ್ಯಕ್ತಿಯಾಗಿದ್ದರು. ನುಸ್ರತ್ ಜಹಾನ್ ಯೋಜನೆಯಡಿ, ಅವರು ಘಾನಾದ ಅಹಮದಿಯಾ ಆಸ್ಪತ್ರೆ ಟೆಕಿಮನ್‌ಗೆ ಸಹ ಹೋದರು. ಅಲ್ಲಿ ಕೆಲಕಾಲ ಸೇವೆ ಸಲ್ಲಿಸಲು ಸಾಧ್ಯವಾಯಿತು. ಘಾನಾದಿಂದ ಹಿಂದಿರುಗಿದ ನಂತರ, ಅವರು ಅಹ್ಮದಿ ವೈದ್ಯರೊಂದಿಗೆ ಇಸ್ಲಾಮಾಬಾದ್‌ನ ಗ್ರಾಮೀಣ ಪ್ರದೇಶಗಳಲ್ಲಿ ವೈದ್ಯಕೀಯ ಶಿಬಿರಗಳನ್ನು ಆಯೋಜಿಸಲು ಸಾಧ್ಯವಾಯಿತು.

ಯುಕೆ ವರ್ಗಾವಣೆಯ ನಂತರ, ಹಝ್‌ರತ್ ಖಲೀಫತುಲ್ ಮಸೀಹ್ ರಾಬಿ(ರಹ್) ರ ಕಾಲಘಟ್ಟದಲ್ಲಿ, ಅವರು ಖುತ್‌ಬ ಜುಮುಅಗಳನ್ನು ಅನುವಾದಿಸುವ ಮತ್ತು ಸಾರಾಂಶ ಮಾಡುವ ಸೇವೆಯನ್ನು ಮುಂದುವರೆಸಿದರು. ಅವರು ಪವಿತ್ರ ಖುರ್‌ಆನ್ ಅನ್ನು ಪ್ರೀತಿಸುತ್ತಿದ್ದರು. ಪವಿತ್ರ ಖುರ್‌ಆನ್ ಅನ್ನು ನಿಯಮಿತವಾಗಿ ಓದಿ ಅದನ್ನು ಅವರು ತಮ್ಮ ಮಕ್ಕಳಿಗೆ ಅನುವಾದಿಸಲು ಕಲಿಸಿದರು. ಚಿಕ್ಕ ವಯಸ್ಸಿನಲ್ಲಿ, ಹಝ್‌ರತ್ ಮುಸ್ಲೆಹ್ ಮೌಊದ್(ರ) ಅವರ ಅನುಗ್ರಹದಾಯಕ ಅವಧಿಯಲ್ಲಿ, ಅವರು ಖಾದಿಯಾನ್‌ನಲ್ಲಿ ದೀರ್ಘಕಾಲ ಕಳೆಯುವ ಅವಕಾಶವನ್ನು ಪಡೆದರು. ಹಝ್‌ರತ್ ಮುಸ್ಲೆಹ್ ಮೌಊದ್(ರ) ಅವರ ಅನೇಕ ಭಾಷಣಗಳನ್ನು ಅವರು ಕಂಠಪಾಠ ಮಾಡಿದರು. ಅದೇ ರೀತಿಯಲ್ಲಿ, ಹಝ್‌ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಪುಸ್ತಕಗಳ ಕೆಲವು ಭಾಗಗಳನ್ನು ಕಂಠಪಾಠ ಮಾಡಿದ್ದರು, ಕವಿತೆಗಳನ್ನು ಕಂಠಪಾಠ ಮಾಡಿದ್ದರು.

ದಿವಂಗತರು ಅಲ್ಲಾಹನ ಅನುಗ್ರಹದಿಂದ ಮೂಸಿಯಾಗಿದ್ದರು. ಅವರ ಪತ್ನಿಯಲ್ಲದೆ, ಅವರು ಒಬ್ಬ ಪುತ್ರ ಮತ್ತು ಆರು ಹೆಣ್ಣು ಮಕ್ಕಳನ್ನು ಅಗಲಿದ್ದಾರೆ. ಅವರ ಅಳಿಯ ಡಾ. ಮುಸಲ್ಲಂ ಅಲ್-ದರೂಬಿ ಸಾಹಿಬ್ ಹೇಳುತ್ತಾರೆ: ತಹಜ್ಜುದ್ ನಮಾಝ್ ಕಡ್ಡಾಯವಾಗಿ ನಿರ್ವಹಿಸುತ್ತಿದ್ದರು. ಅವರು ಮುಗ್ಧ ಮತ್ತು ನಿಷ್ಠಾವಂತ ವ್ಯಕ್ತಿಯಾಗಿದ್ದರು. ಅವರು ಧರ್ಮನಿಷ್ಠ, ಧೈರ್ಯಶಾಲಿ ವ್ಯಕ್ತಿಯಾಗಿದ್ದರು. ಖಿಲಾಫತ್ ಮತ್ತು ಜಮಾತ್ ಬಗ್ಗೆ ಅವರಿಗೆ ಅಸಾಧಾರಣ ಪ್ರೀತಿ ಇತ್ತು. ಖಲೀಫರ ಪ್ರೀತಿಯಂತಹ ಅಮೂಲ್ಯವಾದದ್ದನ್ನು ನಾನು ಅವರಿಂದ ಕಲಿತಿದ್ದೇನೆ. ದಿವಂಗತರು ಸಹ ತಬ್ಲೀಗ್‌ನಲ್ಲಿ (ಧರ್ಮಪ್ರಚಾರದಲ್ಲಿ) ತುಂಬಾ ಇಷ್ಟಪಡುತ್ತಿದ್ದರು ಮತ್ತು ಇದಕ್ಕಾಗಿ ಅವರು ಯಾವುದೇ ಅವಕಾಶವನ್ನು ಕಳೆದುಕೊಳ್ಳಲಿಲ್ಲ. ನಾನು ಸೀರಿಯಾ ಮತ್ತು ಜೋರ್ಡಾನ್‌ನಲ್ಲಿದ್ದಾಗ, ದಿವಂಗತರು ನನ್ನನ್ನು ಭೇಟಿ ಮಾಡಲು ಬಂದಾಗ, ನನ್ನ ನೆರೆಹೊರೆಯವರನ್ನು ಅವರು ಬಹಳ ಬೇಗ ಸ್ನೇಹಿತರಾಗುತ್ತಿದ್ದರು ಮತ್ತು ನನ್ನ ಸಿಬ್ಬಂದಿವರ್ಗದವರಿಗೆ ಅಥವಾ ಉದ್ಯೋಗಿಗಳಿಗೆ ಅಹ್ಮದಿಯತ್ ಬಗ್ಗೆ ತಿಳಿಸುತ್ತಿದ್ದರು.

ಅವರ ಪತ್ನಿ ಝುಬೈದಾ ಸಾಹಿಬಾ ಹೇಳುತ್ತಾರೆ, ತೃತೀಯ ಖಿಲಾಫತ್ ಕಾಲಘಟ್ಟದಲ್ಲಿ ನಸುರತ್ ಜಹಾನ್ ಯೋಜನೆಯಡಿ ಅವರಿಗೆ ಪಶ್ಚಿಮ ಆಫ್ರಿಕಾಕ್ಕೆ ಹೋಗಲು ಆದೇಶಿಸಿದಾಗ, ಅವರು ತಕ್ಷಣ ಪರಿಪೂರ್ಣ ವಿಧೇಯತೆಯಿಂದ ಸಿದ್ಧರಾದರು. ಇಷ್ಟು ಬೇಗ ತಯಾರಾಗಿದ್ದು ಎಂದರೆ ಅದು ನನಗೂ ಅಚ್ಚರಿ ತಂದಿದೆ ಎನ್ನುತ್ತಾರೆ. ಅವರು ಹೇಳಿತ್ತಾರೆ ನಮ್ಮ ಮಗಳಿಗೆ ಇನ್ನೂ ಎರಡು ತಿಂಗಳಾಗಿತ್ತು, ಆದರೆ ಅವರು ಇಮಾಮ್ ಅವರ ಆದೇಶವನ್ನು ತಕ್ಷಣ ಪಾಲಿಸಿ ಸಿದ್ಧತೆಗಳನ್ನು ಮಾಡಿಕೊಳ್ಳಬೇಕೆಂದು ಹೇಳಿದರು, ಹೀಗಾಗಿ ನಾವು ಎಲ್ಲಾ ನಾಲ್ಕು ಮಕ್ಕಳೊಂದಿಗೆ ರಬ್ವಾಗೆ ತಲುಪಿದೆವು. ಹುಝೂರ್(ರಹ್) ಅವರನ್ನು ಭೇಟಿ ಮಾಡಿ, ಸೂಚನೆಗಳನ್ನು ಸ್ವೀಕರಿಸಿ ಹಿಂತಿರುಗಿ ಬಂದು ರಜೆಗಾಗಿ ಅರ್ಜಿ ಸಲ್ಲಿಸಿದರು ಮತ್ತು ಪ್ರಾರ್ಥನೆಯನ್ನು ಪ್ರಾರಂಭಿಸಿದರು ಏಕೆಂದರೆ ಆ ಸಮಯದಲ್ಲಿ ಸರ್ಕಾರದಿಂದ ವೈದ್ಯರು ಹೊರಗೆ ಹೋಗುವುದರ ಮೇಲೆ ನಿರ್ಬಂಧಗಳಿದ್ದವು ಮತ್ತು ಅದು ಭುಟ್ಟೋ ಸಾಹಿಬ್ ಅವರ ಯುಗವಾಗಿತ್ತು. ಆದರೆ ಹೇಗಾದರೂ ಅನುಮತಿ ಪಡೆದು ಹೊರಟು ಹೋದರು.

ಬಾಜಮಾತ್ ನಮಾಝ್‌ಗಳ ನಿರ್ವಹಣೆಗಾಗಿ ಏನೇ ತೊಂದರೆಗಳು ಬಂದರೂ ಅವು ಯಾವುದಾದರೂ ರೀತಿಯಲ್ಲಿ ಪರಿಹಾರವಾಗಲಿ ಎಂದು ಪ್ರಾರ್ಥಿಸಿ ಅಲ್ಲಾಹನು ಪರಿಹರಿಸಲಿ ಎಂದು ಪ್ರಾರ್ಥಿಸಿ ಬಾಜಮಾತ್ ನಮಾಝ್ ನಿರ್ವಹಿಸುವ ತೌಫೀಕ್ ಪಡೆಯುತ್ತಲೇ ಇದ್ದರು. ಸರ್ವಶಕ್ತನಾದ ಅಲ್ಲಾಹನು ನಮಗೆ ವಾಹನವನ್ನು ನೀಡಿದಾಗ ಅವರು ತಮ್ಮ ಸ್ನೇಹಿತರನ್ನು ಮಸೀದಿಗೆ ಕರೆದುಕೊಂಡು ಹೋಗುತ್ತಿದ್ದರು ಮತ್ತು ಅದರ ಬಗ್ಗೆ ತುಂಬಾ ಸಂತೋಷಪಡುತ್ತಿದ್ದರು ಎಂದು ಅವರು ಹೇಳುತ್ತಾರೆ. ಫಝ್ಲ್ ಮಸೀದಿಯ ಬಳಿ ಮನೆ ಸಿಕ್ಕಾಗ ಮಸೀದಿಗೆ ಹೋಗಿ ಐದು ಬಾರಿ ನಮಾಝ್ ನಿರ್ವಹಿಸುತ್ತೇನೆ ಎಂದು ಖುಷಿಪಟ್ಟರು. ಅವರು ಧರ್ಮದ ಸೇವೆಗಾಗಿ ಎಲ್ಲಾ ವಿಧಾನಗಳನ್ನು ಮತ್ತು ಪ್ರತಿಯೊಂದು ವಿಧಾನವನ್ನು ಬಳಸಿದರು. ಬೋಧಿಸಲು (ತಬ್ಲೀಗ್) ಯಾವುದೇ ಅವಕಾಶವನ್ನು ಕಳೆದುಕೊಳ್ಳುತ್ತಿರಲಿಲ್ಲ.

ಸಮಯಕ್ಕೆ ಸರಿಯಾಗಿ ಚಂದ ನೀಡುತ್ತಿದ್ದರು ಮತ್ತು ನಾವೆಲ್ಲರೂ ಹಾಗೆಯೇ ಮಾಡುವಂತೆ ಸಲಹೆ ನೀಡಿದರು. ಅಲ್ಲಾಹನು ಅವರನ್ನು ಮಗ್‌ಫಿರತ್ ಮತ್ತು ಕರುಣೆಯಿಂದ ವರ್ತಿಸಲಿ ಮತ್ತು ಅವರ ಮಕ್ಕಳಿಗೆ ಅವರ ಒಳ್ಳೆಯ ಕಾರ್ಯಗಳನ್ನು ಮುಂದುವರಿಸುವ ಸಾಮರ್ಥ್ಯವನ್ನು ನೀಡಲಿ.

ಮತ್ತೊಂದು ಜನಾಝ ಗ್ಹಾಯಿಬ್ ಇದೆ ಅದು ಡಾ. ಶಫೀಕ್ ಸೆಹಗಲ್ ಅವರ ಪತ್ನಿ ಮಾನ್ಯ ವಸೀಮಾ ಬೇಗಂ ಸಾಹಿಬ ಅವರದ್ದಾಗಿದೆ. ಶಫೀಕ್ ಸೆಹಗಲ್ ಸಾಹಿಬ್ ಅವರು ಮುಲ್ತಾನ್ ಜಿಲ್ಲೆಯ ಅಮೀರ್ ಆಗಿದ್ದರು ನಂತರ ನಾಯಿಬ್ ವಕೀಲುತ್ತಸ್ನೀಫ್ ಆಗಿಯೂ ಸೇವೆ ಸಲ್ಲಿಸಿದ್ದರು. ಅವರು ತೊಂಬತ್ತೊಂಬತ್ತನೇ ವಯಸ್ಸಿನಲ್ಲಿ (89) ನಿಧನರಾದರು. **ಇನ್ನಾ ಲಿಲ್ಲಾಹಿ ವ ಇನ್ನ ಇಲಾಹಿ ರಾಜಿಉನ್**. ದಿವಂಗತರು ಮೂಸಿಯಾಗಿದ್ದರು. ಪತಿಯೊಂದಿಗೆ ಮೂವರು ಗಂಡು ಮಕ್ಕಳನ್ನು ಅಗಲಿದ್ದಾರೆ. ಅವರ ಪತಿ ಡಾ. ಮುಹಮ್ಮದ್ ಶಫೀಕ್ ಸೆಹಗಲ್ ಸಾಹಿಬ್ ಅವರು ಬರೆಯುತ್ತಾರೆ: ನನ್ನ ಪತ್ನಿ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಸಹಾಬಿ ಹಝ್ರತ್ ಶೇಖ್ ಮುಶ್ತಾಖ್ ಹುಸೇನ್ ಸಾಹಿಬ್ ಅವರ ಮೊಮ್ಮಗಳು ಮತ್ತು ಲಾಹೋರ್‌ನ ನ್ಯಾಯಮೂರ್ತಿ ಶೇಖ್ ಬಶೀರ್ ಅಹ್ಮದ್ ಸಾಹಿಬ್ ಅವರ ಮಗಳು ಮತ್ತು ಸಯ್ಯಿದಾ ಉಮ್ಮೆ ವಸೀಮ್ ಸಾಹಿಬ ಅವರ ಸಹೋದರಿಯ ಪುತ್ರಿಯಾಗಿದ್ದರು. ಖಿಲಾಫತ್‌ನೊಂದಿಗೆ ಪ್ರತಿಯೊಂದು ಕಾಲಾವಧಿಯುಲ್ಲೂ ನಿಕಟ ಸಂಬಂಧ'ವನ್ನು ಹೊಂದಿದ್ದರು ಮತ್ತು ಪ್ರತಿ ಯುಗದಲ್ಲೂ ಕಲೀಫೇಟ್‌ನೊಂದಿಗೆ ನಿಷ್ಠೆಯಿಂದ ಸಂಬಂಧ ಹೊಂದಿದ್ದರು.

ಅವರ ಮೊಮ್ಮಗ ಮುಹಿಯುದ್ದೀನ್ ಸಾಹಿಬ್ ಹೇಳುತ್ತಾರೆ: ನನ್ನ ಅಜ್ಜಿಗೆ ತ್ಯಾಗದ ವಿಶೇಷ ದ್ರವ್ಯವಿತ್ತು. ಅವರು ರೂಹಾನಿ ಖಝಾಈನ್ ಅನ್ನು ಬಹಳ ಗಾಂಭೀರ್ಯದಿಂದ ಅಧ್ಯಾಯನ ಮಾಡುತ್ತಿದ್ದರು. ನನ್ನ ಅಜ್ಜ ವಖ್ಫೆ ಝಿಂದಗಿ ಆಗಿದ್ದರಿಂದ ಒಮ್ಮೆ ನಾನು ಅವರಲ್ಲಿ ನೀವು ವಖ್ಫ್ ಆಗಿದ್ದೀರ? ಎಂದು ಪ್ರಶ್ನಿಸಿದೆ. ಅದಕ್ಕೆ ಅವರಿ ಹೀಗೆ ಉತ್ತರಿಸಿದರು, ಖಲೀಫರು ಎಲ್ಲಾರು ಸಹ ವಾಖಿಫೀನರ ಪತ್ನಿಯರು ಸಹ ವಾಖಿಫೀನೆ ಝಿಂದಗೀ ಆಗಿದ್ದಾರೆ ಎಂದು ಹೇಳಿರುವರು.

ಆಯಿಷಾ ಅವರ ಸೊಸೆ ಮತ್ತು ಸಹೋದರನ ಒಉತ್ರಿಯೂ ಕೂಡ ಆಗಿದ್ದಾರೆ ಅವರು ಹೇಳಖಿತ್ತಾರೆ: ನನ್ನ ಸೋದರತ್ತೆಯು ಬಹಳ ಸುಂದರ ವ್ಯಕ್ತಿತ್ವವನ್ನು ಹೊಂದಿದ್ದರು. ನನ್ನ ಪ್ರಾಣ, ಸಂಪತ್ತು, ಸಮಯ ಮತ್ತು ಮಕ್ಕಳನ್ನು ತ್ಯಾಗ ಮಾಡಲು ನಾನು ಸಿದ್ಧ ಎಂದು ಲಜ್ನಾದಲ್ಲಿ ಪುನರಾವರ್ತಿಸಿದ ಪ್ರತಿಜ್ಞೆ ಇದಕ್ಕೆ ಪ್ರಾಯೋಗಿಕ ಉದಾಹರಣೆಯಾಗಿದೆ, ನನ್ನ ಮದುವೆಯ ನಂತರ ಅವರು ನನಗೆ ಅನೇಕ ತರಬೇತಿ ವಿಷಯಗಳಲ್ಲಿ ಮಾರ್ಗದರ್ಶನ ನೀಡಿದರು ಎಂದು ಅವರು ಹೇಳುತ್ತಾರೆ. ಅವರು ನನಗೆ ಪವಿತ್ರ ಖುರ್‌ಆನ್‌ನ ಅಕ್ಷರಶಃ ಅನುವಾದವನ್ನೂ ಕಲಿಸಿದರು.

ಮತ್ತೋರ್ವ ಸೊಸೆ ಝಕಿಯ ಹೇಳುತ್ತಾರೆ: ನನ್ನ ಚಿಕ್ಕಮ್ಮ ಬಡ ಮತ್ತು ಆದರ್ಶಪ್ರಾಯ ಮಹಿಳೆಯಾಗಿದ್ದರು, ಎಲ್ಲರನ್ನು ಪ್ರೀತಿಸುತ್ತಿದ್ದರು. ಪತಿಯ ಯಾವ ಮಾತನ್ನು ತಿರಸ್ಕರಿಸಲಿಲ್ಲ. ಅವರು ಯಾವಾಗಲೂ ಜನರಿಗೆ ಸಹಾಯ ಮಾಡಲು ಸಿದ್ಧರಾಗಿರುವ ಉಪಯುಕ್ತ ಜೀವಿಯಾಗಿದ್ದರು. ನಯಿಮಾ ಜಮೀಲ್ ಸಾಹಿಬಾ ಅವರ ಸಹೋದರಿ, ಅವರು ನನ್ನ ತಾಯಿಯಂತೆ ಕರುಣಾಮಯಿಯಾಗಿದ್ದರು ಎಂದು ಹೇಳುತ್ತಾರೆ. ನಾನು ಐವತ್ತನೇ ವಯಸ್ಸಿನಲ್ಲಿ ವಿಧವೆಯಾಗಿದ್ದೆ, ಆಗ ಸರ್ವಶಕ್ತನಾದ ಅಲ್ಲಾಹನು ಅವರನ್ನು ನನಗಾಗಿ ದೇವದೂತನನ್ನಾಗಿ ಮಾಡಿದನು. ಯಾವಾಗಲೂ ನನಗೆ ಎಲ್ಲಾ ರೀತಿಯಲ್ಲಿ ಸಹಾಯ ಮತ್ತು ಮಾರ್ಗದರ್ಶನ ಮಾಡುತ್ತಿದ್ದರು. ಅವರು ಆರಾಧಕಳಾಗಿದ್ದರೂ, ಹುಖೂಖುಲ್ ಇಬಾದ್‌ನಲ್ಲಿ ಅನೇಕ ಹುಡುಗಿಯರ ಮದುವೆಯ ಜವಾಬ್ದಾರಿಯನ್ನು ಸಹ ತೆಗೆದುಕೊಂಡರು ಎಂದು ಅವರು ಹೇಳುತ್ತಾರೆ. ಯಾವ ಬಡ ಹಳ್ಳಿಯವರನ್ನೂ ಸಹ ತನಗಿಂತ ಕಡಿಮೆ ಎಂದು ಪರಿಗಣಿಸಲಿಲ್ಲ. ಅಗತ್ಯವಿರುವ ಉದ್ಯೋಗಿಗಳಿಗೆ ಆರ್ಥಿಕ ನೆರವು ನೀಡಲು ಅವರು ಶ್ರಮಿಸಿದರು.

ಅವರಿಗೂ ಅಲ್ಲಾಹನು ಮಗ್‌ಫಿರತ್ ಮತ್ತು ಕರುಣೆಯನ್ನು ದಯಪಾಲಿಸಲಿ. ಮತ್ತು ಅವರ ಮಕ್ಕಳು ಅವರ ಒಳ್ಳೆಯ ಕಾರ್ಯಗಳನ್ನು ಮುಂದುವರಿಸಲಿ. ಆಮೀನ್ ...*...*...*...

*(ಪುಟ ಸಂಖ್ಯೆ 12ರ ಉಳಿದ ಭಾಗ)*

ನೀರುಚೀಲವನ್ನು ನೇತುಹಾಕಲು ಕೋಣೆಯ ಒಂದು ಬದಿಯಲ್ಲಿ ಇರಿಸಿದೆವು.

ಹಝ್ರತ್ ಫಾತಿಮಾ(ರ) ಅವರ ಮದುವೆಗಿಂತ ಉತ್ತಮ ದಾಂಪತ್ಯವನ್ನು ನಾವು ನೋಡಿಲ್ಲ. ವಲಿಮಾದಲ್ಲಿ ಖಜೂರ, ಬಾರ್ಲಿ, ಪನ್ನೀರ್ ಮತ್ತು ಹೈಸ್ ಅನ್ನು ಒಳಗೊಂಡಿತ್ತು. ಹೈಸ್ ಅಂದರೆ ಖಜೂರ, ಪನ್ನೀರ್ ಹಾಗೂ ತುಪ್ಪದಿಂದ ಮುಂತಾದವಿಗಳನ್ನು ಸೇರಿಸಿ ಸಿದ್ಧಗೊಳಿಸುವ ಒಂದು ಪದಾರ್ಥವಾಗಿತ್ತು. ಹಝ್ರತ್ ಅಸ್ಮಾ ಬಿಂತ್ ಉಮೈಸ್(ರ) ರವರು ಆ ಕಾಲದಲ್ಲಿ ಈ ವಲೀಮಕ್ಕಿಂತ ಉತ್ತಮವಾದ ವಲೀಮ ಇರಲಿಲ್ಲ ಎಂದು ಹೇಳುತ್ತಾರೆ. (ಶರ್ಹ್ ಅಲ್-ಉಲಾಮಾ ಅಲ್-ಝುರ್ಕಾನಿ ಅಲಲ್-ಮವಾಹಿಬ್ ಅಲ್-ದಾನಿ, ಸಂಪುಟ. 2, ಪುಟಗಳು 357 ರಿಂದ 366, ದಾರುಲ್ ಕುತುಬ್ ಅಲ್-ಇಲಾಮಿಯಾ 1996) (ತಾರಿಖ್ ಅಲ್-ಖಾಮಿಸ್, ಭಾಗ 2, ಪುಟ 77, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 2009) (ಸುನನ್ ಇಬ್ನ್ ಮಜಾ, ಕಿತಾಬುನ್ನಿಕಾಹ್, ಹದೀಸ್-1911) (ಅತ್ತಬಖಾತುಲ್ ಕುಬ್ರ, ಭಾಗ-8, ಪುಟ-19, ದಾರುಲ್ ಕುತುಬ್ ಇಲ್ಮಿಯ ಬೈರೂತ್ 1990) (ಲುಗಆತುಲ್ ಹದೀಸ್, ಸಂಪುಟ-1, ಪುಟ-542, ನುಅನಿ ಕುತುಬ್ ಖಾನ ಲಾಹೋರ್ 2005)

ಇದು ಸರಳತೆಗೆ ಉದಾಹರಣೆಯಾಗಿರುವ ಮದುವೆ ಮತ್ತು ವಲೀಮ ಆಗಿದೆ. ಹಝ್ರತ್ ಫಾತಿಮಾ(ರ) ಮತ್ತು ಹಝ್ರತ್ ಅಲಿ(ರ) ಅವರ ವಿವಾಹವನ್ನು ಸೀರತ್ ಖಾತಮುನ್ನಬೀಈನ್‌ನಲ್ಲಿ ವಿವರಾತ್ಮಕವಾಗಿ ಉಲ್ಲೇಖಿಸಲಾಗಿದೆ. ಅದನ್ನೂ ವಿವರಿಸುತ್ತೇನೆ. ಕೆಲವು ವಿಷಯಗಳು ಅದರಲ್ಲಿ ಅನಗತ್ಯವಾಗಿವೆ, ಆದ್ದರಿಂದ ಅದನ್ನು ಪ್ರಸ್ತಾಪಿಸುವುದು ಅವಶ್ಯಕವಾಗಿದೆ. "ಹಝ್ರತ್ ಫಾತಿಮಾ(ರ) ಅವರು ಹಝ್ರತ್ ಖದೀಜಾ(ರ)ರವರ ಹೊಟ್ಟೆಯಿಂದ ಜನಿಸಿದ ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿವ ಸಲ್ಲಮ್ ಅವರ ಮಕ್ಕಳಲ್ಲಿ ಕಿರಿಯರು ಎಂದು ಬರೆಯಲಾಗಿದೆ. ಮತ್ತು ಅವರು(ಸ) ತನ್ನ ಮಕ್ಕಳಲ್ಲಿ ಹಝ್ರತ್ ಫಾತಿಮಾ(ರ)ರನ್ನು ಹೆಚ್ಚು ಪ್ರೀತಿಸುತ್ತಿದ್ದರು ಮತ್ತು ಅವರ ವೈಯಕ್ತಿಕ ಗುಣಗಳಿಂದಾಗಿ ಅವರು ಈ ವಿಶೇಷ ಪ್ರೀತಿಗೆ ಹೆಚ್ಚು ಅರ್ಹರಾಗಿದ್ದರು. ಈಗ ಅವರಿಗೆ ಸುಮಾರು ಹದಿನೈದು ವರ್ಷವಾಗಿತ್ತು ಮತ್ತು ಮದುವೆಯ ಸಂದೇಶಗಳು ಬರಲಾರಂಭಿಸಿದವು. ಮೊದಲನೆಯದಾಗಿ, ಹಝ್ರತ್ ಅಬುಬಕರ್(ರ) ಅವರು ಹಝ್ರತ್ ಫಾತಿಮಾ(ರ) ಅವರನ್ನು ವಿನಂತಿಸಿದರು, ಆದರೆ ಹಝ್ರತ್ ಪೈಗಂಬರ್(ಸ) ಅವರು ಕ್ಷಮೆಯಾಚಿಸಿದರು. ನಂತರ ಹಝ್ರತ್ ಉಮರ್(ರ) ಅವರು ವಿನಂತಿಸಿದರು, ಆದರೆ ಅವರ ವಿನಂತಿಯನ್ನು ಸಹ ಸ್ವೀಕರಿಸಲಿಲ್ಲ. ಅದರ ನಂತರ, ಈ ಇಬ್ಬರು ಹಿರಿಯರು, ಹಝ್ರತ್ ಪೈಗಂಬರ್(ಸ) ಅವರ ಉದ್ದೇಶವು ಹಝ್ರತ್ ಅಲಿ(ರ) ಅವರ ಬಗ್ಗೆ ತಿಳಿದಿತ್ತು ಎಂದು ಅರ್ಥಮಾಡಿಕೊಂಡರು, ಹಝ್ರತ್ ಫಾತಿಮಾ(ರ) ಅವರ ಬಗ್ಗೆ ವಿನಂತಿಯನ್ನು ಮಾಡಲು ಹಝ್ರತ್ ಅಲಿ (ರ.ಅ) ಅವರನ್ನು ಒತ್ತಾಯಿಸಿದರು. ಹಝ್ರತ್ ಅಲಿ(ರ) ಅವರು ಬಹುಶಃ ಈಗಾಗಲೇ ಅಪೇಕ್ಷಿಸಿದ್ದರು ಆದರೆ ಮುಜುಗರತೆಯಿಂದ ಮೌನವಾಗಿದ್ದರು, ತಕ್ಷಣವೇ ಹಝ್ರತ್ ಪೈಗಂಬರ್(ಸ) ಅವರ ಸೇವೆಗೆ ಬಂದು ವಿನಂತಿಯನ್ನು ಸಲ್ಲಿಸಿದರು. ಮತ್ತೊಂದೆಡೆ, ಹಝ್ರತ್ ಪೈಗಂಬರ್(ಸ) ಅವರು ಹಝ್ರತ್ ಫಾತಿಮಾ(ರ) ಅವರನ್ನು ಹಝ್ರತ್ ಅಲಿ(ರ) ಅವರೊಂದಿಗೆ ವಿವಾಹವಾಗಬೇಕೆಂದು ದೈವಿಕ ಬಹಿರಂಗಪಡಿಸುವಿಕೆಯಿಂದ ಸೂಚಿಸಲಾಗಿತ್ತು, ಆದ್ದರಿಂದ ಹಝ್ರತ್ ಅಲಿ(ರ) ಅವರು ವಿನಂತಿಯನ್ನು ಸಲ್ಲಿಸಿದಾಗ, ಅವರು(ಸ) ಹೇಳಿದರು: ನನಗೆ ಈಗಾಗಲೇ ಅದರ ಬಗ್ಗೆ ದೈವಿಕ ಸೂಚನೆ ಲಭಿಸಿದೆ. ನಂತರ ಅವರು(ಸ) ಹಝ್ರತ್ ಫಾತಿಮಾ(ರ) ಅವರನ್ನು ಇದರ ಬಗ್ಗೆ ಅವರ ಸಮ್ಮತ ಕೇಳಿದಾಗ ಅವರು ಮೌನವಾದರು, ಮೌನವು ಸಹ ಒಂದು ರೀತಿಯ ತೃಪ್ತಿಯ ಅಭಿವ್ಯಕ್ತಿಯಾಗಿದೆ ಎಂದು ಬರೆಯುತ್ತಾರೆ. ಆದ್ದರಿಂದ ಹಝ್ರತ್ ಪೈಗಂಬರ್(ಸ) ಅವರು ಮುಹಾಜಿರೀನ್‌ಗಳು ಮತ್ತು ಅನ್ಸಾರ್‌ಗಳ ಗುಂಪನ್ನು ಒಟ್ಟುಗೂಡಿಸಿದರು ಮತ್ತು ಹಝ್ರತ್ ಅಲಿ(ರ) ಮತ್ತು ಫಾತಿಮಾ(ರ) ರ ವಿವಾಹವನ್ನು ನೆರವೇರಿಸಿದರು. ಇದು ಹಿಜ್ರಿ 2 ರ ಆರಂಭದಲ್ಲಿ ಅಥವಾ ಮಧ್ಯದಲ್ಲಿ ನಡೆದ ಘಟನೆಯಾಗಿದೆ. ಅದರ ನಂತರ, ಯುದ್ಧವು ಮುಗಿದಾಗ, ಬಹುಶಃ ಹಿಜ್ರ 2 ರ ದುಲ್-ಹಜ್ಜಾ ತಿಂಗಳಲ್ಲಿ ರುಖ್ಸತಾನವನ್ನು ನಿಗದಿಪಡಿಸಿದರು. ಹಝ್ರತ್ ಪೈಗಂಬರ್(ಸ) ಅವರು ಹಝ್ರತ್ ಅಲಿ(ರ) ಅವರನ್ನು ಕರೆಸಿ ನಿಮ್ಮ ಬಳಿ ಮಹರ್ ಪಾವತಿಸಲು ಏನಾದರೂ ಇದೆಯೇ ಅಥವಾ ಇಲ್ಲವೇ ಎಂದು ವಿಚಾರಿಸಿದರು. ಹಝ್ರತ್ ಅಲಿ(ರ) ಹೇಳಿದರು. ಯಾ ರಸೂಲಲ್ಲಾಹ್(ಸ)! ನನ್ನ ಬಳಿ ಏನೂ ಇಲ್ಲ. ಅವರು ಹೇಳಿದರು, ಆ ದಿನ ನಾನು ನಿಮಗೆ ನೀಡಿದ ರಕ್ಷಾಕವಚ (ಅಂದರೆ ಬದ್ರ್ ಮುಘನಾಮ್ನಿಂದ) ಏನಾಯಿತು? ಹಝ್ರತ್ ಅಲಿ(ರ) ಹೇಳಿದರು, ಅದಕ್ಕೆ ಹಝ್ರತ್ ಅಲಿ ಹೇಳಿದರು: ಇದು ನನ್ನ ಬಳಿ ಇದೆ. ಅವರು(ಸ) ಹೇಳಿದರು: ಅದನ್ನು ತನ್ನಿ. ಆದ್ದರಿಂದ ಈ ರಕ್ಷಾಕವಚವನ್ನು ನಾನೂರಾ ಎಂಬತ್ತು ದಿರ್ಹಮ್‌ಗಳಿಗೆ ಮಾರಾಟ ಮಾಡಲಾಯಿತು ಮತ್ತು ಹಝ್ರತ್ ಪೈಗಂಬರ್(ಸ)ರವರು ಆ ಮೊತ್ತದಿಂದ ಮದುವೆಯ ವೆಚ್ಚವನ್ನು ಒದಗಿಸಿದರು. ಹಝ್ರತ್ ಪೈಗಂಬರ್(ಸ) ಅವರು ಫಾತಿಮಾಗೆ ನೀಡಿದ ವಧುದಕ್ಷಿಣೆಯಲ್ಲಿ ಒಂದು ನೇಯ್ದ ಬಟ್ಟೆಯಾಗಿತ್ತು. ಒಣಗಿದ ತಾಳೆ ಎಲೆಗಳು ಮತ್ತು ಕಸ್ತೂರಿಯಿಂದ ತುಂಬಿದ ಚರ್ಮದ ಚೀಲ. ಮತ್ತು ಹಝ್ರತ್ ಫಾತಿಮಾ(ರ) ಅವರ ವರದಕ್ಷಿಣೆಯಲ್ಲಿ ಅವರು ಗಿರಣಿಯನ್ನೂ ನೀಡಿದರು ಎಂಬ ವರದಿಯೂ ಇದೆ. ಈ ವಿಷಯಗಳ ಪೂರ್ಣಗೊಂಡಾಗ ಮನೆಯ ಚಿಂತನೆ ಇತ್ತು. ಇಲ್ಲಿಯವರೆಗೆ ಹಝ್ರತ್ ಅಲಿ(ರ) ಅವರು ಹಝ್ರತ್ ಪೈಗಂಬರ್(ಸ.ಅ) ಅವರೊಂದಿಗೆ ಮಸೀದಿಯ ಕೊಠಡಿ ಇತ್ಯಾದಿಗಳಲ್ಲಿ ವಾಸಿಸುತ್ತಿದ್ದರು, ಆದರೆ

ಮದುವೆಯ ನಂತರ ಪತಿ ಮತ್ತು ಪತ್ನಿ ವಾಸಿಸಲು ಪ್ರತ್ಯೇಕ ಮನೆಯನ್ನು ಹೊಂದುವುದು ಅಗತ್ಯವಾಗಿತ್ತು, ಆದ್ದರಿಂದ ರಸೂಲುಲ್ಲಾಹ್ (ಸ) ಹೇಳಿದರು. ಹಝ್ರತ್ ಅಲಿ(ರ) ಈಗ ನೀವಿಬ್ಬರೂ ವಾಸಿಸಬಹುದಾದ ಮನೆಯನ್ನು ನೀವು ಕಂಡುಕೊಳ್ಳುತ್ತೀರಿ. ಹಝ್ರತ್ ಅಲಿ(ರ) ತಾತ್ಕಾಲಿಕ ಮನೆಯನ್ನು ಏರ್ಪಡಿಸಿದರು ಮತ್ತು ಹಝ್ರತ್ ಫಾತಿಮಾ(ರ) ಅವರ ರುಖ್ಸತಾನ ಅಲ್ಲಾಯಿತು. ಅದೇ ದಿನ, ರುಖ್ಸತಾನದ ನಂತರ, ಹಝ್ರತ್ ಪೈಗಂಬರ್ (ಸ) ಅವರ ಮನೆಗೆ ಭೇಟಿ ನೀಡಿದರು ಮತ್ತು ಸ್ವಲ್ಪ ನೀರನ್ನು ತರೆಸಿ ಅದರ ಮೇಲೆ ದುಆ ಮಾಡಿಸಿದರು ಮತ್ತು ನಂತರ ಆ ನೀರನ್ನು ಹಝ್ರತ್ ಫಾತಿಮಾ(ರ) ಮತ್ತು ಹಝ್ರತ್ ಅಲಿ(ರ) ಇಬ್ಬರಿಗೂ ಸಿಂಪಡಿಸಿ, ಈ ಕೆಳಗಿನ ಮಾತುಗಳನ್ನು ಹೇಳಿದರು: **ಅಲ್ಲಹುಮ್ಮ ಬಾರಿಕ್ ಫೀಹಿಮಾ ವ ಬಾರಿಕ್ ಅಲೈಹಿಮಾ ವಬಾರಿಕ್ ಲಹುಮಾ ನಸ್ಲಹುಮಾ."** ಈ ಪ್ರಾರ್ಥನೆಯನ್ನು ವಿವಾಹಿತರಾಗುವ ಜೋಡಿಗಳಿಗಾಗಿ ಅವರ ಹೆತ್ತವರು ಮಾಡಬೇಕು.

ಇಂದು ಲೌಕಿಕ ಆಸೆ-ಅಭಿಲಾಷೆಗಳ ಕಾರಣದಿಂದ ವಿವಾಹದ ನಂತರ ಹುಡುಗ-ಹುಡುಗಿಯರ ನಡುವೆ ಸಮಸ್ಯೆಗಳು ತಲೆದೋರುತ್ತವೆ. ಈಗ ಅದು ವರ್ಧಿಸುತ್ತಲೂ ಇವೆ. ದೀನಿಗೆ ಆದ್ಯತೆ ನೀಡುವುದಾದರೆ ಮತ್ತು ಈ ರೀತಿಯಲ್ಲಿ ದುಆ ಮಾಡಿದರೆ ಹಾಗೂ ತಂದೆತಾಯಂದಿರು ಸಹ ತಮ್ಮ ಪಾತ್ರವನ್ನು ನಿರ್ವಹಿಸುವುದಾದರೆ ಸಂಬಂಧ ನೆಲೆನಿಲ್ಲುವುದು.

ಆದಾಗ್ಯೂ, ಈ ದುಆವಿನ ಅರ್ಥವೇನೆಂದರೆ, ಹೇ ನನ್ನ ಅಲ್ಲಾಹ್, ನೀನು ಅವರಿಬ್ಬರ ಸಂಬಂಧದಲ್ಲಿ ಅನುಗ್ರಹವನ್ನು ಉಂಟುಮಾಡು, ಅವರ ಇತರರೊಂದಿಗೆ ಇರಿಸುವ ಸಂಬಂಧದಲ್ಲಿ ಅನುಗ್ರಹವನ್ನು ಇರಿಸು. ಅವರ ಸಂತಾನಗಳಲ್ಲಿ ಅನುಗ್ರಹವನ್ನು ಇರಿಸು. ತದನಂತರ ಅವರು ಹೊಸ ದಂಪತಿಗಳನ್ನು ಒಂಟಿಯಾಗಿ ಬಿಟ್ಟು ಹಿಂತಿರುಗಿದರು. ಇದಾದ ನಂತರ ಒಂದು ದಿನ ಹಝ್ರತ್ ಪೈಗಂಬರ್(ಸ) ಹಝ್ರತ್ ಫಾತಿಮಾ(ರ) ಅವರ ಮನೆಗೆ ಹೋದಾಗ, ಹಝ್ರತ್ ಫಾತಿಮಾ (ರ) ಅವರು ಹಝ್ರತ್ ಪೈಗಂಬರ್(ಸ) ರನ್ನು ಕೇಳಿದರು, ಹರಿಸ ಬಿನ್ ನುಅ್‌ಮಾನ್ ಅನ್ಸಾರಿ (ರ) ಅವರಿಗೆ ಹಲವಾರು ಮನೆಗಳಿವೆ, ಆದ್ದರಿಂದ ಯಾವುದಾದರು ಒಂದು ಮನೆಯನ್ನು ಖಾಲಿ ಮಾಡಲು ಹೇಳಿ." ಅದಕ್ಕೆ ಹಝ್ರತ್ ಪೈಗಂಬರ್(ಸ) ಹೇಳಿದರು: ಅವರು ಈಗಾಗಲೇ ನಮಗಾಗಿ ಅನೇಕ ಮನೆಗಳನ್ನು ಖಾಲಿ ಮಾಡಿದ್ದಾರೆ, ಈಗ ನಾನು ಅವರನ್ನು ಹೇಳಲು ನಾಚಿಕೆಪಡುತ್ತೇನೆ." ಹರಿಸಾ ಅವರಿಗೆ ಈ ವಿಷಯ ಹೇಗೋ ತಿಳಿಯಿತು, ಹಾಗಾಗಿ ಅವರು ಓಡಿ ಬಂದು ಹಝ್ರತ್ ಪೈಗಂಬರ್(ಸ.ಅ) ಅವರನ್ನು ಹೇಳಿದರು, ಯಾ ರಸೂಲಲ್ಲಾಹ್(ಸ)! ನನ್ನ ಬಳಿ ಇರುವುದೆಲ್ಲವು ಹುಝೂರ್ ಅವರಿಗೆ ಹಾಗೂ ಅಲ್ಲಾಹನಿಗೆ ಸೇರಿದ್ದು! ನೀವು ನನ್ನನ್ನು ಸ್ವೀಕರಿಸಲು ಕೇಳುವುದು ನನ್ನಲ್ಲಿರುವದಕ್ಕಿಂತ ಹೆಚ್ಚಿನ ಸಂತೋಷವನ್ನು ನೀಡುತ್ತದೆ ಮತ್ತು ನಂತರ ಈ ಪ್ರಾಮಾಣಿಕ ಸಹಾಬಿ ತನ್ನ ಸ್ವಂತ ಮನೆಯನ್ನು ಖಾಲಿ ಮಾಡಿದರು ಮತ್ತು ಹಝ್ರತ್ ಅಲಿ ಮತ್ತು ಫಾತಿಮಾ ಅಲ್ಲಿಯೇ ಇದ್ದರು. (ಸೀರತ್ ಖಾತಮನ್ನಬೀಈನ್, ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್ ಎಂ.ಎಮ ಪುಟ-455-456)

ಹಝ್ರತ್ ಅಲಿ(ರ.ಅ) ಮತ್ತು ಹಝ್ರತ್ ಫಾತಿಮಾ(ರ.ಅ) ತಮ್ಮ ಕಷ್ಟ ಮತ್ತು ಬಡತನದ ನಡುವೆಯೂ ಸಂತೃಪ್ತಿಯ ಉದಾಹರಣೆ ತೋರಿಸುತ್ತಿದ್ದರು. ಹೀಗಾಗಿ, ಹದೀಸ್‌ನಲ್ಲಿ ಹೀಗೆ ಒಂದು ಉಲ್ಲೇಖವಿದೆ ಹಝ್ರತ್ ಅಲಿ(ರ) ಹೇಳುತ್ತಾರೆ: ಹಝ್ರತ್ ಫಾತಿಮಾ (ರ.ಅ) ಅವರು ಬೀಸುಕಲ್ಲು (ಗಿರಣಿ) ನಡೆಸುತ್ತಿದ್ದಾಗ ಕೈಯಲ್ಲಿ ನೋವಿನಿಂದ ಬಳಲುತ್ತಿದ್ದರು ಮತ್ತು ಕೆಲವು ಖೈದಿಗಳು ಹಝ್ರತ್ ಪೈಗಂಬರ್(ಸ) ಅವರ ಬಳಿಗೆ ಬಂದಾಗ ಅವರು ಹಝ್ರತ್ ಪೈಗಂಬರ್(ಸ) ಬಳಿಗೆ ಹೋದಾಗ ಹಝ್ರತ್ ಪೈಗಂಬರ್(ಸ) ಅವರು ಸಿಗಲಿಲ್ಲ. ಅದಕ್ಕೆ ಅವರು(ರ) ಹಝ್ರತ್ ಆಯಿಷಾ(ರ) ಅವರನ್ನು ಭೇಟಿ ಮಾಡಿ ಬಂದ ಕಾರಣ ಹೇಳಿದರು. ಹಝ್ರತ್ ಪೈಗಂಬರ್(ಸ) ಅವರು ಮನೆಗೆ ಹಿಂದಿರುಗಿದಾಗ, ಹಝ್ರತ್ ಆಯಿಷಾ(ರ) ಹಝ್ರತ್ ಫಾತಿಮಾ(ರ) ತನ್ನ ಬಳಿಗೆ ಬಂದ ಬಗ್ಗೆ ಹೇಳಿದರು. ಹಝ್ರತ್ ಫಾತಿಮಾ(ರ) ಹೇಳುತ್ತಾರೆ: ಹಝ್ರತ್ ಪೈಗಂಬರ್(ಸ) ಅವರು ನಮ್ಮ ಮನೆಗೆ ನಾವು ನಮ್ಮ ಹಾಸಿಗೆಯ ಮೇಲೆ ಮಲಗಿರುವಾಗ ಬಂದರು. ನಾವು ನಿಲ್ಲಲು ಬಯಸಿದಾಗ ಹಝ್ರತ್ ಪೈಗಂಬರ್(ಸ) ಹೇಳಿದರು: ನೀವು ನಿಮ್ಮ ಸ್ಥಳಗಳಲ್ಲಿಯೇ ಇರಿ. ನಂತರ ಅವರು ನಮ್ಮ ಬಳಿ ಕುಳಿತುಕೊಂಡು ಹೇಳಿದರು: ನಾನು ನಿಮ್ಮಿಬ್ಬರಿಗೂ ನೀವು ಕೇಳಿದ್ದಕ್ಕಿಂತ ಉತ್ತಮವಾದದ್ದನ್ನು ಹೇಳಬಾರದೇ? ಅದೇನೆಂದರೆ, ನೀವಿಬ್ಬರೂ ಹಾಸಿಗೆಯ ಮೇಲೆ ಮಲಗಿರುವಾಗ ಮೂವತ್ನಾಲ್ಕು ಬಾರಿ ಅಲ್ಲಾಹು ಅಕ್ಬರ್, ಮೂವತ್ತಮೂರು ಬಾರಿ ಸುಬ್‌ಹಾನಲ್ಲಾಹ್ ಮತ್ತು ಮೂವತ್ತಮೂರು ಬಾರಿ ಅಲ್ಹಮ್ದುಲಿಲ್ಲಾಹ್ ಎಂದು ಹೇಳಿರಿ. ಇದು ನಿಮ್ಮಿಬ್ಬರಿಗೂ ಸೇವಕನಿಗಿಂತ ಉತ್ತಮವಾಗಿದೆ.

ಹಝ್ರತ್ ಅಬು ಹುರೈರಾ (ರ) ಅವರು ಹೇಳುತ್ತಾರೆ, ಹಝ್ರತ್ ಫಾತಿಮಾ(ರ) ಹಝ್ರತ್ ಪೈಗಂಬರ್(ಸ) ಬಳಿಗೆ ಸೇವಕನನ್ನು ಕೇಳಲು ಬಂದರು ಮತ್ತು ಕೆಲಸಗಳ ಬಗ್ಗೆ ದೂರು ನೀಡಿದರು, ಅದಕ್ಕೆ ಹಝ್ರತ್ ಪೈಗಂಬರ್(ಸ) ಅವರು ಹೇಳಿದರು: ನೀವು ನಮ್ಮೊಂದಿಗೆ ಈ ಸೇವಕನನ್ನು ಕಾಣುವುದಿಲ್ಲ. ಹಝ್ರತ್ ಪೈಗಂಬರ್(ಸ) ಹೇಳಿದರು: ಸೇವಕನಿಗಿಂತ ನಿಮಗೆ ಉತ್ತಮವಾದದ್ದನ್ನು ನಾನು ನಿಮಗೆ ಹೇಳಬಾರದೇ? ನೀವು ನಿಮ್ಮ ಹಾಸಿಗೆಗೆ ಹೋದಾಗ, 33 ಬಾರಿ ಸುಬ್‌ಹಾನಲ್ಲಾಹ, 33 ಬಾರಿ ಅಲ್ಹಮ್ದುಲಿಲ್ಲಾಹ್ ಮತ್ತು 34 ಬಾರಿ ಅಲ್ಲಾಹು ಅಕ್ಬರ್ ಎಂದು ಹೇಳಿರಿ. ಇದು ಮುಸ್ಲಿಮ್‌ನ ವರದಿಯಾಗಿದೆ. (ಸಹೀಹ್ ಮುಸ್ಲಿಂ, ಕಿತಾಬುಝ್ಝಿಕ್ರ್, ಹದೀಸ್-6915-6918)

ಹಝ್ರತ್ ಮುಸ್ಲೆಹ್ ಮೌಊದ್(ರ) ರವರು ಹಝ್ರತ್ ಪೈಗಂಬರ್(ಸ) ಅವರ ಜೀವನವನ್ನು ವಿವರಿಸುವಾಗ ಹೇಳುತ್ತಾರೆ: ಬುಖಾರಿಯನ್ನು ಉಲ್ಲೇಖಿಸಿ ಈ ಘಟನೆಯನ್ನು ವಿವರಿಸಿದ್ದಾರೆ, ಅವರು ಹೇಳಿದರು, "ಒಮ್ಮೆ ಬೀಸುಕಲ್ಲು ಚಲಾಯಿಸುವುದರಿಂದ ಕೈ ನೋವು ಆಗುತ್ತಿದೆ ಎಂದು ಹೇಳುತ್ತಾ ಒಬ್ಬ ಸೇವಕನ ಏರ್ಪಾಡನ್ನು ಮಾಡಲು ಹಝ್ರತ್ ಫಾತಿಮ(ರ) ಹಝ್ರತ್ ಪೈಗಂಬರ್(ಸ)ರೊಡನೆ ವಿನಂತಿಸಿದಾಗ, ಅವರು ಹಝ್ರತ್ ಅಲಿ(ರ) ಮತ್ತು ಹಝ್ರತ್ ಫಾತಿಮ(ರ)ರೊಡನೆ ಹೀಗೆ ಹೇಳಿದರು: ನೀವು ಹಾಸಿಗೆಯಲ್ಲಿ ಮಲಗುವಾಗ 34 ಬಾರಿ ಅಲ್ಲಾಹು ಅಕ್ಬರ್, 33 ಬಾರಿ ಸುಬ್‌ಹಾನಲ್ಲಾಹ್ ಮತ್ತು 33 ಬಾರಿ ಅಲ್‌ಹಮ್ದುಲಿಲ್ಲಾಹ್ ಹೇಳಿರಿ. ಇದು ನಿಮಗಿಬ್ಬರಿಗೂ ಸೇವಕನಿಗಿಂತ ಉತ್ತಮವಾಗಿದೆ. ಸೇವಕನನ್ನು ಒದಗಿಸಿ ಕೊಡುವುದು ಹಝ್ರತ್ ಪೈಗಂಬರ್(ಸ)ರಿಗೆ ಕಷ್ಟದ ಸಂಗತಿಯಾಗಿರಲಿಲ್ಲ. ಆದರೆ ಜನರು ಒಂದು ಸಂಗತಿಯನ್ನು ಮತ್ತೊಂದು ಸಂಗತಿಯಾಗಿ ಅರ್ಥ ಮಾಡಿಕೊಳ್ಳಬಹುದಾದ ಸಾಧ್ಯತೆಯಿತ್ತು. ಅಲ್ಲದೆ ಪ್ರಜೆಗಳ ಸಂಪತ್ತನ್ನು ಸ್ವಂತಕ್ಕಾಗಿ ಉಪಯೋಗಿಸುವುದು ಸರಿಯೆಂದು ರಾಜರುಗಳು ಭಾವಿಸುವ ಸಾಧ್ಯತೆಯಿತ್ತು. ಆದ್ದರಿಂದ ಮುಂಜಾಗ್ರತೆ ಎಂಬ ರೀತಿಯಲ್ಲಿ ಹಝ್ರತ್ ಪೈಗಂಬರ್(ಸ) ತನ್ನ ಬಳಿ ವಿತರಣೆಗಾಗಿ ಬರುತ್ತಿದ್ದ ಗುಲಾಮರು ಮತ್ತು ದಾಸಿಯರಿಂದ ಯಾರನ್ನೂ ಅವರಿಗೆ ಕೊಡಲಿಲ್ಲ.(ಸೀರತುನ್ನಬಿ(ಸ), ಅನ್ವಾರುಲ್ ಉಲೂಮ್, ಸಂಪುಟ-1, ಪುಟ-544-545)

ಉಳಿದ ಭಾಗ ಮುಂದಿನ ಬಾರಿ ವಿವರಿಸಲಾಗುವುದು - ಇನ್‌ಶಾ ಅಲ್ಲಾಹ್. ಈಗ ನಾನು ಲೋಕದ ಸ್ಥಿತಿಗತಿಗಳಿಗೆ ಸಂಬಂಧಿಸಿ ಪುನಃ ದುಆಗಾಗಿ ಮನವಿ ಮಾಡಲು ಬಯಸುತ್ತೇನೆ. ಪ್ರತೀಕಾರಕ್ಕೂ ಒಂದು ಮಿತಿ ಇರಬೇಕು ಎಂದೂ ಅಮೇರಿಕ ಮತ್ತು ಪಾಶ್ಚಿಮಾತ್ಯ ದೇಶಗಳು ಹಮಾಸ್ ಮತ್ತು ಇಸ್ರೇಲಿನ ಯುದ್ಧದಲ್ಲಿ ತಮ್ಮ ಪಾತ್ರವನ್ನು ವಹಿಸಬೇಕೆಂದೂ ಯುದ್ಧವನ್ನು ತಡೆಯಲು ಮತ್ತು ಸಂಧಾನವನ್ನು ಮಾಡಲು ಪ್ರಯತ್ನಿಸಬೇಕೆಂದೂ ಈಗ ಪಾಶ್ಚಿಮಾತ್ಯ ದೇಶದ ಮತ್ತು ಅಮೇರಿಕದ ಕೆಲವು ಲೇಖಕರು ವಾರ್ತಾಪತ್ರಿಕೆಗಳಲ್ಲಿ ಬರೆದಿರುವರು. ಆದರೆ ಪಾಶ್ಚಿಮಾತ್ಯ ದೇಶಗಳು ಯುದ್ಧವನ್ನು ತಡೆಯುವುದಕ್ಕೆ ಬದಲಾಗಿ ಯುದ್ಧವನ್ನು ಹೊತ್ತಿಸಲು ಸಿದ್ಧರಾಗಿ ನಿಂತಿರುವರು ಎಂದು ತೋರುತ್ತಿದೆ ಎಂದೂ ಈ ಲೇಖಕರು ಬರೆದಿರುವರು.

ಈಗ ಮಿತಿಯನ್ನು ಮೀರಿದೆ ಎಂದು ಹೇಳಿ ಅಮೇರಿಕದ ವಿದೇಶಾಂಗ ಮಂತ್ರಾಲಯದ ಒಬ್ಬ ದೊಡ್ಡ ಅಧಿಕಾರಿ ರಾಜಿನಾಮೆ ನೀಡಿರುವುದಾಗಿ ನಿನ್ನೆ ವಾರ್ತೆ ಬಂದಿತ್ತು. ಫ್ಯಾಲೆಸ್ತೀನಿನ ಅಮಾಯಕರ ಮೇಲೆ ಬಹಳ ಹೆಚ್ಚು ದೌರ್ಜನ್ಯ ನಡೆಯುತ್ತಿದೆ. ಇದರ ಬಗ್ಗೆ ಈ ಪಾಶ್ಚಿಮಾತ್ಯ ದೇಶಗಳು ಕಾಳಜಿವಹಿಸಬೇಕಾಗಿದೆ. ಅವರಲ್ಲೂ ಸಭ್ಯರು ಇದ್ದಾರೆ ಎಂದು ಈ ಲೇಖನಗಳಿಂದ ತಿಳಿದುಬರುತ್ತದೆ. ಅದೇ ರೀತಿಯಲ್ಲಿ ಕೆಲವು ಯಹೂದಿ ಪ್ರಜೆಗಳು ಕೂಡ ಫ್ಯಾಲೆಸ್ತೀನಿನ ಪರವಾಗಿ ಮತ್ತು ದೌರ್ಜನ್ಯವನ್ನು ವಿರೋಧಿಸಿಕೊಂಡು ಮಾತನಾಡುತ್ತಿರುವ ದೃಶ್ಯಗಳು ಕೆಲವೊಮ್ಮೆ ಮೀಡಿಯದಲ್ಲಿ ಪ್ರಸಾರವಾಗುತ್ತಿವೆ. ರಶ್ಯದ ವಿದೇಶಾಂಗ ಮಂತ್ರಿ ಕೂಡ ಹೀಗೆ ಹೇಳಿದರು: "ಈ ದೇಶಗಳು ಇದೇ ರೀತಿಯಲ್ಲಿ ತಮ್ಮ ವರ್ತನೆಯನ್ನು ಮುಂದುವರೆಸಿದರೆ ಈ ಯುದ್ಧ ಪೂರ್ತಿ ಭೂಖಂಡದಲ್ಲಿ, ಮಾತ್ರವಲ್ಲ ಪೂರ್ತಿ ಲೋಕದಲ್ಲಿ ಹರಡುವುದು ಎಂದು ನಾನು ಭಾವಿಸುತ್ತೇನೆ."

ಆದ್ದರಿಂದ ಈ ಜನರು ಎಚ್ಚರಗೊಳ್ಳಬೇಕು. ಅದೇ ರೀತಿಯಲ್ಲಿ ನಾನು ಹಿಂದೆಯೂ ಹೇಳಿದಂತೆ ಮುಸ್ಲಿಂ ರಾಷ್ಟ್ರಗಳು ಒಟ್ಟಾಗಿ ಒಂದು ಸ್ವರದಿಂದ ಧ್ವನಿ ಎತ್ತಬೇಕು. ಲೋಕದಲ್ಲಿರುವ 53 – 54 ಮುಸ್ಲಿಂ ರಾಷ್ಟ್ರಗಳು ಒಂದೇ ಸ್ವರದಲ್ಲಿ ಹೇಳಿದರೆ ಅದು ದೊಡ್ಡ ಶಕ್ತಿಯಾಗುವುದು ಮತ್ತು ಅದು ಪ್ರಭಾವಶಾಲಿಯಾಗಿರುವುದು. ಇಲ್ಲದಿದ್ದರೆ ಅಲ್ಲಿಂದ ಇಲ್ಲಿಂದ ಬರುವ ಒಂದೊಂದು ಹೇಳಿಕೆಗಳಿಗೆ ಯಾವುದೇ ಪ್ರಭಾವವಿರುವುದಿಲ್ಲ. ಲೋಕದಲ್ಲಿ ಶಾಂತಿಯನ್ನು ಸ್ಥಾಪಿಸಲು ಹಾಗೂ ಯುದ್ಧ ನಿಲ್ಲಿಸಲು ಇರುವ ಒಂದೇ ಒಂದು ಮಾರ್ಗ ಇದೇ ಆಗಿದೆ.

ಆದ್ದರಿಂದ ಲೋಕವನ್ನು ನಾಶದಿಂದ ರಕ್ಷಿಸಲಿಕ್ಕಾಗಿ ಮುಸ್ಲಿಂ ದೇಶಗಳು ತಮ್ಮ ಪಾತ್ರವನ್ನು ವಹಿಸಲು ಸಂಪೂರ್ಣವಾದ ಪ್ರಯತ್ನವನ್ನು ಮಾಡಬೇಕಾಗಿದೆ. ಹಾಗೆ ಮಾಡಲು ಅಲ್ಲಾಹನು ಅವರಿಗೆ ಸೌಭಾಗ್ಯ ನೀಡಲಿ. ಆದರೆ ಹೇಗಿದ್ದರೂ ನಾವು ದುಆಗಳನ್ನು ಮಾಡುವುದಕ್ಕೆ ಒತ್ತು ನೀಡಬೇಕು. ಅಲ್ಲಾಹನು ಈ ಯುದ್ಧವನ್ನು ಕೂಡ ಕೊನೆಗೊಳಿಸಲಿ ಹಾಗೂ ಮುಗ್ಧ ಮತ್ತು ಪೀಡಿತ ಫೆಲಸ್ತೀನಿಯರ ಸಂರಕ್ಷಣೆ ಮಾಡಲಿ. ಇನ್ನಷ್ಟು ದೌರ್ಜನ್ಯ ಅವರ ಮೇಲೆ ಆಗದಿರಲಿ. ದೌರ್ಜನ್ಯ ಎಲ್ಲೇ ಆಗುತ್ತಿದ್ದರೂ ಅದನ್ನು ಕೊನೆಗೊಳಿಸಲಿ. ಅಲ್ಲಾಹನು ನಮಗೆ ದುಆ ಮಾಡಲು ಸೌಭಾಗ್ಯ ನೀಡಲಿ - ಆಮೀನ್.

...*...*...*...

# ಖುತ್‌ಬ ಜುಮುಅ

ತನ್ನ ಪತಿ ಸತ್ಯನಿಷೇಧಿಯಾಗಿರುವ ಕಾರಣದಿಂದ ಮಹಿಳೆಯೊಬ್ಬಳು ಪತಿಯಿಂದ ಬೇರ್ಪಟ್ಟ ನಂತರ ಪತಿ ಇಸ್ಲಾಂ ಸ್ವೀಕಾರ ಮಾಡಿದರೆ ಪುನಃ ನಿಕಾಹ್ ನಡೆಸಬೇಕಾದ ಅಗತ್ಯವಿಲ್ಲ

**ಅಲ್ಲಾಹುಮ್ಮ ಬಾರಿಕ್ ಫೀಹಿಮಾ ವ ಬಾರಿಕ್ ಅಲೈಹಿಮಾ ವಬಾರಿಕ್ ಲಹುಮಾ ನಸ್‌ಲಹುಮಾ.** ಅರ್ಥ: ಹೇ ನನ್ನ ಅಲ್ಲಾಹ್, ನೀನು ಅವರಿಬ್ಬರ ಸಂಬಂಧದಲ್ಲಿ ಅನುಗ್ರಹವನ್ನು ಉಂಟುಮಾಡು, ಅವರ ಇತರರೊಂದಿಗೆ ಇರಿಸುವ ಸಂಬಂಧದಲ್ಲಿ ಅನುಗ್ರಹವನ್ನು ಇರಿಸು. ಅವರ ಸಂತಾನಗಳಲ್ಲಿ ಅನುಗ್ರಹವನ್ನು ಇರಿಸು.

**ಅಲ್ಲಹುಮ್ಮ ಬಾರಿಕ್ ಫೀಹಿಮಾ ವ ಬಾರಿಕ್ ಅಲೈಹಿಮಾ ವಬಾರಿಕ್ ಲಹುಮಾ ನಸ್ಲಹುಮಾ."** ಈ ಪ್ರಾರ್ಥನೆಯನ್ನು ವಿವಾಹಿತರಾಗುವ ಜೋಡಿಗಳಿಗಾಗಿ ಅವರ ಹೆತ್ತವರು ಮಾಡಬೇಕು.

ಇಂದು ಲೌಕಿಕ ಆಸೆ-ಅಭಿಲಾಷೆಗಳ ಕಾರಣದಿಂದ ವಿವಾಹದ ನಂತರ ಹುಡುಗ-ಹುಡುಗಿಯರ ನಡುವೆ ಸಮಸ್ಯೆಗಳು ತಲೆದೋರುತ್ತವೆ. ಈಗ ಅದು ವರ್ಧಿಸುತ್ತಲೂ ಇವೆ. ದೀನಿಗೆ ಆದ್ಯತೆ ನೀಡುವುದಾದರೆ ಮತ್ತು ಈ ರೀತಿಯಲ್ಲಿ ದುಆ ಮಾಡಿದರೆ ಹಾಗೂ ತಂದೆತಾಯಂದಿರು ಸಹ ತಮ್ಮ ಪಾತ್ರವನ್ನು ನಿರ್ವಹಿಸುವುದಾದರೆ ಸಂಬಂಧ ನೆಲೆನಿಲ್ಲುವುದು.

ಆದ್ದರಿಂದ ಈ ಜನರು ಎಚ್ಚರಗೊಳ್ಳಬೇಕು. ಅದೇ ರೀತಿಯಲ್ಲಿ ನಾನು ಹಿಂದೆಯೂ ಹೇಳಿದಂತೆ ಮುಸ್ಲಿಂ ರಾಷ್ಟ್ರಗಳು ಒಟ್ಟಾಗಿ ಒಂದು ಸ್ವರದಿಂದ ಧ್ವನಿ ಎತ್ತಬೇಕು. ಲೋಕದಲ್ಲಿರುವ 53 - 54 ಮುಸ್ಲಿಂ ರಾಷ್ಟ್ರಗಳು ಒಂದೇ ಸ್ವರದಲ್ಲಿ ಹೇಳಿದರೆ ಅದು ದೊಡ್ಡ ಶಕ್ತಿಯಾಗುವುದು ಮತ್ತು ಅದು ಪ್ರಭಾವಶಾಲಿಯಾಗಿರುವುದು. ಇಲ್ಲದಿದ್ದರೆ ಅಲ್ಲಿಂದ ಇಲ್ಲಿಂದ ಬರುವ ಒಂದೊಂದು ಹೇಳಿಕೆಗಳಿಗೆ ಯಾವುದೇ ಪ್ರಭಾವವಿರುವುದಿಲ್ಲ. ಲೋಕದಲ್ಲಿ ಶಾಂತಿಯನ್ನು ಸ್ಥಾಪಿಸಲು ಹಾಗೂ ಯುದ್ಧ ನಿಲ್ಲಿಸಲು ಇರುವ ಒಂದೇ ಒಂದು ಮಾರ್ಗ ಇದೇ ಆಗಿದೆ.

**ಸರ್ಯ ಝೈಬ್ ಬಿನ್ ಹಾರಿಸ್(ರ), ಸುವೇಕ್ ಯುದ್ಧ ಮತ್ತು ಮುಸ್ಲಿಮ್ ಮೊದಲ ಈದುಲ್ ಅಧ್‌ಹಾ ಆಚರಣೆಯ ಕುರಿತು ಐತಿಹಾಸಿಕ ಘಟನೆಗಳ ವಿಶ್ವಾಸವರ್ಧಕ ಪ್ರಸ್ತಾವನೆ**

ಹಮಾಸ್ ಹಾಗೂ ಇಸ್ರಾಈಲ್ ಯುದ್ಧಗಳ ಕುರಿತು ದುಆದ ಮನವಿ ಹಾಗೂ ಮುಸ್ಲಿಮ್ ರಾಷ್ಟ್ರಗಳಿಗೆ ಕಿವಿಮಾತು

ಮುಸ್ಲಿಂ ರಾಷ್ಟ್ರಗಳು ಒಂದೇ ಸ್ವರದಲ್ಲಿ ಹೇಳಿದರೆ ಅದು ದೊಡ್ಡ ಶಕ್ತಿಯಾಗುವುದು ಮತ್ತು ಅದು ಪ್ರಭಾವಶಾಲಿಯಾಗಿರುವುದು.

ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್,** ಅವರು ಇಸ್ಲಾಮಾಬಾದ್ (ಯು.ಕೆ) ಯ **'ಮಸ್ಜಿದ್ ಮುಬಾರಕ್'** ನಿಂದ **20-10-2023** ರಂದು ನೀಡಿದ **ಖುತ್‌ಬ ಜುಮುಅ**

أَشْهَدُ أَنْ لَّا إِلٰهَ إِلَّا اللّٰهُ وَحْدَهٗ لَا شَرِيْكَ لَهٗ وَأَشْهَدُ أَنَّ مُحَمَّدًا عَبْدُهٗ وَ رَسُوْلُهٗ

أَمَّا بَعْدُ فَأَعُوْذُ بِاللّٰهِ مِنَ الشَّيْطٰنِ الرَّجِيْمِ - بِسْمِ اللّٰهِ الرَّحْمٰنِ الرَّحِيْمِ

اَلْحَمْدُ لِلّٰهِ رَبِّ الْعٰلَمِيْنَ ۔ اَلرَّحْمٰنِ الرَّحِيْمِ ۔ مٰلِكِ يَوْمِ الدِّيْنِ ۔

اِيَّاكَ نَعْبُدُ وَاِيَّاكَ نَسْتَعِيْنُ ۔ اِهْدِنَا الصِّرَاطَ الْمُسْتَقِيْمَ ۔

صِرَاطَ الَّذِيْنَ اَنْعَمْتَ عَلَيْهِمْ ۙ غَيْرِ الْمَغْضُوْبِ عَلَيْهِمْ وَلَا الضَّآلِّيْنَ ۔

ಇಂದು ಸಹ ಹಝ್ರತ್ ಪೈಗಂಬರ್(ಸ)ರ ಜೀವನಚರಿತ್ರೆಗೆ ಸಂಬಂಧಪಟ್ಟು ಬದ್ರ್ ಯುದ್ಧದ ತಕ್ಷಣದ ನಂತರ ಸಂಭವಿಸಿದ ಕೆಲವು ಘಟನೆಗಳ ಬಗ್ಗೆ ಪ್ರಸ್ತಾಪಿಸುತ್ತೇನೆ. ಹಝ್ರತ್ ಪೈಗಂಬರ್(ಸ)ರ ಅಳಿಯ ಹಝ್ರತ್ ಅಬುಲ್‌ಆಸ್(ರ)ರ ಇಸ್ಲಾಂ ಸ್ವೀಕಾರದ ಘಟನೆ ಚರಿತ್ರೆಯಲ್ಲಿ ಹೀಗೆ ಉಲ್ಲೇಖಿಸಲಾಗಿದೆ. ಹಝ್ರತ್ ಪೈಗಂಬರ್(ಸ) ಜಮಾದಿಯುಲ್ ಊಲ ಹಿಜರೀ 6ರಲ್ಲಿ ಝೈದ್ ಬಿನ್ ಹಾರಿಸ್(ರ)ರ ನೇತೃತ್ವದಲ್ಲಿ ಎಪ್ಪತ್ತು ಸಹಾಬಿಯರ ಜೊತೆಗೆ ಒಂದು ಸೈನ್ಯವನ್ನು ಈಸ್ ಎಂಬ ಪ್ರದೇಶಕ್ಕೆ ಕಳುಹಿಸಿದರು. ಈಸ್ ಪ್ರದೇಶವು ಮದೀನದಿಂದ ನಾಲ್ಕು ದಿನಗಳ ಯಾತ್ರೆಯ ದೂರದಲ್ಲಿದೆ. ಒಂದು ದಿನದ ಯಾತ್ರೆ ಎಂದರೆ 12 ಮೈಲು ಆಗಿರುತ್ತದೆ ಎಂದು ಚರಿತ್ರೆಗಾರರು ಹೇಳುತ್ತಾರೆ. ಈ ರೀತಿಯಾಗಿ ಈ ಪ್ರದೇಶ ಮದೀನದಿಂದ 48 ಮೈಲುಗಳ ದೂರದಲ್ಲಿತ್ತು. ಈ ಕಾರ್ಯಾಚರಣೆಯ ಸ್ವಲ್ಪ ವಿವರಣೆ ಹೀಗಿದೆ: ಹಝ್ರತ್ ಪೈಗಂಬರ್(ಸ) ಅವರು ಜಮಾದಿಉಲ್ ಊಲ ಹಿಜರಿ 6ರಲ್ಲಿ ಝೈದ್ ಬಿನ್ ಹಾರಿಸ್(ರ) ಅವರ ನೇತೃತ್ವದಲ್ಲಿ 70 ಸಹಾಬಿಯರ ಜೊತೆ ಒಂದು ಸೈನ್ಯವನ್ನು ಮದೀನದಿಂದ ರವಾನಿಸಿದರು. ಈ ಕಾರ್ಯಚರಣೆಗೆ ಕಾರಣ ಸಿರಿಯಾದ ಕಡೆಯಿಂದ ಮಕ್ಕಾದ ಖುರೈಶಿಗಳ ಒಂದು ಸಂಘ ಬರುತ್ತಿದೆ ಎಂದೂ ಆ ವ್ಯಾಪಾರಿ ಸಂಘದ ಉದ್ದೇಶ ಮುಸ್ಲಿಮರ ಮೇಲೆ ದಾಳಿ ಮತ್ತು ಯುದ್ಧ ನಡೆಸುವುದಾಗಿದೆ ಎಂದೂ ಹಝ್ರತ್ ಪೈಗಂಬರ್(ಸ)ರಿಗೆ ಮಾಹಿತಿ ಲಭಿಸಿತು. ಅಂತೂ ಅವರು ಅದನ್ನು ತಡೆದರು ಮತ್ತು ಅವರ ಸಾಧನ ಸಾಮಗ್ರಿಗಳನ್ನು ವಶಪಡಿಸಿಕೊಂಡರು. ಕೆಲವು ಕೈದಿಗಳನ್ನು ಕೂಡ ಹಿಡಿಗೂಡಿದರು. ಅವರಲ್ಲಿ ಅಬುಲ್‌ಆಸ್(ರ) ಕೂಡ ಇದ್ದರು.

(ಶರಹ್ ಝುರ್ಖಾನಿ ಅಲಲ್ ಮವಾಹಿಬ್, ಸಂಪುಟ-3, ಪುಟ-124-125, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 1996) (ಉರ್ದು ನಿಘಂಟು, ಸಂಪುಟ-17, ಪುಟ-772 "ಮರ್ಹಲ" ಪದದಡಿ)

ಸೀರತ್ ಖಾತಮುನ್ನಬಿಯ್ಯೀನ್‌ನಲ್ಲಿ ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್(ರ) ಬರೆಯುತ್ತಾರೆ: ಈಸ್ ಯುದ್ಧದ ಕೈದಿಗಳಲ್ಲಿ ಹಝ್ರತ್ ಪೈಗಂಬರ್(ಸ)ರ ಅಳಿಯನಾದ ಅಬುಲ್‌ಆಸ್(ರ) ಕೂಡ ಇದ್ದರು. ಅವರು ಹಝ್ರತ್ ಖದೀಜ(ರ)ರ ನಿಕಟ ಸಂಬಂಧಿಯಾಗಿದ್ದರು. ಆಗಲೂ ಅವರು ಮುಶ್ರಿಕ್ ಆಗಿದ್ದರು. ಅಬುಲ್ ಆಸ್ ತಾನು ಕೈದಿಯಾಗಿರುವುದನ್ನು ಹೇಗೋ ತನ್ನ ಪತ್ನಿ ಹಝ್ರತ್ ಝೈನಬ್(ರ)ರಿಗೆ ತಿಳಿಸಿದರು. ಹಝ್ರತ್ ಪೈಗಂಬರ್(ಸ) ಮತ್ತು ಅವರ ಸಹಾಬಿಯರು ಫಜ್ರ್ ನಮಾಝ್ ನಿರ್ವಹಿಸುತ್ತಿದ್ದಾಗ ಹಝ್ರತ್ ಝೈನಬ್(ರ) ಉಚ್ಚ ಸ್ವರದಲ್ಲಿ ಹೀಗೆ ಹೇಳಿದರು: ಎಲೈ ಮುಸ್ಲಿಮರೇ, ನಾನು ಅಬುಲ್ ಆಸ್‌ರಿಗೆ ಅಭಯವನ್ನು ನೀಡಿದ್ದೇನೆ. ನಮಾಝ್ ಮುಗಿಸಿದ ನಂತರ ಹಝ್ರತ್ ಪೈಗಂಬರ್(ಸ) ಸಹಾಬಿಯರೊಡನೆ ಹೇಳಿದರು: ಝೈನಬ್ ಹೇಳಿದ್ದನ್ನು ನೀವು ಕೇಳಿರಬಹುದು. ಅಲ್ಲಾಹನಾಣೆ, ನನಗೆ ಇದರ ಬಗ್ಗೆ ಗೊತ್ತಿರಲಿಲ್ಲ. ಸತ್ಯವಿಶ್ವಾಸಿಗಳ ಜಮಾಅತಿನಲ್ಲಿ ಯಾರಾದರೂ ಯಾವನಾದರೂ ಸತ್ಯನಿಷೇಧಿಗೆ ಅಭಯ ನೀಡಿದರೆ, ಆ ಅಭಯವನ್ನು ಗೌರವಿಸಬೇಕು. ಅನಂತರ ಹಝ್ರತ್ ಪೈಗಂಬರ್(ಸ) ಝೈನಬ್(ರ)ರೊಡನೆ ಹೇಳಿದರು: ಯಾರಿಗೆ ನೀನು ಅಭಯ ನೀಡಿದ್ದೀಯೋ ಅವರಿಗೆ ನಾವು ಸಹ ಅಭಯ ನೀಡುತ್ತೇವೆ. ಅನಂತರ ಅಬುಲ್‌ಆಸಿನ ಸಂಪತ್ತನ್ನು ಮರಳಿಸಲಾಯಿತು ಮತ್ತು ಅಬುಲ್‌ಆಸಿನ ಪರವಾಗಿ ಸತ್ಕಾರವನ್ನು ಮಾಡಲು ಝೈನಬ್‌ರೊಡನೆ ಹಝ್ರತ್ ಪೈಗಂಬರ್(ಸ) ಹೇಳಿದರು. ಏಕಾಂತದಲ್ಲಿ ಅವರನ್ನು ಭೇಟಿಯಾಗಬಾರದು ಎಂದೂ ಹೇಳಿದರು. ಕೆಲವು ದಿನಗಳ ನಂತರ ಅಬುಲ್‌ಆಸ್ ಮಕ್ಕಾಗೆ ಮರಳಿ ಹೋಗಿ ತನ್ನ ವ್ಯಾಪಾರ ವ್ಯವಹಾರಗಳನ್ನು ಮುಗಿಸಿ ಹಝ್ರತ್ ಪೈಗಂಬರ್(ಸ)ರ ಸನ್ನಿಧಿಯಲ್ಲಿ ಹಾಜರಾಗಿ ಮುಸ್ಲಿಮರಾದರು. ಪುನಃ ನಿಕಾಹ್ ಇಲ್ಲದೇ ಹಝ್ರತ್ ಝೈನಬ್(ರ)ರನ್ನು ಹಝ್ರತ್ ಪೈಗಂಬರ್(ಸ) ಅಬುಲ್‌ಆಸ್‌ರಿಗೆ ಮರಳಿಸಿದರು...... ಕೆಲವು ವರದಿಗಳಲ್ಲಿ ಆ ಸಂದರ್ಭದಲ್ಲಿ ಹಝ್ರತ್ ಝೈನಬ್(ರ) ಮತ್ತು ಅಬುಲ್‌ಆಸ್‌ರವರ ಮತ್ತೊಮ್ಮೆ ನಿಕಾಹ್ ನಡೆಸಲಾಯಿತು ಎಂದಿದೆ ಅದರೆ ಮೊದಲ ವರದಿಯು ಬಲವಾಗಿದೆ." (ಸೀರತ್ ಖಾತಮುನ್ನಬೀಈನ್, ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್ ಎಂ.ಎ, ಪುಟ-670-671)

ತನ್ನ ಪತಿ ಸತ್ಯನಿಷೇಧಿಯಾಗಿರುವ ಕಾರಣದಿಂದ ಮಹಿಳೆಯೊಬ್ಬಳು ಪತಿಯಿಂದ ಬೇರ್ಪಟ್ಟ ನಂತರ ಪತಿ ಇಸ್ಲಾಂ ಸ್ವೀಕಾರ ಮಾಡಿದರೆ ಪುನಃ ನಿಕಾಹ್ ನಡೆಸಬೇಕಾದ ಅಗತ್ಯವಿಲ್ಲ ಎಂಬ ಫತ್ವಾ ಈ ಘಟನೆಯಿಂದ ತಿಳಿದುಬರುತ್ತದೆ.

ತನ್ನ ಪತಿ ಇಸ್ಲಾಂ ಸ್ವೀಕಾರ ಮಾಡಿದ ನಂತರ ಹಝ್ರತ್ ಝೈನಬ್(ರ) ಹೆಚ್ಚು ಕಾಲ ಬದುಕಿರಲಿಲ್ಲ. ಹಿಜರೀ 8ರಲ್ಲಿ ಅವರು ನಿಧನರಾದರು.

ಹಝ್ರತ್ ಪೈಗಂಬರ್(ಸ)ರ ನಿರ್ದೇಶನ ಪ್ರಕಾರ ಹಝ್ರತ್ ಉಮ್ಮು ಐಮನ್(ರ), ಹಝ್ರತ್ ಸೌದ(ರ), ಹಝ್ರತ್ ಉಮ್ಮು ಸಲ್ಮಾ(ರ) ಮತ್ತು ಹಝ್ರತ್ ಉಮ್ಮು ಅತಿಯ(ರ) ಹಝ್ರತ್ ಝೈನಬ್(ರ)ರ ಗುಸುಲ್ ಮಾಡಿಸಿದರು. (ಸೈರುಸ್ಸಹಾಬ, ಸಂಪುಟ–6, ಪುಟ–90, ದಾರುಲ್ ಇಶಾತ್ ಕರಾಚಿ 2004)

ಹಝ್ರತ್ ಉಮ್ಮೆ ಅತಿಯಾ(ರ) ವರದಿ ಮಾಡುತ್ತಾರೆ ಹಝ್ರತ್ ಪೈಗಂಬರ್(ಸ) ಅವರು ತಮ್ಮ ಮಗಳಿಗೆ ಗುಸುಲ್ ಮಾಡಿಸಲು ಆದೇಶಿಸಿದಾಗ, ಆಕೆಯ ಬಲಭಾಗದಿಂದ ಮತ್ತು ವಝುವಿನ ಭಾಗಗಳಿಂದ ಪ್ರಾರಂಭಿಸಲು ಹೇಳಿದರು. ಮತ್ತೊಂದು ವರದಿಯಲ್ಲಿ, ಹಝ್ರತ್ ಉಮ್ಮೆ ಅತಿಯಾ(ರ) ಹೇಳುತ್ತಾರೆ: ಹಝ್ರತ್ ಪೈಗಂಬರ್(ಸ) ಅವರ ಪುತ್ರಿ ಹಝ್ರತ್ ಝೈನಬ್ ನಿಧನ ಹೊಂದಿದಾಗ ಹಝ್ರತ್ ಪೈಗಂಬರ್(ಸ) ಅವರು ಅವರಿಗೆ ಬೆಸಸಂಖ್ಯೆ ಅಂದರೆ ಮೂರು ಅಥವಾ ಐದು ಬಾರಿ ಸ್ನಾನ ಮಾಡಿಸಿ ಐದನೇ ಬಾರಿ ಕರ್ಪೂರ ಹಾಕಲು ಅಥವಾ ಕರ್ಪೂರ ಹಾಕಲು ಹೇಳಿದರು. ನೀವು ಅವರಿಗೆ ಸ್ನಾನ ಮಾಡಿಸಿದ ನಂತರ ನನಗೆ ತಿಳಿಸಿ ಎಂದು ಹೇಳಿದರುಅವರು ಹೇಳುತ್ತಾರೆ ನಂತರ ನಾವು ಹಝ್ರತ್ ಪೈಗಂಬರ್(ಸ) ಅವರಿಗೆ ತಿಳಿಸಿದೆವು. ಅವರು ತಮ್ಮ ಅಝಾರ್ (ಸೊಂಟದ ಮೇಲೆ ಕಟ್ಟಿಕೊಳ್ಳುವ ಬಟ್ಟೆ) ಅನ್ನು ನಮಗೆ ನೀಡಿ ಇದನ್ನು ಅವರ ದೇಹಕ್ಕೆ ಸುತ್ತಿಬಿಡಿ ಎಂದು ಹೇಳಿದರು. (ಸಹೀಹ್ ಮುಸ್ಲಿಮ್, ಕಿತಾಬುಲ್ ಜನಾಎಝ್, ಹದೀಸ್–2173–2176)

ನಂತರ ಹಝ್ರತ್ ಪೈಗಂಬರ್(ಸ) ಅವರ ಸ್ವತಃ ಜನಾಝ ನಮಾಝ್ ನಿರ್ವಹಿಸಿದರು ಹಾಗೂ ಸ್ವತಃ ಗೋರಿಗೆ ಇಳಿದು ದಫನ್ ಮಾಡಿದರು. ಹಝ್ರತ್ ಝೈನಬ್(ರ) ತನ್ನ ಮಕ್ಕಳಲ್ಲಿ ಇಬ್ಬರು ಮಕ್ಕಳನ್ನು ಅಗಲಿದ್ದರು. ಅಲಿ ಮತ್ತು ಇಮಾಮಾ. ಒಂದು ವರದಿಯ ಪ್ರಕಾರ, ಅಲಿ ಬಾಲ್ಯದಲ್ಲಿ ನಿಧನರಾದರು, ಇನ್ನೊಂದು ವರದಿಯ ಪ್ರಕಾರ, ಅವರು ಪ್ರಬುದ್ಧ ವಯಸ್ಸನ್ನು ತಲುಪಿದರು. ಇಬ್ನ್ ಅಸಾಕಿರ್ ಅವರು ಯರ್ಮೂಕ್ ಯುದ್ಧದಲ್ಲಿ ಹುತಾತ್ಮರಾದರು ಎಂದು ಬರೆದಿದ್ದಾರೆ. ಅವರು ಮಕ್ಕಾ ವಿಜಯದಲ್ಲಿ ಹಝ್ರತ್ ಪೈಗಂಬರ್(ಸ) ಅವರ ಹಿಂದೆ ಸವಾರಿ ಮಾಡುತ್ತಿದ್ದರು. (ಸೈರುಸ್ಸಹಾಬ, ಸಂಪುಟ–6, ಪುಟ–90, ದಾರುಲ್ ಇಶಾತ್ ಕರಾಚಿ 2004)

ಹಝ್ರತ್ ಇಮಾಮಾ(ರ) ಅವರ ಬಗ್ಗೆ ಹಝ್ರತ್ ಫಾತಿಮಾ ಅವರ ಮರಣದ ನಂತರ ಹಝ್ರತ್ ಅಲಿ ಅವರನ್ನು ವಿವಾಹವಾದರು ಎಂದು ಹೇಳಲಾಗುತ್ತದೆ. (ಅತ್ತಬಖಾತುಲ್ ಕುಬ್ರ ಲಿಇಬ್ನೆ ಸಾದ್, ಸಂಪುಟ–8, ಪುಟ–25, ದಾರುಲ್ ಕುತುಬ್ ಇಲ್ಮಿಯ ಬೈರೂತ್ 1990)

ಹಝ್ರತ್ ಅಬುಲ್–ಆಸ್(ರ) ಅವರ ವ್ಯಾಪಾರವು ಮಕ್ಕಾದಲ್ಲಿತ್ತು, ಆದ್ದರಿಂದ ಅವರು ಮದೀನಾದಲ್ಲಿ ಉಳಿಯಲು ಸಾಧ್ಯವಾಗಲಿಲ್ಲ. ಆದ್ದರಿಂದ, ಅವರು ಇಸ್ಲಾಂ ಧರ್ಮವನ್ನು ಸ್ವೀಕರಿಸಿದ ನಂತರ, ಅವರು ಹಝ್ರತ್ ಪೈಗಂಬರ್(ಸ) ಅವರಿಂದ ಅನುಮತಿಯನ್ನು ಪಡೆದರು ಮತ್ತು ನಂತರ ಮಕ್ಕಾಕ್ಕೆ ಮರಳಿದರು. ಮಕ್ಕದಲ್ಲಿ ತಂಗಿದ್ದರಿಂದ ಅವರು ಯಾವುದೇ ಯುದ್ಧಗಳಲ್ಲಿ ಭಾಗವಹಿಸಲು ಸಾಧ್ಯವಾಗಲಿಲ್ಲ. ಹಝ್ರತ್ ಅಲಿ(ರ) ಅವರ ನೇತೃತ್ವದಲ್ಲಿ 10 ಹಿಜ್ರಿಯಲ್ಲಿ ಕಳುಹಿಸಲಾದ ಒಂದು ಕಾರ್ಯಾಚರಣೆಯಲ್ಲಿ ಮಾತ್ರ ಅವರು ಭಾಗವಹಿಸಿದರು. ಹಝ್ರತ್ ಅಲಿ(ರ) ಅವರು ಯೆಮನ್‌ನಿಂದ ಹಿಂದಿರುಗಿದ ನಂತರ ಅವರನ್ನು ಯೆಮೆನ್‌ನ ಆಡಳಿತಗಾರನನ್ನಾಗಿ ಮಾಡಿದರು. ಹಝ್ರತ್ ಝೈನಬ್(ರ) ಅವರ ನಿಧನದ ನಂತರ, ಅಬುಲ್ ಆಸ್ ಹೆಚ್ಚು ಕಾಲ ಬದುಕಿರಲಿಲ್ಲ. ಹಿಜರೀ 12ರಲ್ಲಿ ಅವರು ನಿಧನರಾದರು.
(ಸೈರುಸ್ಸಹಾಬ, ಸಂಪುಟ–7, ಪುಟ–491, ದಆರುಲ್ ಇಶಾತ್ ಕರಾಚಿ) (ಅಸದುಲ್‌ಗಾಬ, ಸಂಪುಟ–6, ಪುಟ–182–183, ದಆರುಲ್ ಕುತುಬ್ ಇಲ್ಮಿಯ ಬೈರೂತ್)

ಹಝ್ರತ್ ಸಾಹಿಬ್ಜಾದಾ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್, ಅಬುಲ್–ಆಸ್ ಬಗ್ಗೆ ಹಝ್ರತ್ ಪೈಗಂಬರ್(ಸ) ಅವರ ಸಂತೋಷವನ್ನು ಉಲ್ಲೇಖಿಸುವಾಗ ಈ ಕೆಳಗಿನಂತೆ ಬರೆದಿದ್ದಾರೆ: "ಹಝ್ರತ್ ಪೈಗಂಬರ್(ಸ) ಅವರ ಅಳಿಯ, ಅಬುಲ್–ಆಸ್ ಬಿನ್ ಅಲ್–ರಬಿ ದಿವಂಗತ ಹಝ್ರತ್ ಖದೀಜಾ(ರ) ಅವರ ಹತ್ತಿರದ ಸಂಬಂಧಿಯಾಗಿದ್ದರು, ಅಂದರೆ ನಿಜವಾದ ಸೋದರಳಿಯ ಆಗಿದ್ದರು ಮತ್ತು ಬಹುದೇವತಾವಾದಿಯಾಗಿದ್ದರೂ, ಅವರು ತಮ್ಮ ಪತ್ನಿಯೊಂದಿಗೆ ಬಹಳ ಉತ್ತಮವಾಗಿ ನಡೆಸಿಕೊಂಡಿದ್ದರು ಮತ್ತು ಮುಸ್ಲಿಂ ಆದ ನಂತರವೂ ಅವರ ನಡುವಿನ ಸಂಬಂಧ ಪತಿ ಮತ್ತು ಪತ್ನಿಯು ತುಂಬಾ ಸಂತೋಷದಿಂದ ಇದ್ದರು. ಆದ್ದರಿಂದ, ಹಝ್ರತ್ ಪೈಗಂಬರ್(ಸ) ಅವರು ಅಬುಲ್–ಆಸ್ ಅವರು ನನ್ನ ಪುತ್ರಿಯೊಂದಿಗೆ ಬಹಳ ಉತ್ತಮವಾಗಿ ನಡೆಸಿಕೊಂಡಿದ್ದಕ್ಕಾಗಿ ತುಂಬಾ ಹೊಗಳುತ್ತಿದ್ದರು. ಅಬುಲ್–ಆಸ್ ಅವರು ಹಝ್ರತ್ ಅಬುಬಕರ್(ರ) ರವರ ಖಲೀಫತ್ ಅವಧಿಯಲ್ಲಿ 12 ಹಿಜರಿಯಲ್ಲಿ ನಿಧನರಾದರು, ಆದರೆ ಅವರ ಪತ್ನಿ ಹಝ್ರತ್ ಪೈಗಂಬರ್(ಸ) ಅವರ ಜೀವಿತಾವಧಿಯಲ್ಲಿಯೇ ನಿಧನರಾಗಿದ್ದರು." ಈ ವರದಿಯಿಂದ ತಿಳಿದು ಬರುವುದೇನೆಂದರೆ ಹಝ್ರತ್ ಅಲಿ(ರ)ರವರ ಬಗ್ಗೆ ಈಗಾಗಲೇ ಪ್ರಸ್ತಾಪಿಸಲಾದ ವರದಿಯಲ್ಲಿ ಅಂದರೆ ಅವರು ಮೇಲ್ವಿಚಾರಕರಾಗಿದ್ದರು ಎಂಬುದು ಸ್ವಲ್ಪ ಅನುಮಾನಸ್ಪದವಾಗಿದೆ. "ಹಝ್ರತ್ ಪೈಗಂಬರ್(ಸ) ಅವರನ್ನು ಬಹಳ ಆತ್ಮೀಯವಾಗಿದ್ದ ಅವರ ಪುತ್ರಿ ಇಮಾಮಾರನ್ನು ಹಝ್ರತ್ ಫಾತಿಮಾ(ರ) ಅವರ ನಿಧನದ ನಂತರ ಹಝ್ರತ್ ಅಲಿ(ರ)ರವರು ವಿವಾಹವಾದರು ಆದಕರ ಅವರಿಗೆ ಮಕ್ಕಳಿಲ್ಲದೆ ಉಳಿದರು." (ಸೀರತ್ ಖಾತಮನ್ನಬೀಈನ್, ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್ ಎಂ.ಎ, ಪುಟ–674)

ಸುವೈಕ್ ಕದನವು ಎರಡು ಹಿಜ್ರಿಯಲ್ಲಿ ನಡೆಯಿತು. ಸುವೈಕ್ ಯುದ್ಧಕ್ಕೆ ಕಾರಣವೆಂದರೆ ಬಹುದೇವತಾವಾದಿಗಳು ಮಕ್ಕಾಗೆ ಹಿಂದಿರುಗಿದಾಗ, ಸೋತು ದುಃಖಿತರಾದಾಗ, ಅಬುಸುಫ್ಯಾನ್ ತನ್ನ ಮೇಲೆ ತೈಲವನ್ನು ಅನ್ವಯಿಸುವುದನ್ನು ನಿಷೇಧಿಸಿದನು. ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿವ ಸಲ್ಲಮ್ ಮತ್ತು ಅವರ ಸಹಚರರಿಂದ ಬದರ್ ಯುದ್ಧದ ಸೇಡು ತೀರಿಸಿಕೊಳ್ಳುವವರೆಗೂ ಸ್ನಾನ ಮಾಡುವುದಿಲ್ಲ ಎಂದು ಅವರು ಶಪಥ ಮಾಡಿದರು. ಒಂದು ವರದಿಯ ಪ್ರಕಾರ, ಅಬುಸುಫ್ಯಾನ್ ಇನ್ನೂರು ಕುದುರೆ ಸವಾರರೊಂದಿಗೆ ಹೊರಟರು ಮತ್ತು ಮತ್ತೊಂದು ವರದಿಯ ಪ್ರಕಾರ ನಲವತ್ತು ಕುದುರೆ ಸವಾರರನ್ನು ಪಡೆದು ತನ್ನ ದೇಡು ತೀರಿಸಿಕೊಳ್ಳಲು ಹಾಗೂ ತನ್ನ ಪ್ರತಿಜ್ಞೆಯನ್ನು ಪೂರೈಸಲು ಮದೀನಾಗೆ ಸಾಮಾನ್ಯ ಮಾರ್ಗವನ್ನು ಬಿಟ್ಟು ನಜದ್‌ನ ಮಾರ್ಗದಿಂದ ಹೊರಟರು. ಅವರು ಕನಾತ್ ಕಣಿವೆಯ ತುದಿಯನ್ನು ತಲುಪಿದಾಗ, ಅವರು ಮದೀನಾದಿಂದ ಸುಮಾರು ಹನ್ನೆರಡು ಮೈಲುಗಳಷ್ಟು ದೂರದಲ್ಲಿದ್ದ ಯತಿಬ್ ಎಂಬ ಹೆಸರಿನ ಪರ್ವತದ ಬಳಿ ಬೀಡುಬಿಟ್ಟರು. ಮದೀನಾ ಮತ್ತು ಉಹುದ್ ನಡುವಿನ ಮದೀನಾದ ಮೂರು ಪ್ರಸಿದ್ಧ ಕಣಿವೆಗಳಲ್ಲಿ ಕನಾತ್ ಕೂಡ ಒಂದಾಗಿದೆ. ಅವರು ರಾತ್ರಿಯಲ್ಲಿ ಹೊರಟುಹೋದರು ಮತ್ತು ರಾತ್ರಿಯ ಕತ್ತಲೆಯಲ್ಲಿ ಬನೂನಝೀರ್ ಗೋತ್ರದವರ ಬಳಿಗೆ ಹೋಗಿ ಹುಯ್ಯ ಬಿನ್ ಅಖ್ತಬ್ ಬಳಿ ತಲುಪಿ ಅವರ ಬಾಗಿಲು ತಟ್ಟಿದರು. ಅವನು ಬಾಗಿಲು ತೆರೆಯಲು ನಿರಾಕರಿಸಿದನು. ನಂತರ ಅಬುಸುಫ್ಯಾನ್ ಅಲ್ಲಿಂದ ಬನೂನಝೀರ್‌ನ ಸರದಾರ ಹಾಗೂ ಅವರ ಖಝಾನ್‌ಚಿಯಾಗಿದ್ದ ಸಲಾಂ ಬಿನ್ ಮಿಶ್ಕಾಮ್ ಬಳಿಗೆ ಹೋದರು. ಅಬುಸುಫ್ಯಾನ್ ಅವರಿಗೆ ಅನುಮತಿ ಕೇಳಿದರು. ಅವರು ಅನುಮತಿ ನೀಡಿದರು ಮತ್ತು ಅವರಿಗೆ ಆಹಾರ ನೀಡಿದರು ಮತ್ತು ಜನರ ರಹಸ್ಯಗಳನ್ನು ಹೇಳಿದರು ಮತ್ತು ಹಝ್ರತ್ ಪೈಗಂಬರ್(ಸ) ಅವರ ರಹಸ್ಯಗಳನ್ನು ಅವರಿಗೆ ತಿಳಿಸಿದರು, ಅಂದರೆ, ಹಝ್ರತ್ ಪೈಗಂಬರ್(ಸ) ಅವರ ದೈನಂದಿನ ದಿನಚರಿ, ಅವನು ಏನು ಮಾಡುತ್ತಿದ್ದರು, ಯಾವ ಸಮಯದಲ್ಲಿ ಏನು ಮಾಡುತ್ತಾರೆ? ಎಲ್ಲಿ ಹೋಗುತ್ತಾರೆ ಎಲ್ಲಾವುದನ್ನು ಹೇಳಿದನು. ನಂತರ ಅಬುಸುಫ್ಯಾನ್ ರಾತ್ರಿಯ ಕೊನೆಯ ಭಾಗದಲ್ಲಿ ಅಲ್ಲಿಂದ ಹೊರಟು ತನ್ನ ಸಹಚರರನ್ನು ಸೇರಿಕೊಂಡರು. ನಂತರ ಅವರು ಮದೀನಾದ ಉಪನಗರದಲ್ಲಿರುವ ಉರೈಝ್ ಎಂಬ ಸ್ಥಳಕ್ಕೆ ಖುರೈಷಿಯ ಕೆಲವು ಜನರನ್ನು ಕಳುಹಿಸಿದರು. ಉರೈಝ್ ಕೂಡ ಮದೀನಾದಿಂದ ಮೂರು ಮೈಲಿ ದೂರದಲ್ಲಿರುವ ಪ್ರದೇಶವಾಗಿದೆ. ಅವರು ಅಲ್ಲಿ ಹಲವಾರು ಖರ್ಜೂರದ ಮರಗಳನ್ನು ಸುಟ್ಟುಹಾಕಿದರು ಮತ್ತು ಓರ್ವ ಅನ್ಸಾರಿ ವ್ಯಕ್ತಿಯನ್ನು ಮತ್ತು ಅವನ ಮಿತ್ರನನ್ನು ವಧಿಸಿದರು. ಒಂದು ವರದಿಯ ಪ್ರಕಾರ, ಈ ಅನ್ಸಾರಿಯ ಹೆಸರು ಹಝ್ರತ್ ಮಾಬಾದ್ ಬಿನ್ ಅಮ್ರ್ ಎಂದಾಗಿದೆ. ಆಗ ಅಬುಸುಫ್ಯಾನ್ ತನ್ನ ಶಪಥವು ನೆರವೇರಿದೆ ಎಂದು ಅರ್ಥಮಾಡಿಕೊಂಡನು, ಅವನು ಮಾಡಿದ ಹಾನಿಗೆ ಸ್ವಲ್ಪ ಸೇಡು ತೀರಿಸಿಕೊಂಡನು ಎಂದು ಯೋಚಿಸಿದನು. ಪ್ರತೀಕಾರದ ಬೆಂಕಿ ತಣ್ಣಗಾದಾಗ ಅವನು ತನ್ನ ಸೈನ್ಯವನ್ನು ತೆಗೆದುಕೊಂಡು ಮಕ್ಕಾಗೆ ಹೊರಟನು. ಅಬುಸುಫ್ಯಾನ್ ಅವರು ಸಲಾಮ್ ಬಿನ್ ಮಿಶ್ಕಾಮ್ ಅವರೊಂದಿಗೆ ಹಿಂದಿರುಗಿದ ರಾತ್ರಿಯಲ್ಲಿ ಈ ಕಾರ್ಯವನ್ನು ನಿರ್ವಹಿಸಿದರು ಎಂದು ಹೇಳಲಾಗುತ್ತದೆ.

ಆದಾಗ್ಯೂ, ಜನರಿಗೆ ಈ ವಿಷಯ ತಿಳಿದಾಗ, ಹಝ್ರತ್ ಪೈಗಂಬರ್(ಸ) ರವರು ಹಝ್ರತ್ ಅಬು ಲುಬಾಬಾ ಬಶೀರ್ ಬಿನ್ ಅಬ್ದುಲ್ ಮಂಝರ್ ಅವರನ್ನು ಮದೀನಾದಲ್ಲಿ ತಮ್ಮ ಉಪನಾಯಕನನ್ನಾಗಿ ನೇಮಿಸಿದರು ಮತ್ತು ಹಿಜ್ರತಿನ ಇಪ್ಪತ್ತೆರಡನೇ ತಿಂಗಳು, 5 ಧುಲ್–ಹಜ್ಜಾ ಭಾನುವಾರದಂದು ಮುಹಾಜಿರೀನ್ ಮತ್ತು ಅನ್ಸಾರ್‌ಗಳ ನಡುವೆ ಇನ್ನೂರು ಸಹಚರರನ್ನು ಕರೆದುಕೊಂಡು ಅವರನ್ನು ಹಿಂಬಾಲಿಸಿದರು. ಹೀಗೆ ಅವರು **ಕರ್ಕರತುಲ್ ಕುದ್ರ್** ಎಂಬ ಸ್ಥಳಕ್ಕೆ ತಲುಪಿದರು. **ಕರ್ಕರತುಲ್ ಕುದ್ರ್** ಎಂಬುದು **ಮಅದನ್**ನ ಉಪನಗರದಲ್ಲಿರುವ **ಅರ್ಹಝಿಯ್ಯ** ಬಳಿ ಇರುವ ಸ್ಥಳವಾಗಿದೆ. ಅದಕ್ಕೂ ಮದೀನಾಕ್ಕೂ ತೊಂಬತ್ತಾರು ಮೈಲುಗಳ ಅಂತರವಿದೆ. ಇದು ಬಾನು ಸುಲೈಮ್‌ನ ಕಾರಂಜಿ ಎಂದೂ ಹೇಳಲಾಗುತ್ತದೆ.

ಆದಾಗ್ಯೂ, ಅಬೂಸುಫ್ಯಾನ್ ಮತ್ತು ಅವರ ಸೈನ್ಯ ಓಡಿಹೋಗುತ್ತಾ ಧಾನ್ಯದ ಚೀಲಗಳನ್ನು ಎಸೆಯುತ್ತಿದ್ದರು. ಮುಸ್ಲಿಮರು ಅವುಗಳನ್ನು ಹೆಕ್ಕುತ್ತಾ ಹೋಗುತ್ತಿದ್ದರು. ಆದ್ದರಿಂದ ಈ ಯುದ್ಧದ ಹೆಸರು ಸುವೇಖ್ ಯುದ್ಧ ಎಂದಾಯಿತು. ಎಂದರೆ ಧಾನ್ಯದ ಯುದ್ಧ.

ಅಬೂಸುಫ್ಯಾನ್ ಮತ್ತು ಅವರ ಸೈನ್ಯ ಪರಾರಿಯಾಯಿತು. ಹಝ್ರತ್ ಪೈಗಂಬರ್(ಸ) ಮದೀನಕ್ಕೆ ಮರಳಿ ಹೋದರು. ಸಹಾಬಿಯರು ಇದರ ಬಗ್ಗೆ ಕೇಳಿದಾಗ, ಇದು ಯುದ್ಧವೇ ಆಗಿದೆ ಎಂದು ಹಝ್ರತ್ ಪೈಗಂಬರ್(ಸ) ಹೇಳಿದರು. (ಸಬ್ಲುಲ್ ಹುದಾ ವರ್ರಶ್ಶಾದ್, ಸಂಪುಟ–4, ಪುಟ–174, ದಾರುಲ್ ಕುತುಬ್ ಇಲ್ಮಿಯ ಬೈರೂತ್ 1993)

(ಅತ್ತಬಖಾತುಲ್ ಕುಬ್ರ ಲಿಇಬ್ನೆ ಸಾದ್, ಸಂಪುಟ-2, ಪುಟ-22-23, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 1990) (ಸೀರತುನ್ನಬೀ(ಸ), ಅಲ್ಲಾಮ ಶಿಬ್ಲಿ ನುಮಾನಿ, ಸಂಪುಟ-1, ಪುಟ-211) (ಸೀರತ್ ಇನ್ಸೈಕ್ಲೋಪೀಡಿಯಾ, ಸಂಪುಟ-6, ಪುಟ-65-66) (ಫರ್ಹಂಗ್ ಸೀರತ್, ಪುಟ-234, 239, 242 ಝುವಾರ ಅಕಾಡಮಿ ಕರಾಚಿ)

ಯುದ್ಧವಿರಲಿ ಇಲ್ಲದಿರಲಿ ಇದು ಗಝ್ವ (ಯುದ್ಧವೇ) ಆಗಿದೆ.

ಸೀರತ್ ಖಾತಮನ್ನಬೀಈನ್‌ನಲ್ಲಿ ಇದನ್ನು ಈ ಕೆಳಗಿನಂತೆ ವಿವರಿಸಲಾಗಿದೆ: "ಬದ್ರ್ ನಂತರ, ಅಬುಸುಫ್ಯಾನ್ ಬದ್ರ್ ಹತ್ಯೆಗೆ ಪ್ರತೀಕಾರ ತೀರಿಸಿಕೊಳ್ಳುವವರೆಗೂ ತನ್ನ ಹೆಂಡತಿಯ ಬಳಿಗೆ ಹೋಗುವುದಿಲ್ಲ ಮತ್ತು ತನ್ನ ಕೂದಲಿಗೆ ಎಣ್ಣೆ ಹಚ್ಚುವುದಿಲ್ಲ ಎಂದು ಪ್ರತಿಜ್ಞೆ ಮಾಡಿದರು. ಹೀಗಾಗಿ, ಬದ್ರ್ ನಂತರ ಎರಡು ಅಥವಾ ಮೂರು ತಿಂಗಳ ನಂತರ, ದುಲ್-ಹಜ್ಜಾ ತಿಂಗಳಲ್ಲಿ, ಅಬುಸುಫ್ಯಾನ್ ತನ್ನೊಂದಿಗೆ ಖುರೈಷಿಗಳ ಗುಂಪನ್ನು ಕರೆದುಕೊಂಡು ಮಕ್ಕಾದಿಂದ ಹೊರಟು ನಜದ್ ಮಾರ್ಗದ ಮೂಲಕ ಮದೀನಾಗೆ ತಲುಪಿದನು. ಇಲ್ಲಿಗೆ ಆಗಮಿಸಿದ ನಂತರ ಆತನು ತನ್ನ ಸೈನ್ಯವನ್ನು ಮದೀನಾದಿಂದ ಸ್ವಲ್ಪ ದೂರದಲ್ಲಿ ಬಿಟ್ಟು ರಾತ್ರಿಯ ಕತ್ತಲೆಯಲ್ಲಿ ಅಡಗಿಕೊಂಡು, ಬನುನಝೀರ್‌ನ ಯಹೂದಿ ಗೋತ್ರದ ಮುಖ್ಯಸ್ಥ ಹುಯ್ಯಿಬ್ ಅಖ್ತಾಬ್‌ನ ಮನೆಗೆ ತಲುಪಿ ಸಹಾಯವನ್ನು ಕೇಳಿದನು, ಆದರೆ ಅವನು ಇನ್ನೂ ಅವನ ಹೃದಯದಲ್ಲಿ ಅವರ ಒಡಂಬಡಿಕೆಯ ಕೆಲವು ಸ್ಮರಣೆ ಇತ್ತು ಆದ್ದರಿಂದ ಅವರು ನಮ್ಮ ಒಡಂಬಡಿಕೆ ಇದೆ ಆದು ನಾನು ನಿಮ್ಮನ್ನು ಹೇಳಲಾರೆನು ನಿಮ್ಮನ್ನು ಆಶ್ರಯವು ನೀಡಲಾರೆನು ಎಂದು ನಿರಾಕರಿಸಿದರು. ಅಬುಸುಫ್ಯಾನ್ ಬನುನಝೀರ್‌ನ ಎರಡನೇ ಮುಖ್ಯಸ್ಥ ಸುಲೈಮ್ ಬಿನ್ ಮಿಶ್ಕಾಮ್ನ ಮನೆಗೆ ಹೋದನು ಮತ್ತು ಮುಸ್ಲಿಮರ ವಿರುದ್ಧ ಸಹಾಯವನ್ನು ಕೇಳಿದನು. ಸಂಪೂರ್ಣ ಧೈರ್ಯದಿಂದ ಈ ದರಿದ್ರ ಮನುಷ್ಯನು ತನ್ನ ಎಲ್ಲಾ ಒಡಂಬಡಿಕೆಗಳನ್ನು ತ್ಯಜಿಸಿ ಅಬುಸುಫ್ಯಾನ್‌ನೊಂದಿಗೆ ಬಹಳ ಗೌರವದಿಂದ ವರ್ತಿಸಿದನು ಮತ್ತು ಅವರನ್ನು ರತ್ರಿ ಅತಿಥಿಯನ್ನಾಗಿ ಇರಿಸಿ ಮುಸಲ್ಮಾನರ ಸ್ಥಿತಿಗತಿಗಳನ್ನು ತಿಳಿಸಿದನು. ಬೆಳಗಾಗುವ ಮೊದಲು, ಅಬುಸುಫ್ಯಾನ್ ಅಲ್ಲಿಂದ ಹೊರಟು ತನ್ನ ಸೈನ್ಯವನ್ನು ತಲುಪಿದ ನಂತರ, ಮದೀನಾ ಬಳಿಯ ಅರೀಸ್ ಕಣಿವೆಯಲ್ಲಿ ದಾಳಿ ಮಾಡಲು ಖುರೈಶ್ ಗುಂಪನ್ನು ಕಳುಹಿಸಿದನು. ಇದು ಆ ದಿನಗಳಲ್ಲಿ ಮುಸ್ಲಿಮರ ಪ್ರಾಣಿಗಳು ಮೇಯಲು ಬಳಸುತ್ತಿದ್ದ ಕಣಿವೆಯಾಗಿತ್ತು ಮತ್ತು ಇದು ಮದೀನಾದಿಂದ ಕೇವಲ ಮೂರು ಮೈಲುಗಳಷ್ಟು ದೂರದಲ್ಲಿದೆ ಮತ್ತು ಬಹುಶಃ ಅಬುಸುಫ್ಯಾನ್ ಸುಲೈಮ್ ಬಿನ್ ಮಿಶ್ಕಾಮ್‌ನಿಂದ ಅದರ ಬಗ್ಗೆ ತಿಳಿದಿರಬಹುದು. ಖುರೈಷಿಗಳ ಈ ಗುಂಪು ಅರೀಸ್ ಕಣಿವೆಯನ್ನು ತಲುಪಿದಾಗ, ಅದೃಷ್ಟವಶಾತ್, ಮುಸ್ಲಿಮರ ಪ್ರಾಣಿಗಳು ಆ ಸಮಯದಲ್ಲಿ ಇರಲಿಲ್ಲ, ಆದರೆ ಮುಸ್ಲಿಂ ಅನ್ಸಾರಿ ಮತ್ತು ಅವನ ಸಹಚರರೊಬ್ಬರು ಆ ಸಮಯದಲ್ಲಿ ಅಲ್ಲಿದ್ದರು. ಖುರೈಶರು ಅವರಿಬ್ಬರನ್ನೂ ಹಿಡಿದು ಕ್ರೂರವಾಗಿ ವಧಿಸಿದರು. ತದನಂತರ ಖರ್ಜೂರದ ಮರಗಳಿಗೆ ಬೆಂಕಿ ಹಚ್ಚಿ ಅಲ್ಲಿದ್ದ ಮನೆಗಳು ಮತ್ತು ಗುಡಿಸಲುಗಳಿಗೆ ಬೆಂಕಿ ಹಚ್ಚಿದ ನಂತರ ಅವರು ಅಬುಸುಫ್ಯಾನ್ ತನ್ನ ನಿವಾಸಕ್ಕೆ ಮರಳಿದರು. ಅಬುಸುಫ್ಯಾನ್ ತನ್ನ ಶಪಥವನ್ನು ಪೂರೈಸಲು ಈ ಯಶಸ್ಸನ್ನು ಸಾಕು ಎಂದು ಪರಿಗಣಿಸಿದನು ಮತ್ತು ಸೈನ್ಯವನ್ನು ಹಿಂದಿರುಗಿಸಲು ಆದೇಶಿಸಿದನು. ಮತ್ತೊಂದೆಡೆ, ಹಝ್ರತ್ ಪೈಗಂಬರ್(ಸ) ಅವರಿಗೆ ಅಬುಸುಫ್ಯಾನ್ ಅವರ ದಾಳಿಯ ಬಗ್ಗೆ ತಿಳಿಸಲಾಯಿತು, ಆದ್ದರಿಂದ ಅವರು ತಮ್ಮ ಸಹಚರರ ಗುಂಪನ್ನು ತೆಗೆದುಕೊಂಡು ಅವರನ್ನು ಹಿಂಬಾಲಿಸಲು ಹೋದರು. ಮುಸ್ಲಿಮರು ತನ್ನ ಸೈನ್ಯವನ್ನು ತಲುಪಲು ಸಾಧ್ಯವಾಗದಂತಹ ಆತುರದಿಂದ ಓಡಿಹೋದನು ಮತ್ತು ಅಂತಿಮವಾಗಿ ಕೆಲವು ದಿನಗಳ ಗೈರುಹಾಜರಿಯ ನಂತರ ಹಝ್ರತ್ ಪೈಗಂಬರ್(ಸ) ಅವರು ಮದೀನಾಗೆ ಮರಳಿದರು." ಅವರಿ ಇದನ್ನು ಸಹ ಪ್ರಸ್ತಾಪಿದ್ದಾರೆ "ಈ ಯುದ್ಧವನ್ನು ಸುವೈಕ್ ಯುದ್ಧ ಎಂದು ಹೆಸರಿಸಲಾಗಿದೆ ಅದಕ್ಕೆ ಕಾರಣ ಅಬೂಸುಫಿಯಾನ್ ಮಕ್ಕಾಗೆ ಹಿಂದಿರುಗಿದಾಗ ಯಾರಾದರು ಹಿಂಬಾಲಿಸಬಹುದು ಎಂಬ ಆಲೋಚನೆಯಿಂದಾಗಿ, ಭಾಗಶಃ ಗಾಬರಿಯಿಂದ ಮತ್ತು ಭಾಗಶಃ ತನ್ನ ಹೊರೆಯನ್ನು ಕಡಿಮೆ ಮಾಡಲು, ಅವನು ತನ್ನ ಸಾಮಾನುಗಳನ್ನು ಅದರಲ್ಲಿ ಹೆಚ್ಚಾಗಿ ಸುವೇಖ್ ಇದ್ದದ್ದು ಅಂದರೆ ಸತ್ತು (ಧಾನ್ಯ) ದಿಂದ ಕೂಡಿತ್ತು, ಅದನ್ನು ದಾರಿಯಲ್ಲಿ ಎಸೆದುಕೊಂಡು ಹೋಗುತ್ತಿದ್ದನು. (ಸೀರತ್ ಖಾತಮನ್ನಬೀಈನ್(ಸ), ಹಝ್ರತ್ ಮಿರ್ಝಾ ಬಶೀ ಅಹ್ಮದ್ ಸಾಹಿಬ್ ಎಂ.ಎ, ಪುಟ-453-454)

ಹಿಜ್ರಿ 4 ರಲ್ಲಿ ಉಹುದ್ ಕದನದ ನಂತರವೂ ಈ ಹೆಸರಿನ ಯುದ್ಧವು ಸುವೇಕ್ ಯುದ್ಧಕ್ಕೆ ಸಂಬಂಧಿಸಿದೆ. ಹೀಗಾಗಿ, ತಬರಿಯು ಸುವಾಕ್ ಎಂಬ ಎರಡು ದಂಡಯಾತ್ರೆಗಳನ್ನು ಉಲ್ಲೇಖಿಸಿದ್ದಾರೆ.

"ಖಡ್ಗಗಳಿಂದ ಪ್ರದೇಶಗಳನ್ನು ಜಯಿಸಬಹುದು ಆದರೆ ಹೃದಯಗಳನ್ನಲ್ಲ ಬಲದಿಂದ ಶಿರಗಳನ್ನು ಬಾಗಿಸಬಹುದು ಆದರೆ ಮನಸ್ಸುಗಳನ್ನಲ್ಲ"
(ಹಝ್ರತ್ ಮಿರ್ಝಾ ತಾಹಿರ್ ಅಹ್ಮದ್ ಖಲೀಫತುಲ್ ಮಸೀಹ್ ರಾಬಿ(ರ))

ದುಆವಿನ ಆಕಾಂಕ್ಷಿ:
M.B. Nasir Ahmed & Family, Bengaluru, Karnataka

ಬದ್ರ್ ಯುದ್ಧದ ಮೊದಲು, ಅದರ ವಿವರಗಳನ್ನು ಈಗ ವಿವರಿಸಲಾಗಿದೆ. ಇದು ಬಹುಶಃ ಉಹುದ್ ಕದನವಾಗಿರಬಹುದು, ಅದರ ವಿವರಗಳನ್ನು ವಿವರಿಸಲಾಗಿದೆ ಮತ್ತು ಉಹುದ್ ಯುದ್ಧದ ನಂತರ ಎರಡನೆಯದು, ಆದರೆ ಉಳಿದ ಜೀವನಚರಿತ್ರೆಯ ಪುಸ್ತಕಗಳಾದ ಸಿರತ್ ಇಬ್ನ್ ಹಿಶಾಮ್, ಸಬಲ್ ಅಲ್-ಹುದಾ, ಇತ್ಯಾದಿಗಳಲ್ಲಿ. ಈ ಯುದ್ಧವನ್ನು ಬದ್ರ್ ಅಲ್-ಮೌಇದ್ ಕದನ ಎಂದು ವಿವರಿಸಲಾಗಿದೆ. ನಾನು ಈ ಯುದ್ಧದ ಬಗ್ಗೆ ಸ್ವಲ್ಪ ವಿವರಣೆಯನ್ನು ನೀಡುತ್ತೇನೆ. ಸಾರಾಂಶದಲ್ಲಿ, ಅಬುಸುಫ್ಯಾನ್ ಉಹುದ್ ದಿನದಂದು ಹಿಂತಿರುಗಲು ಉದ್ದೇಶಿಸಿದ್ದರು, ಆದ್ದರಿಂದ ಅವರು ಧ್ವನಿ ಎತ್ತಿದರು ಮತ್ತು ಹಝ್ರತ್ ಪೈಗಂಬರ್(ಸ) ಅವರನ್ನು ಉದ್ದೇಶಿಸಿ ಹೇಳಿದರು: ನಮ್ಮ ಮತ್ತು ನಿಮ್ಮ ನಡುವೆ ಒಂದು ವರ್ಷದ ನಂತರ ಬದ್ರ್ ಅಲ್-ಸಫ್ರಾದ ವಾಗ್ದಾನವಿದೆ ನಾವು ಅಲ್ಲಿ ಹೋರಾಡುತ್ತೇವೆ. ಇದು ಅರಬ್ಬರ ಒಟ್ಟುಗೂಡುವ ಸ್ಥಳವಾಗಿತ್ತು ಮತ್ತು ಈ ಬದ್ರ್ ಅಲ್-ಸಫ್ರಾ ಅವರ ಮಾರುಕಟ್ಟೆಯಾಗಿತ್ತು. ಆಗ ಹಝ್ರತ್ ಪೈಗಂಬರ್(ಸ) ಅವರು ಹಝ್ರತ್ ಉಮರ್(ರ) ಅವರಿಗೆ ಹೇಳಿದರು: ಅವರಿಗೆ ಹೌದು ಇನ್‌ಶಾಅಲ್ಲಾಹ್ ಎಂದು ಹೇಳಿರಿ. ಹಾಗಾಗಿ ಈ ವಾಗ್ದಾನದ ಮೇರೆಗೆ ಜನರು ಚದುರಿಹೋದರು. ಹೀಗೆ, ಉಹುದ್ ಸಂದರ್ಭದಲ್ಲಿ, ಹಝ್ರತ್ ಪಯಗಂಬರ್(ಸ) ಅವರು ಅಬುಸುಫ್ಯಾನ್ ಅವರಿಗೆ ಮಾಡಿದ ವಾಗ್ದಾನದ ಪ್ರಕಾರ, ಅವರು ಮುಂದಿನ ವರ್ಷ ಬದ್ರ್‌ಗೆ ತೆರಳಿದರು. ಅಲ್ಲಿಗೆ ಆಗಮಿಸಿದ ಅವರು ಅಬುಸುಫ್ಯಾನ್‌ಗಾಗಿ ಕಾಯುತ್ತಾ ಎಂಟು ರಾತ್ರಿಗಳ ಕಾಲ ಇದ್ದರು. ಅಬುಸುಫ್ಯಾನ್ ಮಕ್ಕಾದ ಜನರೊಂದಿಗೆ **ಮರ್ರುಝ್ಝುಹ್ರಾನ್** ಉಪನಗರಗಳಲ್ಲಿ ತಂಗಿದ್ದರು. ಮಜನ್ನಾವು ಸಹ ಮಕ್ಕಾದಿಂದ ಕೆಲವು ಮೈಲುಗಳಷ್ಟು ದೂರದಲ್ಲಿರುವ ಮರ್ರುಝ್ಝುಹ್ರಾನ್‌ನಲ್ಲಿರುವ ಜಬಲ್ ಅಲ್-ಅಸ್ಫರ್ ಬಳಿಯಿರುವ ನಗರವಾಗಿದೆ. ಆ ನಂತರ ಬರಗಾಲದ ನೆಪ ಹೇಳಿ ಸಂಗಡಿಗರೊಂದಿಗೆ ವಾಪಸಾದರು. ಮುಂದೆ ಬರುವ ಧೈರ್ಯವಿರಲಿಲ್ಲ. ಮಕ್ಕಾದ ಜನರು ಈ ಸೈನ್ಯವನ್ನು ಜೈಶ್ ಅಲ್-ಸುವೈಕ್ ಎಂದು ಕರೆಯುತ್ತಾರೆ ಏಕೆಂದರೆ ಅವರು ಸತ್ತು ಕುಡಿದುಕೊಳಡು ಹೋದರು. (ತಾರಿಖ್ ಅಲ್-ತಬರಿ, ಸಂಪುಟ 2, ಪುಟ 87, ದಾರ್ ಅಲ್-ಕಿತಾಬ್ ಅಲ್-ಇಲ್‌ಮಿಯಾ ಬೈರೂತ್ 2012) (ಸಬ್ಲುಲ್ ಹುದಾ ವರ್‌ಶ್ಶಾದ್, ಸಂಪುಟ-4, ಪುಟ-337, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 1993) (ಫರ್ಹಂಗ್ ಸೀರತ್, ಪುಟ-259, ಝುವಾರಾ ಅಕಾಡಮಿ ಕರಾಚಿ)

ಮೊದಲ ಈದುಲ್ ಅಧ್‌ಹಾ ಬಗ್ಗೆ, ಎರಡು ಹಿಜ್ರಿಯಲ್ಲಿ ಸುವೈಕ್ ಕರ್ಯಾಚರಣೆದಿಂದ ಹಿಂದಿರುಗಿದ ನಂತರ, ಹಝ್ರತ್ ಪೈಗಂಬರ್(ಸ) ಅವರು ಈದುಲ್ ಅಶ್‌ಹಾವನ್ನು ಆಚರಿಸಿದರು ಎಂದು ಬರೆಯಲಾಗಿದೆ. ಇದು ಮುಸ್ಲಿಮರ ಮೊದಲ ಈದುಲ್ ಅಧ್‌ಹಾ ಆಗಿತ್ತು. 10 ಧುಲ್ ಹಜ್ಜಾ ರಂದು ಹಝ್ರತ್ ಪೈಗಂಬರ್(ಸ) ಅವರು ತಮ್ಮ ಸಹಚರರೊಂದಿಗೆ ಮದೀನಾದಿಂದ ಹೊರಟರು. ಅವರು ಸಾಮೂಹಿಕವಾಗಿ ನಮಾಝ್ ನಿರ್ವಹಿಸಿದರು ಮತ್ತು ತಮ್ಮ ಅನುಗ್ರಹದಾಯಕ ಹಸ್ತದಿಂದ ಅಲ್ಲಿ ಖುರ್ಬಾನಿಯನ್ನು ಅರ್ಪಿಸಿದರು. (ದಾಎರಾ ಮಾರಿಫ್ ಸೀರತ್ ಮುಹಮ್ಮದ್ ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿ ವ ಸಲ್ಲಂ, ಸಂಪುಟ 6, ಪುಟ 362-363, ದಾರುಲ್ ಮಆರಿಫ್ ಲಾಹೋರ್ 2022 ರಿಂದ ಪ್ರಕಟಿಸಲಾಗಿದೆ)

ಒಂದು ವರದಿಯಲ್ಲಿ ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿವಸಲ್ಲಮ್ ಅವರು ಬನೂ ಖೈನಖಾದಿಂದ ಮದೀನಕ್ಕೆ ಹಿಂದಿರುಗಿದಾಗ ಈದುಲ್ ಅಧ್‌ಹಾ ಸಂಭವಿಸಿತು. ಆದ್ದರಿಂದ ಹಝ್ರತ್ ಪೈಗಂಬರ್(ಸ) ಮತ್ತು ತಮ್ಮ ಸಹಾಬಗಳಲ್ಲಿ ಯಾರು ಖುರ್ಬಾನಿ ನೀಡಲು ಅರ್ಹರಿದ್ದವರು ಅವರೆಲ್ಲರು 10 ಧಿಲ್ ಹಜ್ಜದಂದು ಖುರ್ಬಾನಿ ನೀಡಿದರು. ಹಝ್ರತ್ ಪೈಗಂಬರ್(ಸ) ಅವರು ಸಹಾಬರವರೊಂದಿಗೆ ಈದ್ ಗಾಹ್ಗೆ ಹೋದರು. ಅಲ್ಲಿ ಅವರು ಈದುಲ್ ಅಧಾ ಮೊದಲ ನಮಾಝ್ ನಿರ್ವಹಿಸಿದರು. ಇದು ಈದುಲ್-ಅಧಾದ ಮೊದಲ ನಮಾಝ್ ಆಗಿದ್ದು, ಹಝ್ರತ್ ಪೈಗಂಬರ್(ಸ) ಅವರು ಮದೀನಾದಲ್ಲಿ ಸಹಾಬಿಗಳಿಗೆ ನಿರ್ವಹಿಸಿದರು ಮತ್ತು ಅಲ್ಲಿ ಅವರು ಈದ್ಗಾದಲ್ಲಿ ತಮ್ಮ ಕೈಯಿಂದ ಎರಡು ಅಥವಾ ಒಂದು ಮೇಕೆಗಳನ್ನು ವಧಿಸಿದರು.

ಹಝ್ರತ್ ಜಾಬಿರ್ ಬಿನ್ ಅಬ್ದುಲ್ಲಾ(ರ) ವರದಿ ಮಾಡುತ್ತಾರೆ: ಬನೂಖೈನಖಾಸ ಕಾರ್ಯಾಚರಣೆದಿಂದ ಹಿಂದಿರುಗಿದ ನಂತರ, ನಾವು ಧುಲ್ ಹಜ್ಜಾ ಹತ್ತನೇ ದಿನದಂದು ಖುರ್ಬಾನಿ ನೀಡಿದ್ದೆವು. ಇದು ಮುಸ್ಲಿಮರ ಮುಂದೆ ಮಾಡಿದ ಮೊದಲ ಖುರ್ಬಾನಿಯಾಗಿದೆ. ನಾವು ಬನೂ ಸಲಮಾದಲ್ಲಿ ಖುರ್ಬಾನಿ ಮಾಡಿದೆವು. ನಾನು ಖುರ್ಬಾನಿಗಳನ್ನು ಪರಿಗಣಿಸಿದ್ದೇನೆ ಅಂದು,

"ವಾಗ್ದಾನವನ್ನು ನೆರವೇರಿಸುವುದು ಸತ್ಯವಿಶ್ವಾಸದ ಅಂಶವಾಗಿದೆ"
(ಹಝ್ರತ್ ಮುಹಮ್ಮದ್ ಪೈಗಂಬರ್(ಸ))

ದುಆವಿನ ಆಕಾಂಕ್ಷಿ:
Mubarak Ahmed Naseem & Family, Shimoga, Karnataka

EDITOR
TARIQ AHMED IDRIS.
Mobile : +91 9902678609
e-mail: kannadabadar@gmail.com
website:www.akhbarbadr.in

REGISTERED WITH THE REGISTRAR OF THE NEWSPAPER FOR INDIA AT NO RN PUNKAN/2020/78613

Weekly **BADAR** Qadian

Distt: Gurdaspur (Pb.) INDIA Qadian - 143516

Postal Reg. No: 3000039689/2023-25 Vol No.04, Thursday, 23 November 2023, Issue No. 47

MANAGER
SHAIKH MUJAHID AHMAD.
Mobile : +91 99153 79255
e-mail:managerbadrqnd@gmail.com
www.alislam.org/badr

ANNUAL SUBSCRIPTION: Rs.600/- (Per Issue: 10/- ) (WEIGHT: 20-50, grms / issue)

ಆ ಸ್ಥಳದಲ್ಲಿ ಹದಿನೇಳು ಖುರ್ಬಾನಿಗಳನ್ನು ಎಣಿಸಲಾಗಿದೆ.
(ತಾರೀಖ್ ಅತ್ತಬರಿ, ಸಂಘುಟ–2, ಪುಟ–49, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 2012) ಇದು ತಾರೀಖ್ ಅತ್ತಬರಿಯ ಉಲ್ಲೇಖವಾಗಿದೆ.

ಸೀರತ್ ಖ಼ಾತಮುನ್ನಬಿಯ್ಯೀನ್‌ನಲ್ಲಿ ಹಝ಼್ರತ್ ಮಿರ್ಝ಼ಾ ಬಶೀರ್ ಅಹ್ಮದ್ ಸಾಹಿಬ್(ರ) ಪ್ರಥಮ ಈದುಲ್ ಅಝ್‌ಹಾದ ಬಗ್ಗೆ ಹೀಗೆ ಬರೆದಿರುವರು: ಅದೇ ವರ್ಷ ಧ಼ುಲ್‌ಹಜ್ಜಾ ತಿಂಗಳಲ್ಲಿ ಎರಡನೇ ಇಸ್ಲಾಮೀ ಹಬ್ಬವಾದ ಈದುಲ್ ಅಝ಼್‌ಹಾ ಜಾರಿಗೆ ಬಂತು. ಅದನ್ನು ಧ಼ುಲ್‌ಹಜ್ಜ ತಿಂಗಳ ಹತ್ತನೇ ದಿನಾಂಕದಂದು ಪೂರ್ತಿ ಇಸ್ಲಾಮಿಕ ಲೋಕದಲ್ಲಿ ಆಚರಿಸಲಾಗುತ್ತಿದೆ. ಈ ಈದಿನಲ್ಲಿ ಆಡು, ಕುರಿ ಒಂಟೆ ಮುಂತಾದ ಯಾವುದಾದರೂ ಜಾನುವಾರನ್ನು ಬಲಿಕೊಟ್ಟು ಅದರ ಮಾಂಸವನ್ನು ತನ್ನ ಸಂಬಂಧಿಕರು, ಗೆಳೆಯರು, ನೆರೆಕರೆಯವರು ಮತ್ತು ಇತರರಿಗೆ ವಿತರಣೆ ಮಾಡುವುದು ಮತ್ತು ಸ್ವತಃ ಕೂಡ ತಿನ್ನುವುದು ಆರ್ಥಿಕ ಶಕ್ತಿಯುಳ್ಳ ಎಲ್ಲ ಮುಸ್ಲಿಮರಿಗೆ ಕಡ್ಡಾಯವಾಗಿದೆ. ಈದುಲ್ ಅಝ಼್‌ಹಾದ ದಿನದಂದು ಮತ್ತು ನಂತರದ ಎರಡು ದಿನಗಳಲ್ಲಿ ಇಸ್ಲಾಮಿಕ ಲೋಕದಲ್ಲಿ ಕೋಟಿಗಟ್ಟಲೆ ಜಾನುವಾರುಗಳನ್ನು ಅಲ್ಲಾಹನ ಮಾರ್ಗದಲ್ಲಿ ಬಲಿಯರ್ಪಿಸಲಾಗುತ್ತದೆ. ಹೀಗೆ ಹಝ಼್ರತ್ ಇಬ್ರಾಹೀಮ್(ಅ), ಹಝ಼್ರತ್ ಇಸ್ಮಾಈಲ್(ಅ) ಮತ್ತು ಹಝ಼್ರತ್ ಹಾಜಿರ(ರ)ರ ಮಹತ್ತಾದ ತ್ಯಾಗವನ್ನು ನೆನಪಿಸಲಾಗುತ್ತದೆ. ಅದರ ಅತ್ಯುತ್ತಮ ಮಾದರಿ ಹಝ಼್ರತ್ ಪೈಗಂಬರ್(ಸ)ರ ಜೀವನವಾಗಿದೆ. ತನ್ನ ಯಜಮಾನನಾದ ಪ್ರಭುವಿನ ಮಾರ್ಗದಲ್ಲಿ ತನ್ನ ಜೀವ, ಸಂಪತ್ತು ಮತ್ತು ತನ್ನ ಪ್ರತಿಯೊಂದು ವಸ್ತುವನ್ನು ತ್ಯಾಗ ಮಾಡಲಿಕ್ಕಾಗಿ ತಯಾರಾಗಬೇಕು ಎಂದು ಪ್ರತಿಯೊಂದು ಮುಸ್ಲಿಮರನ್ನು ಈ ಮೂಲಕ ಎಚ್ಚರಗೊಳಿಸಲಾಗಿದೆ. ಈ ಈದ್ ಹಬ್ಬವನ್ನು ಕೂಡ ಈದುಲ್ ಫಿತ್‌ರಿನ ಹಾಗೆ ಒಂದು ಮಹತ್ತಾದ ಇಸ್ಲಾಮಿನ ಆರಾಧನೆಯಾದ ಹಜ್ಜ್ ಅನುಷ್ಠಾನದ ಕೊನೆಯಲ್ಲಿ ಆಚರಿಸಲಾಗುತ್ತದೆ. (ಸೀರತ್ ಖಾತಮುನ್ನಬೀಈನ್(ಸ), ಹಝ಼್ರತ್ ಮಿರ್ಝ಼ಾ ಬಶೀರ್ ಅಹ್ಮದ್ ಸಾಹಿಬ್ ಎಂ.ಎ, ಪುಟ–454–455)

ಹಝ಼್ರತ್ ಫಾತಿಮ(ರ)ರ ನಿಕಾಹ್ ಸಹ ಹಿಜರೀ 2ರಲ್ಲಿ ನಡೆದಿತ್ತು. ಹಝ಼್ರತ್ ಅನಸ್(ರ) ವರದಿ ಮಾಡುತ್ತಾರೆ: ಹಝ಼್ರತ್ ಅಬೂಬಕರ್(ರ) ಮತ್ತು ಹಝ಼್ರತ್ ಉಮರ್(ರ) ಹಝ಼್ರತ್ ಫಾತಿಮ(ರ)ರನ್ನು ವಿವಾಹ ಮಾಡಲು ವಿನಂತಿಸಿಕೊಂಡಿದ್ದರು. ಆದರೆ ಹಝ಼್ರತ್ ಪೈಗಂಬರ್(ಸ) ಸುಮ್ಮನಿದ್ದರು ಮತ್ತು ಯಾವುದೇ ಉತ್ತರ ನೀಡಲಿಲ್ಲ. ಹಝ಼್ರತ್ ಅಲಿ(ರ) ಹೇಳುತ್ತಾರೆ: ನಾನು ಹಝ಼್ರತ್ ಪೈಗಂಬರ್(ಸ)ರ ಸನ್ನಿಧಿಯಲ್ಲಿ ಹಾಜರಾದೆನು ಮತ್ತು ಹೀಗೆ ಕೇಳಿದೆ: ಹಝ಼್ರತ್ ಫಾತಿಮ(ರ)ರ ಮದುವೆಯನ್ನು ನನ್ನೊಂದಿಗೆ ಮಾಡಿ ಕೊಡುವಿರಾ? ಹಝ಼್ರತ್ ಪೈಗಂಬರ್(ಸ) ಕೇಳಿದರು: ನಿಮ್ಮ ಬಳಿ ಮಹರ್ ಆಗಿ ಕೊಡಲು ಏನಾದರೂ ಇದೆಯಾ? ನಾನು ಹೇಳಿದೆ: ನನ್ನ ಬಳಿ ಕುದುರೆ ಮತ್ತು ಯುದ್ಧಕವಚವಿದೆ. ಹಝ಼್ರತ್ ಪೈಗಂಬರ್(ಸ) ಹೇಳಿದರು: ನಿನಗೆ ಕುದುರೆಯ ಅಗತ್ಯವಿದೆ. ಯುದ್ಧಕವಚವನ್ನು ಮಾರಾಟ ಮಾಡು. ಹೀಗೆ ನಾನು 480 ದಿರ್ಹಮಿಗೆ ನನ್ನ ಯುದ್ಧವಸ್ತ್ರವನ್ನು ಮಾರಾಟ ಮಾಡಿಕೊಂಡು ಮಹರಿನ ಹಣದ ಏರ್ಪಾಡು ಮಾಡಿದೆ. ಹಝ಼್ರತ್ ಪೈಗಂಬರ್(ಸ) ಆ ಹಣದಿಂದ ಒಂದು ಹಿಡಿಯಷ್ಟು ಹಝ಼್ರತ್ ಬಿಲಾಲ್(ರ)ರಿಗೆ ಕೊಡುತ್ತಾ ಸುಗಂಧದ್ರವ್ಯವನ್ನು ಖರೀದಿ ಮಾಡಲು ಹೇಳಿದರು. ಹಝ಼್ರತ್ ಫಾತಿಮಾ(ರ)ರಿಗೆ ಕೊಡಬೇಕಾದ ಉಡುಗೊರೆಗಳನ್ನು ತಯಾರು ಮಾಡಲು ಹಝ್ರತ್ ಪೈಗಂಬರ್(ಸ) ಕೆಲವು ಜನರೊಡನೆ ಹೇಳಿದರು. ಹೀಗೆ ಹಝ಼್ರತ್ ಫಾತಿಮ(ರ)ರಿಗಾಗಿ ಒಂದು ಮಂಚ ಮತ್ತು ಖರ್ಜೂರದ ತೊಗಲಿನಿಂದ ತುಂಬಿಸಲಾದ ಚರ್ಮದ ಒಂದು ತಲೆದಿಂಬನ್ನು ತಯಾರಿಸಲಾಯಿತು. ಹೀಗೂ ಹಖ್‌ಮಹರ್ ಅನ್ನು ಉಪಯೋಗಿಸಬಹುದು. ಕೆಲವರು ಹೇಳುತ್ತಾರೆ ವಿವಾಹವಾದ ನಂತರ ಹಖ್ ಮಹರ್ ನೀಡಲಾಗುವುದಿಲ್ಲ ಎಂದು ಆದರೆ ಅಲ್ಲಿ ಇಂತಹ ಉದಾಹರಣೆಯೂ ಕಾಣಿಸಿಕೊಳ್ಳುತ್ತದೆ ಅಂದರೆ ಹಖ್ ಮಹರ್‌ನಲ್ಲಿಯೇ ಎಲ್ಲಾ ಮದುವೆ ವೆಚ್ಚವೂ ಪೂರೈಸಲಾಗುತ್ತದೆ.

ಒಂದು ವರದಿಯಲ್ಲಿ ಹೀಗಿದೆ: ಈ ವಿವಾಹ ಸಂಬಂಧವನ್ನು ಮಾಡುತ್ತಾ ಹಝ಼್ರತ್ ಪೈಗಂಬರ್(ಸ) ಹಝ಼್ರತ್ ಅಲಿ(ರ)ರೊಡನೆ ಹೀಗೆ ಹೇಳಿದರು: ಹೀಗೆ ಮಾಡಲು ನನ್ನ ಪ್ರಭು ನನಗೆ ಆಜ್ಞಾಪಿಸಿದ್ದಾನೆ. (ಎಂದರೆ, ಹಝ಼್ರತ್ ಫಾತಿಮ(ರ)ರ ವಿವಾಹವನ್ನು ಹಝ಼್ರತ್ ಅಲಿ(ರ)ರೊಂದಿಗೆ ನಡೆಸಲು.)

ರುಖ್ಸತಿಯ (ಮಧುಮಗಳವಿದಾಯದ) ನಂತರ, ಹಝ್ರತ್ ಪೈಗಂಬರ್(ಸ) ಅವರು ಹಝ್ರತ್ ಅಲಿ(ರ) ಅವರಿಗೆ ಹೇಳಿದರು, ಫಾತಿಮಾ ನಿಮ್ಮ ಬಳಿಗೆ ಬಂದಾಗ, ನಾನು ಬರುವವರೆಗೆ ನೀವು ಅವರೊಂದಿಗೆ ಏನೂ ಮಾತನಾಡಬೇಡಿ. ಹಝ್ರತ್ ಅಲಿ(ರ) ಹೇಳುತ್ತಾರೆ ಹಝ್ರತ್ ಫಾತಿಮಾ (ರ.ಅ) ಅವರು ಹಝ್ರತ್ ಉಮ್ಮ ಅಯ್ಮನ್(ರ.ಅ) ರೊಂದಿಗೆ ಬಂದು ಮನೆಯ ಒಂದು ಭಾಗದಲ್ಲಿ ಕುಳಿತುಕೊಂಡರು. ನಾನು ಕೂಡ ಒಂದು ಕಡೆ ಕುಳಿತೆ. ಆಗ ಹಝ್ರತ್ ಪೈಗಂಬರ್(ಸ) ಅವರು ಬಂದು ಹೇಳಿದರು, ನನ್ನ ಸಹೋದರ ಇಲ್ಲಿದ್ದಾನೆಯೇ? ಅದಕ್ಕೆ ಉಮ್ಮ್ ಐಮನ್(ರ) ನಿಮ್ಮ ಸಹೋದರ? ಎಂದು ಹೇಳಿದರು ಮತ್ತು ನೀವು(ಸಲ್ಲಲ್ಲಾಹು ಅಲೈಹಿವ ಸಲ್ಲಮ್) ನಿಮ್ಮ ಪುತ್ರಿಯನ್ನು ಅವರೊಂದಿಗೆ ವಿವಾಹ ನಡೆಸಿದ್ದಾರೆ. ಅವರು ಹೌದು, ಏಕೆಂದರೆ ಅಂತಹ ಸಂಬಂಧದಲ್ಲಿ ಮದುವೆ ನಡೆಯಬಹುದು, ಆದರೆ, ಅವರು ಸ್ವಂತ ಸಹೋದರನಲ್ಲ ಮತ್ತು ಸೋದರಸಂಬಂಧಿಯೊಂದಿಗೆ ನಡೆಯಬಹುದು. ಅವರು ಒಳಗೆ ಬಂದು ಹಝ್ರತ್ ಫಾತಿಮಾ(ರ) ಅವರಿಗೆ, ನನಗೆ ನೀರು ತರಲು ಹೇಳಿದರು. ಹೀಗಾಗಿ ಅವರು ಎದ್ದು ಮನೆಯಲ್ಲಿ ಇದ್ದ ಪಾತ್ರೆಯಲ್ಲಿ ನೀರು ತರುತ್ತಾರೆ. ಅವರು ಆ ನೀರನ್ನು ತೆಗೆದುಕೊಂಡು ಸ್ವಲ್ಪ ಸಮಯ ಬಾಯಿಯಲ್ಲಿ ಇಟ್ಟುಕೊಂಡು ಮತ್ತೆ ಆ ಬಟ್ಟಲಿಗೆ ಹಾಕಿದರು. ನಂತರ ಅವರು ಹಝ್ರತ್ ಫಾತಿಮಾ(ರ) ಅವರಿಗೆ ಹೇಳಿದರು: ಮುಂದಾಗಿರಿ, ಅದಕ್ಕೆ ಅವರು ಮುಂದೆ ಬಂದರು ನಂತರ ಪ್ರವಾದಿಯವರು ಸ್ವಲ್ಪ ನೀರನ್ನು ಅವರ ಮೇಲೆ ಮತ್ತು ಅವರ ತಲೆಯ ಮೇಲೆ ಚಿಮುಕಿಸಿದರು ಮತ್ತು ಪ್ರಾರ್ಥಿಸುವಾಗ ಹೇಳಿದರು, **ಅಲ್ಲಾಹುಮ್ಮ ಇನ್ನೀ ಉಈಝುಹಾ ಬಿಕ ವಝುರ್‍ರಿಯ್ಯತಹಾ ಮಿನಶ್ಶೈತಾನಿರ್‍ರಜೀಮ್** ಓ ಅಲ್ಲಾಹನೇ! ನಾನು ಇವರಿಗೆ ಮತ್ತು ಇವರ ಮಕ್ಕಳಿಗೆ ಸೈತಾನದಿಂದ ನಿನ್ನ ಆಶ್ರಯದಲ್ಲಿ ನೀಡುತ್ತೇನೆ.

ನಂತರ ಅವರು(ಸ) ಹೇಳಿದರು: ಇನ್ನೊಂದು ಬದಿಗೆ ತಿರುಗಿ. ಅವರು ಇನ್ನೊಂದು ಕಡೆಗೆ ತಿರುಗಿದಾಗ, ಹಝ್ರತ್ ಪೈಗಂಬರ್(ಸ) ರವರು ಅವರ ಭುಜಗಳ ನಡುವೆ ನೀರನ್ನು ಚಿಮುಕಿಸಿದರು. ನಂತರ ಅವರು ಹಝ್ರತ್ ಅಲಿಯವರೊಂದಿಗೆ ಅದೇ ರೀತಿ ಮಾಡಿದರು. ಅವರು ಹಝ್ರತ್ ಅಲಿ(ರ) ಅವರಿಗೆ ಹೇಳಿದರು, ನೀವು ಸರ್ವಶಕ್ತನಾದ ಅಲ್ಲಾಹನ ಹೆಸರಿನೊಂದಿಗೆ ಹಾಗೂ ಅನುಗ್ರಹದೊದಿಗೆ ನಿಮ್ಮ ಕುಟುಂಬಕ್ಕೆ ಹೋಗಿ.

ಅಂತೆಯೇ, ಹಝ಼್ರತ್ ಅಲಿ(ರ) ರವರು ವರದಿ ಮಡುತ್ತಾರೆ: ಹಝ಼್ರತ್ ಪೈಗಂಬರ್(ಸ) ಒಂದು ಪಾತ್ರೆಯಲ್ಲಿ ವುಝ಼ೂ ಮಾಡಿದರು ಮತ್ತು ಆ ನೀರನ್ನು ಹಝ಼್ರತ್ ಫಾತಿಮ(ರ) ಮತ್ತು ಹಝ಼್ರತ್ ಅಲಿ(ರ)ರ ಮೇಲೆ ಸಿಂಪಡಿಸುತ್ತಾ ಹೀಗೆ ದುಆ ಮಾಡಿದರು: **ಅಲ್ಲಾಹುಮ್ಮ ಬಾರಿಕ್ ಫೀಹಿಮಾ ವ ಬಾರಿಕ್ ಅಲೈಹಿಮಾ ವಬಾರಿಕ್ ಲಹುಮಾ ನಸ್‌ಲಹುಮಾ.** ಅರ್ಥ: ಹೇ ನನ್ನ ಅಲ್ಲಾಹ್, ನೀನು ಅವರಿಬ್ಬರ ಸಂಬಂಧದಲ್ಲಿ ಅನುಗ್ರಹವನ್ನು ಉಂಟುಮಾಡು, ಅವರ ಇತರರೊಂದಿಗೆ ಇರಿಸುವ ಸಂಬಂಧದಲ್ಲಿ ಅನುಗ್ರಹವನ್ನು ಇರಿಸು. ಅವರ ಸಂತಾನಗಳಲ್ಲಿ ಅನುಗ್ರಹವನ್ನು ಇರಿಸು.

ಹಝ್ರತ್ ಆಯಿಷಾ(ರ) ಮತ್ತು ಹಝ್ರತ್ ಉಮ್ಮು ಸಲಮಾ(ರ) ವರದಿ ಮಾಡುತ್ತಾರೆ: ಹಝ್ರತ್ ಪೈಗಂಬರ್(ಸ) ಅವರು ನಮಗೆ ಹೇಳಿದರು: ನಾವು ಫಾತಿಮಾ ಅವರನ್ನು ಹಝ್ರತ್ ಅಲಿ(ರ) ಅವರ ಬಳಿಗೆ ಕರೆದೊಯ್ಯುವವರೆಗೆ ಅವರನ್ನು ಸಿದ್ಧಪಡಿಸಿರಿ. ಆದ್ದರಿಂದ ನಾವು ಮನೆಯ ಕಡೆಗೆ ಗಮನಿಸಿದೆವು. ನಾವು ಅದನ್ನು ಬತ್‌ಹಾ ಪ್ರದೇಶದಿಂದ ಮೃದುವಾದ ಜೇಡಿಮಣ್ಣಿನಿಂದ ಲೇಪಿಸಿದೆವು. ನಾವು ಮೊದಲು ಮನೆಯನ್ನು ಸರಿಪಡಿಸಿದೆವು ನಂತರ ಎರಡು ದಿಂಬುಗಳನ್ನು ತಾಳೆ ನಾರುಗಳಿಂದ ತುಂಬಿಸಿ ಅದನ್ನು ಸಿದ್ಧಪಡಿಸಿದೆವು. ನಾವು ಅದನ್ನು ನಮ್ಮ ಕೈಗಳಿಂದ ಸಿದ್ಧಗೊಳಿಸಿದ್ದೆವು. ನಂತರ ನಾವು ತಿನ್ನಲು ಖರ್ಜೂರ ಮತ್ತು ದ್ರಾಕ್ಷಿಗಳನ್ನು ಹಾಗೂ ಕುಡಿಯಲು ಸಿಹಿನೀರನ್ನು ಇರಿಸಿದೆವು. ಮತ್ತು ನಂತರ ಮರದ ಒಂದು ತುಂಡನ್ನು ತೆಗೆದುಕೊಂಡು ಅದರ ಮೇಲೆ ಬಟ್ಟೆ ಇತ್ಯಾದಿಗಳನ್ನು ನೇತುಹಾಕಲು ಮತ್ತು ಅದರ ಮೇಲೆ

*(ಪುಟ–07ರಲ್ಲಿ ಮುಂದುವರಿಸಲಾಗಿದೆ)*

**ಇಸ್ಲಾಮ್ ಮತ್ತು ಅಹ್ಮದಿಯ್ಯತ್‌ನ ಮಾಹಿತಿಗಾಗಿ ನಮ್ಮನ್ನು ಸಂಪರ್ಕಿಸಿ:**
**NATIONAL TOLL FREE : 1800–103–2131**
**ಸಮಯ: ಬೆಳಿಗ್ಗೆ 08:30 ಯಿಂದ ರಾತ್ರಿ 10:30ಯವರೆಗೆ**
**(ಶುಕ್ರವಾರ ರಜೆ)**

Printed & Published by: Jameel Ahmed Nasir on behalf of Nigran Board of Badar. Name of Owner: Nigran Board of Badar. And printed at Fazle-Umar Printing Press. Harchowal Road, Qadian, Distt. Gurdaspur-143516, Punjab. And published at office of the Weekly Badar Mohallah - Ahmadiyya, Qadian Distt. Gsp-143516, Punjab. India. Editor: Tariq Ahmed Idris.